ಸಂಕೇಶ್ವರ : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧನ ವಿದ್ಯಾರ್ಥಿ :
ನಾಗಲಿಂಗ ರಾ. ಬಡಿಗೇರ

ಮಾರ್ಗದರ್ಶಕರು
ಡಾ. (ಶ್ರೀಮತಿ.) ಸ್ಮಿತಾ ಬಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಬೆಳಗಾವಿ

ಚರಿತ್ರೆ ವಿಭಾಗ
ಶ್ರೀ ಜಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ತಾ. ರಾಯಬಾಗ

ಚರಿತ್ರ ಅಧ್ಯಯನ ವಿಭಾಗ

ಸಂಯೋಜನೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

೨೦೧೧

ಸಂಕೇಶ್ವರ ; ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧನ ವಿದ್ಯಾರ್ಥಿ :
ನಾಗಲಿಂಗ ರಾ. ಬಡಿಗೇರ

ಮಾರ್ಗದರ್ಶಕರು :
ಡಾ. (ಶ್ರೀಮತಿ.) ಸ್ಮಿತಾ ಪಿ. ಸುರೇಬಾನಕರ
ಮುಖ್ಯಸ್ಥರು, ಇತಿಹಾಸ ವಿಭಾಗ
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಬೆಳಗಾವಿ

ಚರಿತ್ರೆ ವಿಭಾಗ
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ತಾ. ರಾಯಬಾಗ

ಚರಿತ್ರೆ ಅಧ್ಯಯನ ವಿಭಾಗ
ಸಂಯೋಜನೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬

೨೦೧೧

ಪ್ರಮಾಣ ಪತ್ರ

ಸಂಕೇಶ್ವರ ; ಚಾರಿತ್ರಿಕ ಅಧ್ಯಯನ : ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. (ಶ್ರೀಮತಿ) ಸ್ಮಿತಾ ಪಿ. ಸುರೇಬಾನಕರ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ, ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಗಾಗಿ ಸಲ್ಲಿಸಿರುವುದಿಲ್ಲ ಮತ್ತು ಈ ಮೊದಲು ಇದನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 10-6-2011

ನಾಗಲಿಂಗ ರಾ. ಬಡಿಗೇರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ.

ದೃಢೀಕರಣ ಪತ್ರ

ನಾಗಲಿಂಗ ರಾ. ಬಡಿಗೇರ ಇವರು **ಸಂಕೇಶ್ವರ : ಚಾರಿತ್ರಿಕ ಅಧ್ಯಯನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಗಾಗಿ ಸಲ್ಲಿಸಿರುವುದಿಲ್ಲ ಮತ್ತು ಇದು ಈ ಮೊದಲು ಎಲ್ಲಿಯೂ ಇಡಿಯಾಗಿಯಾಗಲಿ ಬಿಡಿಯಾಗಿಯಾಗಲಿ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 10-6-2011

ಡಾ. (ಶ್ರೀಮತಿ.) ಸ್ಮಿತಾ ಪಿ. ಸುರೇಬಾನಕರ

ಮುಖ್ಯಸ್ಥರು, ಇತಿಹಾಸ ವಿಭಾಗ,
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಬೆಳಗಾವಿ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಸ್ವರೂಪ

ಯಾವುದೇ ಒಂದು ಪ್ರದೇಶದ ಇತಿಹಾಸದ ಸರಿಯಾದ ಮಾಹಿತಿಪಡೆಯಲು ಆ ಪ್ರದೇಶದಲ್ಲಿ ಲಭ್ಯವಿರುವ ಎಲ್ಲ ಇತಿಹಾಸ ಮೂಲ ಆಕರಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಈ ಆಕರಗಳಲ್ಲಿ ಶಾಸನಗಳು, ಸ್ಮಾರಕಗಳು, ಸಾಹಿತ್ಯಿಕ ಕೃತಿಗಳು, ಮುಂತಾದ ಮೂಲ ಆಕಾರಗಳನ್ನು ಅಧ್ಯಯನಿಸಿ ವಾಸ್ತವಿಕ ಸಂಗತಿಗಳನ್ನು ಪರಿಶೀಲಿಸಬೇಕಾಗುತ್ತದೆ. ಇಂತಹ ಮೂಲ ಆಕರಗಳ ವೈಜ್ಞಾನಿಕ ಅಧ್ಯಯನದಿಂದ ಒಂದು ನಿರ್ಧಿಷ್ಟ ಪ್ರದೇಶದ ಇತಿಹಾಸವನ್ನು ಸರಿಯಾಗಿ ಅಧ್ಯಯನ ಮಾಡಲು ಸಹಾಯವಾಗುತ್ತದೆ.

ಕನ್ನಡ ನಾಡು ಸುಮಾರು ೨೦೦೦ ವರ್ಷಗಳಿಗೂ ಹೆಚ್ಚು ಕಾಲ ಸುದೀರ್ಘವಾದ ಐತಿಹಾಸಿಕ ಪರಂಪರೆಯನ್ನು ಒಳಗೊಂಡಿರುತ್ತದೆ. ಈ ಅವಧಿಯಲ್ಲಿ ಕಲೆ ಮತ್ತು ವಾಸ್ತು ಶಿಲ್ಪ, ಶಿಲ್ಪಕಲೆ, ಸಾಹಿತ್ಯ ಸಂಸ್ಕೃತಿಗಳು ಸಮೃದ್ಧವಾಗಿ ಬೆಳೆದು ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿದೆ. ಯಾವುದೇ ಒಂದು ನಾಡಿನ ನಾಗರಿಕತೆಯನ್ನು ತಿಳಿಯಲು ಅದರ ಕುಶಲಕಲಾ ಪರಂಪರೆಯ ಸ್ವರೂಪವನ್ನು ಮಾನದಂಡವಾಗಿ ನೋಡಬಹುದಾಗಿದೆ. ವಾಸ್ತುಶಿಲ್ಪ ಇವು ಕುಶಲಕಲೆಯಾಗಿದ್ದು ಪ್ರಾಚೀನ ಇತಿಹಾಸದ ಸ್ವರೂಪ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತವೆ. ಪ್ರತಿಯೊಂದು ವಾಸ್ತುಶಿಲ್ಪವು ಉದ್ದೇಶಿತ ಪ್ರತಿಬಿಂಬಗಳ ಸೃಷ್ಟಿಯಾಗಿವೆ. ಇವು ಪ್ರಾಚೀನ ಜನವಸತಿ ನೆಲೆಗಳ ಶಿಲೋಪಕರಣಗಳ ಕುರಿತು ಮತ್ತು ಸ್ಮಾರಕಗಳಾದ ದೇವಾಲಯಗಳು, ಮಠಗಳು, ಕೋಟೆಗಳು, ಹಾಗೂ ಮುಂತಾದವುಗಳ ಸ್ವರೂಪದಲ್ಲಿ ನಿರ್ಮಿತಗೊಂಡಿರುತ್ತವೆ. ಇವೆಲ್ಲವುಗಳ ಅಧ್ಯಯನದಿಂದ ಒಂದು ಸ್ಥಳದ ಪ್ರಾಚೀನತೆಯನ್ನು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಇತ್ಯಾದಿ ಸ್ಥಿತಿಗತಿಗಳನ್ನು ತಿಳಿಯುವುದಾಗಿದೆ.

ಉದ್ದೇಶ:

ಕರ್ನಾಟಕದ ಬೆಳಗಾವಿ ಜಿಲ್ಲೆಯು ಭವ್ಯ ಇತಿಹಾಸವನ್ನು ಮತ್ತು ಪರಂಪರೆಯನ್ನು ಹೊಂದಿದ ನಾಡಾಗಿರುತ್ತದೆ. ಬೆಳಗಾವಿಯು ಶಾತವಾಹನರ ಆಡಳಿತಕ್ಕೆ ಒಳಪಟ್ಟಿತ್ತೆಂಬುದು ೧೯೬೫ ರಲ್ಲಿ ವಡಗಾಂವ-ಮಾಧವಪುರದಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಅವು ಶ್ರೀ ಸಾತಕರ್ಣಿ, ವಸಿಷ್ಠಪುತ್ರ ಪುಳಮಾಯಿ, ಮುಂತಾದವರ ನಾಣ್ಯಗಳಾಗಿರುತ್ತವೆ. ಕದಂಬರ

ಕಾಲದಲ್ಲಿ ಅವರ ಆಡಳಿತಕ್ಕೆ ಒಳಪಟ್ಟಿದ್ದು ಇವರ ಕಾಲದಲ್ಲಿ ಈ ಜಿಲ್ಲೆಯ ಹಲಸಿಯು (ಖಾನಾಪೂರ ತಾಲೂಕ) ಅವರ ಎರಡನೆಯ ರಾಜಧಾನಿಯಾಗಿತ್ತು. ಬಾದಾಮಿಯ ಚಾಳುಕ್ಯರು ಈ ಪ್ರದೇಶವನ್ನು ಆಳ್ವಿಕೆ ನಡೆಸಿದುದರ ಬಗ್ಗೆ ಎಕ್ಕೇರಿ ಶಾಸನ ಮತ್ತು ಗೊಡಚಿ ಹಾಗೂ ಹೂಲಿಯ (ಸವದತ್ತಿ ತಾಲೂಕ) ತಾಮ್ರಪಟ ಶಾಸನಗಳು ಬೆಳಕು ಚೆಲ್ಲುತ್ತವೆ. ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದ ರಟ್ಟರು ಈ ಪ್ರದೇಶವನ್ನು ಆಳಿದರು. ಸವದತ್ತಿಯು ಇವರ ರಾಜಧಾನಿಯಾಗಿದ್ದರಿಂದ ಇವರನ್ನು ಸವದತ್ತಿಯ ರಟ್ಟರೆಂದು ಕರೆಯಲಾಗಿದೆ. ಕಲ್ಯಾಣದ ಚಾಳುಕ್ಯರು ಈ ಜಿಲ್ಲೆಯನ್ನು ಆಳಿದವರಲ್ಲಿ ಪ್ರಮುಖರಾಗಿರುತ್ತಾರೆ. ಬೆಳಗಾವಿ ಜಿಲ್ಲೆಯ ಎಲ್ಲ ಕಡೆಗಳಲ್ಲಿ ಸವದತ್ತಿಯ ರಟ್ಟರು ಮತ್ತು ಕಲ್ಯಾಣದ ಚಾಳುಕ್ಯರು ನಿರ್ಮಿಸಿದ ದೇವಾಲಯಗಳು ದೊರೆಯುತ್ತವೆ. ಉದಾ: ಸೊಗಲದ ಸೋಮೇಶ್ವರ ದೇವಾಲಯ, ಸಂಕೇಶ್ವರದ ಶಂಕರಲಿಂಗ ದೇವಾಲಯ, ಲಕ್ಷ್ಮೀವೀರನಾರಾಯಣ ದೇವಾಲಯಗಳು, ಪಾರ್ಶ್ವನಾಥನ ಬಸದಿ, ಮುಂತಾದವುಗಳಾಗಿವೆ.

ಈ ಜಿಲ್ಲೆಯು ದೆಹಲಿ ಸುಲ್ತಾನರು, ಬಹಮನಿ ಸುಲ್ತಾನರು, ವಿಜಯನಗರದ ಅರಸರು, ಆದಿಲಷಾಹಿಗಳ ಆಡಳಿತಕ್ಕೆ ಒಳಪಟ್ಟಿರುವದು. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿಮಲ್ಲಮ್ಮ ಮುಂತಾದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ ಪಾತ್ರವಗಳು ಈ ಜಿಲ್ಲೆಯ ಇತಿಹಾಸವನ್ನು ಇನ್ನಷ್ಟು ಶ್ರೀಮಂತವಾಗಿಸಿವೆ.

೧೯೨೪ ರಲ್ಲಿಯ ಬೆಳಗಾವಿಯ ಕಾಂಗ್ರೆಸ ಅಧಿವೇಶನವು ದೇಶದ ಚರಿತ್ರೆಯಲ್ಲಿಯೇ ಐತಿಹಾಸಿಕವಾಗಿದೆ. ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ ಪ್ರಥಮ ಹಾಗೂ ಕೊನೆಯ ಅಧಿವೇಶನವಾಗಿತ್ತು. ಇದರಲ್ಲಿ ಹುಯಿಲಗೋಳ ನಾರಾಯಣರು, ಆಲೂರವೇಂಕಟರಾವರು, ಮುದವಿಡುಕೃಷ್ಣರಾಯರು, ಗಂಗಾಧರರಾವ ದೇಶಪಾಂಡೆಯವರು ಮುಂತಾದ ಕನ್ನಡ ನಾಡಿನ ಮಹಾನ ನಾಯಕರು ಭಾಗವಹಿದ್ದರು ಈ ವೇಳೆಯಲ್ಲಿ ಶ್ರೀ ಅಪ್ಪಣ್ಣಗೌಡ ಪಾಟೀಲರು ತಮ್ಮ ಕ್ರಾಂತಿದಳದ ಸದಸ್ಯರೊಂದಿಗೆ ಭಾಗವಹಿಸಿದ್ದರು ಇದೇ ಸಂದರ್ಭದಲ್ಲಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಹುಯಿಲಗೋಳ ನಾರಾಯಣರಾವರು ಸ್ವಾರಸ್ಯವಾಗಿ ಹಾಡಿದರು. ಈ ಅಧಿವೇಶನದಲ್ಲಿ ಸುತ್ತಲಿನ ಪ್ರದೇಶಗಳಲ್ಲಿನ ಜನರು ಸಾಕಷ್ಟು ಸಂಖ್ಯೆಯಲ್ಲಿ ಸೇರಿ, ಐತಿಹಾಸಕತೆಯನ್ನು ಮೆರೆದಿರುವರು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕವು ಪ್ರಾಚೀನ ಕಾಲದ ವೈಭವವನ್ನು ಒಳಗೊಂಡಿರುತ್ತದೆ. ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಬಹಮನಿ ಸುಲ್ತಾನರು, ಬಿಜಾಪುರದ ಆದಿಲಶಾಹಿಗಳು ಆಳ್ವಿಕೆ ನಡೆಸಿರುವರು. ಇವರ ಕಾಲದಲ್ಲಿ

ಕಲೆ ಮತ್ತು ವಾಸ್ತು ಶಿಲ್ಪದ ದೃಷ್ಟಿಯಿಂದ ಬಹಳ ಮಹತ್ವದ ಸ್ಥಾನವನ್ನು ಪಡೆದಿರುತ್ತದೆ. ಈ ಪ್ರದೇಶವು ಹಿಂದೂ ಮತ್ತು ಮುಸ್ಲಿಂ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟು ಎರಡೂ ಸಮುದಾಯಗಳ ಕಲೆಯ ಸಮನ್ವಯತೆಯ ತವರೂರು ಆಗಿದೆ. ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಪ್ರದೇಶದಲ್ಲಿ ಸವದತ್ತಿಯ ರಟ್ಟರು, ಕಲ್ಯಾಣದ ಚಾಳುಕ್ಯರು, ಬಿಜಾಪುರದ ಆದಿಲಶಾಹಿಗಳು ಆಡಳಿತಕ್ಕೆ ಇಲ್ಲಿ ದೊರೆತಿರುವ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಹುಕ್ಕೇರಿಯು ೧೨ನೇ ಶತನಮಾನದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ರಂಗದಲ್ಲಿ ಅಗಾಧವಾದ ಕ್ರಾಂತಿಗೆ ಕಾರಣರಾದ ಬಸವಣ್ಣನವರ ಪ್ರಭಾವ ಬೀರಿರುವದು ತಿಳಿಯುತ್ತದೆ.

ಹುಕ್ಕೇರಿ ತಾಲೂಕಿನ ನಗರ ಮತ್ತು ಪಟ್ಟಣಗಳಲ್ಲಿ ಒಂದಾದ ಮತ್ತು ಪ್ರಸ್ತುತ ಪ್ರಬಂಧದ ಕೇಂದ್ರವಿಷಯವಾದ ಸಂಕೇಶ್ವರವು ಐತಿಹಾಸಿಕ ಪ್ರಾಮುಖ್ಯತೆಯನ್ನು ಒಳಗೊಂಡಿರುತ್ತದೆ. ಈ ಪ್ರದೇಶವು ಪ್ರಾಚೀನತೆಯಿಂದಲೂ ತನ್ನ ವಿಶೇಷತೆಯನ್ನು ಬೆಳೆಸಿಕೊಂಡು ಬಂದಿರುವದು ಕಂಡುಬರುತ್ತದೆ. ಈ ಪಟ್ಟಣದ ನೈರುತ್ಯ ದೆಸೆಯಲ್ಲಿ ಹಿರಣ್ಯಕೇಶಿ ನದಿಯು ಹರಿಯುತ್ತಿದ್ದು, ಈ ಭಾಗದ ಕೃಷಿಕರಿಗೆ ವರದಾನವಾಗಿದೆ. ಅಷ್ಟೇ ಅಲ್ಲದೇ ನೈರುತ್ಯ ಮಾನಸೂನ ಮಳೆಯಾಗುವುದರಿಂದ ಅರೆಮಲೆನಾಡು ಎಂಬುದಾಗಿ ತಿಳಿಯುತ್ತದೆ. ಇದರಿಂದ ಭೌಗೋಳಿಕವಾಗಿ ಫಲವತ್ತತೆಯ ಭೂಮಿಯನ್ನು ಒಳಗೊಂಡಿರುತ್ತದೆ. 'ಸಾಂಖ್ಯೇಶ್ವರ ಮಹಾಪುರಾಣ'ದ ಉಲ್ಲೇಖದಂತೆ ಸಂಕೇಶ್ವರದ ಹಿನ್ನೆಲೆಯನ್ನು ವರ್ಣಿಸಲಾಗಿದೆ.

ಸಂಕೇಶ್ವರವು ವಿಶೇಷವಾಗಿ ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಬಹಮನಿಯ ಸುಲ್ತಾನರು, ಬಿಜಾಪುರದ ಆದಿಲಶಾಹಿಗಳು, ಮರಾಠರು ಮತ್ತು ಪೇಶ್ವೆಯವರ ಆಡಳಿತಕ್ಕೆ ಒಳಪಟ್ಟಿರುವದು. ಸಾಂಸ್ಕೃತಿಕವಾಗಿ ಎಲ್ಲ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ, ಇತ್ಯಾದಿ ಕ್ಷೇತ್ರಗಳಲ್ಲಿ ಗಮನಿಯ ಸಾಧನೆ ಮತ್ತು ಸುಧಾರಣೆಗಳನ್ನು ಕೈಗೊಂಡಿರುವ ವಿಷಯವನ್ನು ತಿಳಿಸಲಾಗಿದೆ. ೧೨ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ರಂಗದಲ್ಲಿನ ಕ್ರಾಂತಿಗೆ ಕಾರಣರಾದ ಬಸವಣ್ಣನವರ ವಂಶಜರು ಬಾಳಿ ಬದುಕಿರುವ ನಾಡಾಗಿರುತ್ತದೆ. ಬಸವೇಶ್ವರರ ಅಣ್ಣನಾದ ದೇವರಾಜನ ಮೊಮ್ಮಗನು ಹಾಲಬಸವೀಶ ಎಂಬುವವರಿಗೆ ಯಾದವರ ಅರಸನಾದ ಕನ್ನರದೇವನ ಮಂತ್ರಿಯಾದ ಚೌಡಿಶೆಟ್ಟಿಯು ಕವಿಳಾಸಪುರ ಪ್ರದೇಶವನ್ನು ದಾನವನ್ನಾಗಿ ನೀಡಿದ ವಿಷಯವನ್ನು ಕ್ರಿ.ಶ.೧೨೬೦ ಅರ್ಜುನವಾಡ ಶಾಸನವು ತಿಳಸುತ್ತದೆ. ವಿವಿಧ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟು ಸರ್ವಧರ್ಮಗಳ ಸಹಿಷ್ಣುತೆಯನ್ನು ತಿಳಿಸುವ ಉದ್ದೇಶವಾಗಿದೆ. ಅವರ ಕಾಲದಲ್ಲಿನ

ಸಾಧನೆಗಳನ್ನು ವರ್ಣಿಸಿ ಹಿರಿಮೆಯನ್ನು ವ್ಯಕ್ತಗೊಳಿಸಲಾಗಿರುವದು. ಅನುವಂಶಿಯ ಅರಸೊತ್ತಿಗೆ, ಮತ್ತು ಅವರ ಸೈನಿಕ ಕಾರ್ಯಾಚರಣೆಗಳ ಚರಿತ್ರೆಯನ್ನು ತಿಳಿಸುವದು ಈ ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶವಾಗಿರುತ್ತದೆ.

'ಸಂಕೇಶ್ವರ; ಚಾರಿತ್ರಿಕ ಅಧ್ಯಯನ' ಈ ಪ್ರಬಂಧವು ಒಂದು ಪ್ರದೇಶದ ಭೌಗೋಳಿಕತೆಗೆ ಸಂಬಂಧಿಸಿದ ಅಧ್ಯಯನ ಮಾಡುವದಾಗಿದೆ. ಭೌಗೋಳಿಕವಾಗಿ ಒಂದು ನೆಲೆಯ ಅಥವಾ ಪ್ರದೇಶದ ವಾಸ್ತವಿಕ ಅಂಶಗಳನ್ನು ತಿಳಿಯಲು ಅಲ್ಲಿನ ಪುರಾವೆಗಳು ಮುಖ್ಯ ಆಧಾರಗಳಾಗಿವೆ. ವ್ಯವಸಾಯ ಮತ್ತು ಬೆಳೆಗಳು, ವ್ಯಾಪಾರ ಮತ್ತು ವಾಣಿಜ್ಯ ಇವುಗಳ ಆಧಾರವಾಗಿ ವಿಶ್ಲೇಷಣೆಯನ್ನು ಪಡೆದು ಸಂಕೇಶ್ವರವು ವಾಣಿಜ್ಯ ನಗರ ಎಂಬುದಾಗಿ ತಿಳಿಯುತ್ತದೆ. ನೈಸರ್ಗಿಕವಾಗಿ ಸಂಪತ್ತಿನಿಂದ ಕೂಡಿರುವ ನೆಲೆಯಾಗಿರುವುದು. ಸಂಕೇಶ್ವರ ಪಟ್ಟಣವು ಹುಕ್ಕೇರಿ ತಾಲೂಕಿನ ಪಶ್ಚಿಮ ಭಾಗದಲ್ಲಿದೆ. ಈ ಪಟ್ಟಣವು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬದಿಯಲ್ಲಿ ಹಾಗೂ ಹಿರಣ್ಯಕೇಶಿ ನದಿಯ ದಡದಲ್ಲಿ ಇರುತ್ತದೆ. ಪಶ್ಚಿಮಘಟ್ಟವು ಚಾಚಿಕೊಂಡಿರುವದರಿಂದ ನೈರುತ್ಯ ಮಾನ್ಸೂನ ಮಳೆಯು ಹೆಚ್ಚಾಗಿ ಬಿಳುತ್ತದೆ. 'ಸಾಂಖ್ಯೇಶ್ವರ ಮಹಾಪುರಾಣ'ದಲ್ಲಿ ಸಂಕೇಶ್ವರದ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿರುವುದನ್ನು ತಿಳಿಸಲಾಗಿದೆ.

ಸಂಕೇಶ್ವರ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲಿ ಕಲ್ಯಾಣ ಚಾಳುಕ್ಯರು, ಸವದತ್ತಿಯ ರಟ್ಟರು, ದೇವಗಿರಿಯ ಯಾದವರು, ದೆಹಲಿ ಸುಲ್ತಾನರು, ಬಹಮನಿ ಸುಲ್ತಾನರು, ಬಿಜಾಪುರದ ಆದಿಲಷಾಹಿಗಳು, ಮರಾಠಾ ಮತ್ತು ಪೇಶ್ವೆಯವರು ಆಳ್ವಿಕೆ ನಡೆಸಿರುವದು ಕಂಡುಬರುತ್ತದೆ. ಇವರೆಲ್ಲರ ಆಳ್ವಿಕೆಯಲ್ಲಿ ಈ ಭಾಗವು ವಿಶೇಷ ಅಸ್ತಿತ್ವವನ್ನು ಪಡೆದಿರುವದನ್ನು ಶಾಸನಗಳಲ್ಲಿ ತಿಳಿಯುವದಾಗಿದೆ. ವಿಭಿನ್ನ ಅರಸರ ಆಳ್ವಿಕೆಯಿಂದ ಐತಿಹಾಸಿಕವಾದ ಕಟ್ಟಡಗಳನ್ನು ಒಳಗೊಂಡಿರುತ್ತದೆ. ಶೈವ ವೈಷ್ಣವ, ಜೈನ ಮತ್ತು ಇಸ್ಲಾಂ ಧರ್ಮಿಯರು ತಮ್ಮ ಪ್ರಭಾವವನ್ನು ಈ ಭಾಗದಲ್ಲಿ ಪ್ರಚಾರಗೊಂಡಿರುವುದು ತಿಳಿಯುತ್ತದೆ. ಈ ಅಧ್ಯಯನದಲ್ಲಿ ಇವುಗಳ ಕುರಿತು ವಿವರಣಾತ್ಮಕವಾಗಿ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ೧೨ನೇ ಶತಮಾನದಲ್ಲಿ ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ರಂಗದಲ್ಲಿ ಕ್ರಾಂತಿಗೆ ಕಾರಣರಾದ ಬಸವಣ್ಣವರ ವಂಶಜರು ಈ ಭಾಗದಲ್ಲಿ ಬಾಳಿ ಬದುಕಿದರು ಎಂಬುದಾಗಿ ಅರ್ಜುನವಾಡ (ಕವಿಳಾಸಪುರ) ಶಾಸನದಲ್ಲಿ ತಿಳಿಯುತ್ತದೆ. ಈ ಶಾಸನವು ಬಸವಣ್ಣನವರ ಅಣ್ಣನಾದ ದೇವರಾಜನ ಮೊಮ್ಮಗನಾಗಿರುವ ಹಾಲಬಸವೀಶ ಎಂಬುವನಿಗೆ ಯಾದವರ ಕನ್ನರ ದೇವನ ಮಂತ್ರಿಯಾದ ಚೌಡಿ ಶೆಟ್ಟಿಯು ಈ

ಕವಿಳಾಸಪುರ ಎಂಬ ಪ್ರದೇಶವನ್ನು ದಾನವಾಗಿ ನಿಡಿರುವ ವಿಷಯವನ್ನು ತಿಳಿಯುವದಾಗಿದೆ.

ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಸಂಕೇಶ್ವರವು ಸಾಂಸ್ಕೃತಿಕವಾಗಿ ಬೆಳೆದುಬಂದಿರುವದು ಕಂಡುಬರುತ್ತದೆ. ರಾಜಕೀಯ, ಸಾಮಾಜಿ, ಆರ್ಥಿಕ, ಧಾರ್ಮಿಕ ಹಾಗೂ ಕಲೆ ಮತ್ತು ವಾಸ್ತುಶಿಲ್ಪದಿಂದ ಅವರ ಸ್ಪಷ್ಟ ಚಿತ್ರಣಗಳನ್ನು ತಿಳಿಯಪಡಿಸುವದಾಗಿದೆ.

ಸಂಕೇಶ್ವರವು ಸ್ವಾತಂತ್ರ್ಯ ಪೂರ್ವದ ಹೋರಾಟಗಳಲ್ಲಿ ಮತ್ತು ಸಾತಂತ್ರ್ಯ ನಂತರದ ಸಹಕಾರಿ ರಂಗದಲ್ಲಿ ಗುರುತಿಸಿಕೊಂಡಿರುವದು. ಇಲ್ಲಿನ ಶ್ರೀ ಅಪ್ಪಣ್ಣಗೌಡ ಪಾಟೀಲರು ಮತ್ತು ಎಂ. ಪಿ. ಪಾಟೀಲರು ಅಂದಿನ ಮುಂಬಯಿ ಪ್ರಾಂತ್ಯದ ಆಳ್ವಿಕೆಯಲ್ಲಿ ಪ್ರಮುಖ ಹೋರಾಟಗಾರರಾಗಿದ್ದರು. ಇವರ ಮೇಲೆ ಗಾಂಧಿಜಿ ಮತ್ತು ತಿಲಕರ ಪ್ರಭಾವ ಜೀರಿತ್ತು. ಇದರಿಂದ ರಾಷ್ಟ್ರಪ್ರೇಮಕ್ಕಾಗಿ ತಮ್ಮನ್ನು ತೊಡಗಿಸಿಕೊಂಡು ಚಳುವಳಿಗಿಳಿದರು. ಅಸಹಕಾರ ಚಳುವಳಿ, ಸ್ವದೇಶಿ ಚಳುವಳಿ, ಉಪ್ಪಿನ ಸತ್ಯಾಗ್ರಹ, ಭಾರತ ಬಿಟ್ಟು ತೊಲಗಿ (ಚಲೇಜಾವ ಚಳುವಳಿ) ಇಂತಹ ಹೋರಾಟಗಳಲ್ಲಿ ಈ ಭಾಗದ ಜನರನ್ನು ಸಂಘಟಿಸಿ ಹೋರಾಡಿರುವದು ತಿಳಿಯುತ್ತದೆ. ಅಲ್ಲದೇ ಅನೇಕ ಜಾರಿ ಬಂಧನಕ್ಕೊಳಗಾಗಿ ಕಾರಾಗೃಹ ವಾಸಿಗಳಾಗಿ ಬಿಡುಗಡೆಯಾಗಿರುವದು ಕಂಡುಬರುತ್ತದೆ. ಈ ರೀತಿಯಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ತೊಡಗಿಸಿಕೊಂಡು ಈ ಭಾಗದಲ್ಲಿ ಜನಪ್ರೀಯರಾಗಿರುವರು.

ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುವ ಕಲೆ ಮತ್ತು ವಾಸ್ತುಶಿಲ್ಪವನ್ನು ಅಧ್ಯಯನಮಾಡಲಾಗಿದೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ ರಚನೆಗೊಂಡಿರುವ ಶಂಕರಲಿಂಗ ದೇವಾಲಯ, ಲಕ್ಷ್ಮೀನಾರಾಯಣ ದೇವಾಲಯ, ಮತ್ತು ಪಾರ್ಶ್ವನಾಥ ಬಸದಿ ಪ್ರಮುಖವಾಗಿವೆ. ಇವು ಶೈವ, ವೈಷ್ಣವ, ಜೈನ ಪಂಥಗಳ ವಿಶೇಷತೆಯನ್ನು ಎತ್ತಿತೋರುವ ಸ್ಮಾರಕಗಳಾಗಿವೆ. ಅಂದು ಇವುಗಳ ಪ್ರಭಾವವು ಹೆಚ್ಚಾಗಿದ್ದು ಅಸ್ತಿತ್ವದಲ್ಲಿರುವುದನ್ನು ಕಾಣುವುದಾಗಿದೆ. ಹೀಗೆ ಈ ಅಧ್ಯಯನದಲ್ಲಿ ಸಂಕೇಶ್ವರದ ಐತಿಹಾಸಿಕ ಹಿನ್ನೆಲೆಯನ್ನು ಅನುಸರಿಸಿ ಸಮಗ್ರ ಚಿತ್ರಣವನ್ನು ಒದಗಿಸುವ ಪ್ರಯತ್ನವನ್ನು ಮಾಡಲಾಗಿರುತ್ತದೆ.

ಸಂಕೇಶ್ವರದ ಪ್ರದೇಶವು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಬಹುಮುಖ್ಯ ಪಾತ್ರವಹಿಸಿರುತ್ತದೆ. ಶ್ರೀ ಅಪ್ಪಣ್ಣಗೌಡ ಪಾಟೀಲ, ಶ್ರೀ ಎಂ. ಪಿ. ಪಾಟೀಲ, ಶ್ರೀ ಶಿವಪ್ಪಣ್ಣ ಗುಂಡಾಳಿ, ಶ್ರೀ ಮಹಾದೇವಪ್ಪ ಮೆಂಡಗುದ್ಲಿ ಹೋರಾಟಗಾರರಾಗಿರುವರು. ಇವರು ರಾಷ್ಟ್ರೀಯ ಚಳುವಳಿಗಲ್ಲಿ ಭಾಗವಹಿಸಿ

ಬ್ರಿಟಿಷರ ಬಂದನಕ್ಕೊಳಗಾಗಿ ಜೈಲುವಾಸ ಮತ್ತು ಕಠಿಣ ಶಿಕ್ಷೆಗಳನ್ನು ಅನುಭವಿಸಿರುವರು.

ಸಂಕೇಶ್ವರದಲ್ಲಿ ಶೈವ ಮತ್ತು ವೈಷ್ಣವ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ಒಂದೊಂದು ದೇವಾಲಯಗಳು ನಿರ್ಮಾಣಗೊಂಡಿರುವವು. ಇವುಗಳಿಗೆ ದಾನ ದತ್ತಿ ನೀಡಿದ ವಿಷಯವನ್ನು ತಿಳಿಸುವ ಶಾಸನಗಳು ವಿರಳ ಸಂಖ್ಯೆಯಲ್ಲಿವೆ. ಆದರೂ ಈ ದೇವಾಲಯಗಳನ್ನು ವಿವರಿಸುವ, ಅಭ್ಯಸಿಸುವ ಸಂಧರ್ಭದಲ್ಲಿ ಅನೇಕ ಗ್ರಂಥಗಳ ನೆರವನ್ನು ಪಡೆಯಲಾಗಿದೆ. ಅವುಗಳಲ್ಲಿ ಪ್ರಮುಖವಾಗಿರುವ ಗ್ರಂಥಗಳೆಂದರೆ

೧) ಡಾ. ಸೂರ್ಯನಾಥ ಕಾಮತರ – ಬೆಳಗಾವಿ ಡಿಸ್ಟ್ರಿಕ್ಟ್ ಗೆಝೇಟಿಯರ್, ೧೯೮೭
೨) ಆರ್.ಆರ್. ಮುತಾಲಿಕರ –ಹುಕ್ಕೇರಿ ತಾಲೂಕು ದರ್ಶನ, ೧೯೮೭
೩) ಡಾ. ಶಿ. ಬಾ. ಪಾಟೀಲ –ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ, ೧೯೯೫
೪) ಡಾ. ಡಿ. ವಿ. ಪುರಾಣಿಕ –ನಂದನವನ (ಸಂ.), ೧೯೮೩

ಈ ಪ್ರಬಂಧ ರಚನೆಯ ಸಂದರ್ಭದಲ್ಲಿ ಈ ಗ್ರಂಥಗಳ ನೆರವನ್ನು ಪಡೆಯುವುದಲ್ಲದೇ ಕ್ಷೇತ್ರಕಾರ್ಯವನ್ನು ಕೈಗೊಂಡು ಅಭ್ಯಸಿಸಿರುವ ವಿಷಯಗಳನ್ನು ಸಹ ಬಸಳಸಿಕೊಳ್ಳಲಾಗಿರುತ್ತದೆ.

ವ್ಯಾಪ್ತಿ:

ಈ ಅಧ್ಯಯನದ ವ್ಯಾಪ್ತಿಯು ಸ್ಪಷ್ಟವಾಗಿದೆ ಮತ್ತು ಒಂದು ಮಿತಿಗೊಳ್ಳಪಟ್ಟಿದೆ. ಸ್ಪಷ್ಟತೆ ಹಾಗೂ ನಿಖರತೆಯನ್ನು ಅಧ್ಯಯನಿಸಲಾಗಿದೆ. ಸಂಕೇಶ್ವರ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಗ್ರ ಚಿತ್ರಣವನ್ನು ಆಧಾರಗಳ ಮೂಲಕವಾಗಿ ವಿವರಿಸಲಾಗಿದೆ. ಐತಿಹಾಸಿಕವಾಗಿ ಈ ಪ್ರದೇಶವು ಪ್ರಾಚೀನ ಭವ್ಯತೆಯನ್ನು ಒಳಗೊಂಡಿರುವುದು ತಿಳಿಯುತ್ತದೆ. ವಿವಿಧ ರಾಜಮನೆತನಗಳ ಚರಿತ್ರೆಯಿಂದ ಸಾಂಸ್ಕೃತಿಕ ಬೆಳವಣಿಗೆಯಾಗಿರುವದು ಕಂಡುಬರುತ್ತದೆ.

ಈ ಪ್ರಬಂಧ ರಚನೆಯ ಸಂದರ್ಭದಲ್ಲಿ ಅನೇಕ ಗ್ರಂಥಗಳ ನೆರವನ್ನು ಪಡೆದಿರುವದಲ್ಲದೆ ಕ್ಷೇತ್ರಕಾರ್ಯವನ್ನು ಕೈಗೊಂಡು ಅಭ್ಯಸಿಸಿರುವ ವಿಷಯಗಳನ್ನೂ ಸಹ ಬಳಸಿಕೊಳ್ಳಲಾಗಿರುತ್ತದೆ. ಅಧ್ಯಯನ ಅನುಕೂಲಕ್ಕಾಗಿ ಈ ಪ್ರಬಂಧವನ್ನು ೭ ಅಧ್ಯಾಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳು ಈ ಕೆಳಗಿನಂತೆ ಇರುತ್ತವೆ.

೧) ಅಧ್ಯಯನದ ಸ್ವರೂಪ
೨) ಸಂಕೇಶ್ವರದ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ.
೩) ಸಂಕೇಶ್ವರವನ್ನಾಳಿದ ವಿವಿಧ ರಾಜನಮನೆತನಗಳು.
೪) ಸಂಕೇಶ್ವರದ ಸ್ವಾತಂತ್ರ್ಯ ಹೋರಾಟಗಾರರು.

೫) ಸಂಕೇಶ್ವರದ ಸಾಂಸ್ಕೃತಿಕ ಪರಿಸರ

೬) ಸಂಕೇಶ್ವರದ ಕಲೆ ಮತ್ತು ವಾಸ್ತುಶಿಲ್ಪ

೭) ಸಮಾರೋಪ

ಎರಡನೆಯ ಅಧ್ಯಾಯದಲ್ಲಿ ಸಂಕೇಶ್ವರದ ಭೌಗೋಳಿಕ ಪ್ರದೇಶದ ಚಿತ್ರಣವನ್ನು ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ವಿವಿಧ ರಾಜಮನೆತನಗಳಾದ ಕಲ್ಯಾಣ ಚಾಳುಕ್ಯರು, ಸವದತ್ತಿಯ ರಟ್ಟರು, ದೇವಗಿರಿಯ ಯಾದವರು, ಬಹಮನಿ ಸುಲ್ತಾನರು, ಬಿಜಾಪೂರದ ಆದಿಲ್‌ಷಾಹಿಗಳು, ಮರಾಠರು, ಮತ್ತು ಪೇಶ್ವೆಯವರ ಆಳ್ವಿಕೆಯ ವಿವರಣೆಯನ್ನು ಒಳಗೊಂಡಿರುತ್ತದೆ.

ನಾಲ್ಕನೆಯ ಅಧ್ಯಾಯವು ಸಂಕೇಶ್ವರದ ಸ್ವಾತಂತ್ರ್ಯ ಹೋರಾಟಗಾರರಾದ ಅಪ್ಪಣ್ಣಗೌಡ ಪಾಟೀಲ, ಎಂ. ಕಿ. ಪಾಟೀಲ, ಮಹಾದೇವಪ್ಪಾ ಮೆಂಡಗುದ್ಲಿ, ಶಿವಪ್ಪಣ್ಣಾ ಗುಂಡಾಳಿಯವರ ವಿವರಣೆಯನ್ನು ಒಳಗೊಂಡಿರುತ್ತದೆ.

ಐದನೆಯ ಅಧ್ಯಾಯವು ಸಂಕೇಶ್ವರದ ಸಾಂಸ್ಕೃತಿಕ ಪರಿಸರವನ್ನು ಒಳಗೊಂಡಿದೆ. ಇದರಲ್ಲಿ ಅಧ್ಯಯನದ ಅನುಕೂಲಕ್ಕಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿವರಣೆಯನ್ನು ಒಳಗೊಂಡಿರುತ್ತದೆ.

ಆರನೆಯ ಅಧ್ಯಾಯವು ಸಂಕೇಶ್ವರದ ಕಲೆ ಮತ್ತು ವಾಸ್ತುಶಿಲ್ಪದ ಕುರಿತಾದ ವಿವರಣೆ ಒಳಗೊಂಡಿದೆ. ಈ ಅಧ್ಯಯನದಲ್ಲಿ ದೇವಾಲಯಗಳು, ಮಠಗಳು, ಬಸದಿಗಳು, ಕೋಟೆಗಳು, ವೀರಗಲ್ಲುಗಳ ಕುರಿತು ವಿವರಣೆಯನ್ನು ಒಳಗೊಂಡಿರುತ್ತದೆ.

ಏಳನೆಯ ಅಧ್ಯಾಯವು ಪ್ರಬಂಧದ ಕುರಿತು ಆಗಿರುವ ವಿಷಯವನ್ನು ಆಳವಾಗಿ ಅಧ್ಯಯನಿಸಿ ಸಾಧ್ಯವಾದಷ್ಟು ವಿವರಣೆಯನ್ನು ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಂಕೇಶ್ವರ; ಚಾರಿತ್ರಿಕ ಅಧ್ಯಯನದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವ ದೃಷ್ಟಿಯಿಂದ ಅನೇಕ ಶಾಸನಗಳು ವಾಸ್ತುಶಿಲ್ಪಗಳು, ಸ್ಮಾರಕಗಳು, ಗ್ರಂಥಗಳು ಮತ್ತು ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಭ್ಯಸಿಸಿದ, ಸಂಗ್ರಹಿಸಿದ ವಿಷಯಗಳ ವಿವರಣೆಯನ್ನು ನೀಡುವದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿರುತ್ತದೆ.

ಅಧ್ಯಾಯ ೨

ಸಂಕೇಶ್ವರದ ಪರಿಚಯ

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ಬವೆಳವಣಿಗೆಯಲ್ಲಿ ಅಲ್ಲಿನ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಯಾವುದೇ ಒಂದು ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ವಿಭಾಗಗಳನ್ನಾಗಿ ವಿಂಗಡಿಸುವ ಸಂದರ್ಭದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ನೈಸರ್ಗಿಕ ಅಂಶಗಳನ್ನು ಅವಲಂಬಿಸಿರುವುದು ತಿಳಿದು ಬರುತ್ತದೆ. ಆದ್ದರಿಂದ ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಪರಸ್ಪರ ನಿಕಟ ಸಂಬಂಧ ಹೊಂದಿರುವುದು ಗೊತ್ತಾಗುತ್ತದೆ. ಭೌಗೋಳಿಕ ವೈಶಿಷ್ಟ್ಯಗಳನ್ನು ಮರೆತು ಇತಿಹಾಸವನ್ನು ಬರೆಯಲು ಪ್ರಾರಂಭಿಸಿದರೆ ಇತಿಹಾಸವು ರೂಪುಗೊಳ್ಳುವ ಒಂದು ಪ್ರಧಾನ ನೆಲೆಯನ್ನೇ ಉಪೇಕ್ಷಿಸಿದಂತಾಗುತ್ತದೆ.

ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಬೆಳಗಾವಿಯು ಐತಿಹಾಸಿಕವಾಗಿದೆ ಈ ಜಿಲ್ಲೆಯ ತಾಲುಕುಗಳಲ್ಲಿ ಒಂದಾದ ಹುಕ್ಕೇರಿಯು ಬೆಳಗಾವಿ ಪಶ್ಚಿಮ ಭಾಗದಲ್ಲಿರುತ್ತದೆ . ಪೂರ್ವದಲ್ಲಿ ೧೫° ೫೮', ಪಶ್ಚಿಮದಲ್ಲಿ ೧೬° ೩೧', ಅಕ್ಷಾಂಶ ಮತ್ತು ಉತ್ತರದಲ್ಲಿ ೭೪° ೧೫', ದಕ್ಷಿಣದಲ್ಲಿ ೭೪° ೪೫' ರೇಖಾಂಶಗಳ ಮಧ್ಯದಲ್ಲಿ ನೆಲೆಗೊಂಡಿರುತ್ತದೆ[೧].

ಹುಕ್ಕೇರಿ ತಾಲೂಕಿನ ಪ್ರಮುಖ ಪಟ್ಟಣಗಳಲ್ಲಿ ಒಂದಾದ ಸಂಕೇಶ್ವರವು, ಹುಕ್ಕೇರಿಯಿಂದ ಪಶ್ಚಿಮ ಭಾಗದಲ್ಲಿರುತ್ತದೆ.ಈ ಮೇಲಿನ ಅಕ್ಷಾಂಶ ಮತ್ತು ರೇಖಾಂಶಗಳ ಮಧ್ಯದಲ್ಲಿ ಸಂಕೇಶ್ವರವು ನೆಲೆಗೊಂಡಿರುತ್ತದೆ

ಭೌಗೋಳಿಕ ಪರಿಸರ:

೧) ವಿಸ್ತೀರ್ಣ ಮತ್ತು ಮೇರೆಗಳು :

ಸಂಕೇಶ್ವರ ಪಟ್ಟಣದ ಒಟ್ಟು ವಿಸ್ತೀರ್ಣವು ೧೭.೬೧ ಚ.ಮೀ. ಇರುತ್ತದೆ. ಪಟ್ಟಣದ ಪಶ್ಚಿಮ ಭಾಗವು ಸಮುದ್ರ ಮಟ್ಟದಿಂದ ೨೭೩೦ ಅಡಿಗಳಷ್ಟು ಎತ್ತರವಾಗಿದ್ದು, ಪೂರ್ವಕ್ಕೆ ಹೋದಂತೆಲ್ಲಾ ಇಳಿಜಾರವಿರುತ್ತದೆ. ಈ ಪಟ್ಟಣದ ಪೂರ್ವಭಾಗವು ಸಮುದ್ರ ಮಟ್ಟದಿಂದ ೨೩೪೦ ಅಡಿಗಳಷ್ಟು ಎತ್ತರವಾಗಿರುತ್ತದೆ[೨]. ಈ ಪಟ್ಟಣದ ಮೇರೆಗಳಾಗಿ ವಾಯುವ್ಯದಲ್ಲಿ, ನಿಪ್ಪಾಣಿ,ಮತ್ತು ಪಶ್ಚಿಮದಲ್ಲಿ ಗಡಹಿಂಗ್ಲಜ, ಉತ್ತರದಲ್ಲಿ ಚಿಕ್ಕೋಡಿ ತಾಲೂಕು, ಪೂರ್ವಕ್ಕೆ ಹುಕ್ಕೇರಿ ತಾಲೂಕು ಮತ್ತು ದಕ್ಷಿಣದಲ್ಲಿ ಬೆಳಗಾವಿ ತಾಲೂಕು ವ್ಯಾಪಿಸಿರುತ್ತದೆ.

೨) ಜನಸಂಖ್ಯೆ:

ಸಂಕೇಶ್ವರ ಪಟ್ಟಣದ ಜನಸಂಖ್ಯೆಯು ೨೦೦೧ ರ ಜನಗಣತಿಯಂತೆ ಪುರುಷರು ೧೬,೬೮೮, ಮಹಿಳೆಯರು ೧೫,೮೨೩ ಇದ್ದು ಒಟ್ಟು ೩೨,೫೧೧ ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಈ ಪಟ್ಟಣವು ಸುಮಾರು ೩,೯೫೦ ಮನೆಗಳನ್ನುಹೊಂದಿರುತ್ತದೆ. ಹುಕ್ಕೇರಿ ತಾಲೂಕಿನ ಹೋಬಳಿಗಳಲ್ಲಿ ಒಂದಾಗಿತ್ತು[೩].

೩) ಹವಾಗುಣ ಮತ್ತು ಮಳೆ:

ಸಂಕೇಶ್ವರ ಪಟ್ಟಣ ಬೇಸಿಗೆಯಲ್ಲಿ ಅಲ್ಪ ಉಷ್ಣತೆಯ ಪ್ರಮಾಣವು (೪೦° ಸೆಂಟಿಗ್ರೇಡವರೆಗೆ) ಇದ್ದರೆ ಪಶ್ಚಿಮಕ್ಕೆ ಸರಿದಂತೆ ಕಡಿಮೆಯಾಗುತ್ತದೆ. ಡಿಸೆಂಬರನಿಂದ ಫೆಬ್ರುವರಿ ವರೆಗೆ ಪಟ್ಟಣದಾದ್ಯಂತ ಚಳಿಗಾಲವಿರುತ್ತದೆ.

ಈ ಭಾಗಕ್ಕೆ ಹೆಚ್ಚಾಗಿ ನೈರುತ್ಯ ಮಾರುತಗಳಿಂದ ಮಳೆಯನ್ನು ಪಡೆಯುತ್ತದೆ. ಪಶ್ಚಿಮ ಮತ್ತು ನೈರುತ್ಯ ಭಾಗವು ಅರೆಮಲೆನಾಡಿನ ಪ್ರದೇಶವಾಗಿದ್ದು ಮಳೆಯ ಪ್ರಮಾಣವು ಹೆಚ್ಚಾಗಿರುತ್ತದೆ. ಪೂರ್ವಕ್ಕೆ ಹೋದಂತೆಲ್ಲಾ ಮಳೆಯ ಪ್ರಮಾಣವು ಕಡಿಮೆಯಾಗಿರುತ್ತದೆ[೪]. ಮಳೆಯ ಸರಾಸರಿ ಪ್ರಮಾಣವು ೧೭.೬೩ ಎಂ.ಎಂ. ಇರುತ್ತದೆ.

೪) ಮಣ್ಣು :

ನೈಸರ್ಗಿಕ ವಿಭಾಗಗಳ ದೃಷ್ಟಿಯಿಂದ ಮಣ್ಣಿನ ಗುಣಧರ್ಮಗಳನ್ನು ಮೂರು ವಿಭಾಗಗಳಲ್ಲಿ ಕಾಣುವುದಾಗಿದೆ.

೧) ನೈರುತ್ಯದ ಅರೆ ಮಲೆನಾಡಿನ ಅರಣ್ಯಾವೃತ ಬೆಟ್ಟ ಪ್ರದೇಶ (೩೦೦೦ ಅಡಿ) ಪಶ್ಚಿಮದಲ್ಲಿರುತ್ತದೆ. ಉತ್ತರಕ್ಕೆ ಗಿಡಗಂಟೆಗಳಿಲ್ಲದ ಎತ್ತರವಾದ ಪ್ರದೇಶವಿರುತ್ತದೆ. (೨೨೦೦ ಅಡಿ), ಪೂರ್ವಕ್ಕೆ ಸರಿದಂತೆ ಇದು ಇಳಿಜಾರಾಗುತ್ತ ಬರುತ್ತದೆ.

೨) ಪೂರ್ವದ ಸಾಧಾರಣ, ಸಮತಟ್ಟಾದ ಫಲವತ್ತಾದ ಕೆಂಪು ಮತ್ತು ಕಪ್ಪು ಮಣ್ಣಿನ ಪ್ರದೇಶ, ಆಗ್ನೇಯ ಭಾಗವು ಸಮತಟ್ಟಾಗಿದ್ದು ಅಲ್ಲಿನ ಪ್ರಮುಖ ಉಪವಾಣಿಜ್ಯ ಕೇಂದ್ರವಾದ ಯಮಕನಮರಡಿ ಆಗಿರುತ್ತದೆ.

೩) ದಕ್ಷಿಣ ಹಾಗೂ ನೈರುತ್ಯ ಭಾಗದಲ್ಲಿ ಹಬ್ಬಿಕೊಂಡಿರುವ ಬೆಟ್ಟಗಳ ದಟ್ಟ ಕಾಡಿನ ಪ್ರದೇಶಗಳಾಗಿದ್ದು ಅರಣ್ಯ ಪ್ರದೇಶವು ೧೩,೯೮೧ ಹೆಕ್ಟೇರುಗಳಷ್ಟಿರುತ್ತದೆ. ಪಟ್ಟಣದ ಪಶ್ಚಿಮ, ದಕ್ಷಿಣ, ಉತ್ತರದ ಸ್ವಲ್ಪ ಭಾಗಗಳು ಬೆಟ್ಟ ಶ್ರೇಣಿಗಳಿಂದ ಆವೃತ್ತವಾಗಿರುತ್ತವೆ.

ಸಂಕೇಶ್ವರ ಪಟ್ಟಣದ ಪಶ್ಚಿಮ, ದಕ್ಷಿಣ, ಉತ್ತರದ ಸ್ವಲ್ಪ ಭಾಗಗಳು ಬೆಟ್ಟ ಶ್ರೇಣಿಗಳಿಂದ ಆವೃತವಾಗಿರುತ್ತವೆ. ಉತ್ತರದ ಈಶಾನ್ಯ ಭಾಗದಲ್ಲಿ ಡೆಕ್ಕನ್ ಟ್ರ್ಯಾಫನ್ ಕರಿಕಲ್ಲು ಭಾಗ ಮತ್ತು ಕೆಂಪು ಕರಿ ಮಿಶ್ರಿತ ಮಣ್ಣು ಇದ್ದರೆ, ಪಶ್ಚಿಮ, ನೈಋತ್ಯ ಮತ್ತು ದಕ್ಷಿಣ ಭಾಗದಲ್ಲಿ ಧಾರವಾಡ ಟ್ರ್ಯಾಫನ್ ಕೆಂಪು ಜಿಳಿಕಲ್ಲುಗಳಿಂದ ಕೂಡಿದ್ದು, ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಕೂಡಿರುತ್ತದೆ. ಪೂರ್ವಕ್ಕೆ ಹೋದಂತೆಲ್ಲಾ ಸಮತಟ್ಟಾಗಿರುವ, ಫಲವತ್ತಾಗಿರುವ ಬಯಲು ಪ್ರದೇಶವು ಗೋಚರಿಸುತ್ತದೆ[೫].

೫) ಜಲ ಸಂಪನ್ಮೂಲಗಳು :

ಉತ್ತರ ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದಾಗಿರುವ ಘಟಪ್ರಭಾ ನದಿಯು ಪಶ್ಚಿಮಘಟ್ಟದಲ್ಲಿ "ಸುಂದರಗಡ" ಎಂಬಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತಿದ್ದು ೬೦ ಕಿ.ಮೀ. ಗಳಷ್ಟು ದೂರ ಹರಿಯುತ್ತಿದೆ[೬]. ತಾಮ್ರಪಣಿ ಮತ್ತು ಹಿರಣ್ಯಕೇಶಿ ಇವು ಇದರ ಉಪನದಿಗಳಾಗಿರುತ್ತವೆ. ಹಿರಣ್ಯಕೇಶಿ ನದಿಯು ಪಶ್ಚಿಮ ಘಟ್ಟದಲ್ಲಿ ಅಂಬೋಲಿಯ ಹತ್ತಿರ ಹುಟ್ಟಿ ಸಂಕೇಶ್ವರ ಪಟ್ಟಣದ ನೈರುತ್ಯದಲ್ಲಿ ಪ್ರವೇಶಿಸಿ ಹರಿದು ಮುಂದೆ ಘಟಪ್ರಭಾ ನದಿಗೆ ಸೇರುತ್ತದೆ[೭]. ಘಟಪ್ರಭಾ ನದಿಗೆ ೧೯೪೯ ರಲ್ಲಿ ಹಿಡಕಲ್‌ದ ಹತ್ತಿರ ಅಣೆಕಟ್ಟು ನಿರ್ಮಿಸಲಾಗಿರುತ್ತದೆ. ಹಿಡಕಲ್ ಜಲಾಶಯವು ೧೬೩ ಅಡಿಗಳಷ್ಟು ಎತ್ತರವಾಗಿದ್ದು ೫೧ ಸಾವಿರ ಮಿಲಿಯ ಘನ ಅಡಿಗಳಷ್ಟು ನೀರಿನ ಸಂಗ್ರಹದ ಸಾಮರ್ಥ್ಯವನ್ನು ಹೊಂದಿರುತ್ತದೆ[೮]. ಸಂಕೇಶ್ವರ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜುವಿನ ಮೂಲವಾಗಿದೆ. ನದಿಗಳಷ್ಟೇ ಅಲ್ಲದೇ ಕೊಳವೆಭಾವಿಗಳು ಹಾಗೂ ಪಟ್ಟಣದ ಸಮೀಪದಲ್ಲಿನ ಕಮತನೂರಿನ ಕೆರೆಯು ಮತ್ತು ಹಿರೇಹಳ್ಳದಿಂದ ವ್ಯವಸಾಯಕ್ಕೆ ನೀರು ಒದಗಿಸಿರುವ ಮೂಲವಾಗಿರುತ್ತವೆ.

೬) ವ್ಯವಸಾಯ :

ಸಂಕೇಶ್ವರ ಪಟ್ಟಣದ ಸುತ್ತಲಿನ ಪರಿಸರದಲ್ಲಿ ಫಲವತ್ತಾದ ಭೂಮಿ ಇದ್ದು ಮುಖ್ಯವಾಗಿ ತಂಬಾಕು, ಮೆಣಸಿನಕಾಯಿ, ಕಬ್ಬು, ಜೋಳ, ಹಾಗೂ ಶೇಂಗಾ, ಸೋಯಾಬಿನ ಪ್ರಮುಖ ಬೆಳೆಗಳಾಗಿರುತ್ತವೆ.

೭) ಕೈಗಾರಿಕೆಗಳು :

ಸಂಕೇಶ್ವರ ಪಟ್ಟಣದಲ್ಲಿ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರಖಾನೆಯು ೧೯೫೬ ರಲ್ಲಿ ಆರಂಭವಾಗಿದ್ದು ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿರುವ ಸಕ್ಕರೆ ಕಾರಖಾನೆಯಾಗಿದೆ. ಈ ಸಕ್ಕರೆ ಉದ್ದಿಮೆಯನ್ನು ಹೊರತುಪಡಿಸಿ ಉಳಿದವುಗಳು ಮಧ್ಯಮ ಹಾಗೂ ಸಣ್ಣ ಪ್ರಮಾಣ ಕೈಗಾರಿಕೆಗಳಿರುತ್ತವೆ. ನೇಕಾರರು, ಬಡಿಗರು, ಕಮ್ಮಾರರು, ಚಮ್ಮಾರರು, ಮೇದಾರರು, ಇತ್ಯಾದಿ ಗೃಹ ಕೈಗಾರಿಕೆಗಳಿರುತ್ತವೆ.

ಸಂಕೇಶ್ವರ ಪಟ್ಟಣದ ಸಮೀಪದಲ್ಲಿರುವ ಕಣಗಲಾ ಮತ್ತು ಹೆಬ್ಬಾಳ ಗ್ರಾಮವು ತಂಬಾಕು ವ್ಯಾಪಾರದ ಚಟುವಟಿಕೆಯ ಕೇಂದ್ರಗಳಾಗಿರುತ್ತವೆ.

ಚಾರಿತ್ರಿಕ ಹಿನ್ನೆಲೆ :

ಸಂಕೇಶ್ವರವು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ವಾಣಿಜ್ಯ ನಗರ ಹಾಗೂ ಐತಿಹಾಸಿಕ ಪಟ್ಟಣವಾಗಿದೆ. ಪುಣಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ೪ ರ ಬದಿಯಲ್ಲಿ ಇರುವ ಸುಂದರವಾದ ಪಟ್ಟಣವಾಗಿದೆ. ಇದರ ಪಾರ್ಶ್ವದಲ್ಲಿ ಹಿರಣ್ಯಕೇಶಿ ನದಿ ಸಹ್ಯಾದ್ರಿಯ ಸೊಬಗು ಇಲ್ಲಿಯವರೆಗೂ ಚಾಚಿಕೊಂಡಿದೆ. ಧರ್ಮದ ಹಿರಿಮೆ, ಇತಿಹಾಸದ ಗರಿಮೆ ಸಂಸ್ಕೃತಿಯ ಸೌರಭ ಹೆಪ್ಪುಗಟ್ಟಿ ಕಂಪು ಹರಡಿರುತ್ತದೆ.

"ಸಿದ್ಧಂ ಸಾಂಕೇಶ್ವರಂ ಲಿಂಗಂ ನೈರುತ್ಯ ದಿಶಿ ಸಂಸ್ಥಿತಂ
ಕಶ್ಮಲಾಹಾ ನದೀ ಸರ್ವ : ಸರ್ವೋತ್ತಮಾ ಭವೇತ್"
– – – – – ಪಂಕ್ತಿ ತೀರ್ಥ ಶುಕ್ಲತೀರ್ಥಂ ಬ್ರಹ್ಮ ಹತ್ಯಾನಿವಾರಕಂ
ಕ್ಷೇತ್ರಾಣಾರಿ ಉತ್ತಮಂ ಕ್ಷೇತ್ರಂ ಕಾಶೀಕ್ಷೇತ್ರಾದ್ ಯವಧಿಕಮ್
ಯಸ್ಮಿನ್ 'ಸಾಂಖ್ಯೇಶ್ವರ' ಸ್ಥಾನೆ ಗುರಭಾಗತ್ವಾ ಸದಾಶಿವಃ'

– ಸಾಂಖ್ಯೇಶ್ವರ ಮಹಾಪುರಾಣ

ಹೀಗೆ ಶಂಕರಲಿಂಗನ ಮಹಿಮೆ ಹಾಗೂ ಹಿರಣ್ಯಕೇಶಿ ನದಿ ಹಿರಿಮೆ ವ್ಯಕ್ತವಾಗಿದೆ. ಕಾಶೀ ಕ್ಷೇತ್ರಕ್ಕಿಂತ ಅಧಿಕತ್ ಪಡೆದ ಶಂಕರಲಿಂಗನ ಪವಿತ್ರವಾದ ಈ ಸ್ಥಾನ ದಕ್ಷಿಣದ ಕಾಶಿಯಾಗಿದೆ. ಸಾಂಖ್ಯೆಯು ಷಡ್ದರ್ಶನಗಳಲ್ಲಿ ಒಂದು ದರ್ಶನವಾಗಿದೆ. ಸಾಂಖ್ಯೆವೆಂದರೆ ಜ್ಞಾನವೆಂದು ಅರ್ಥ, ಸಾಂಖೇಶ್ವರವೆಂದರೆ ಜ್ಞಾನೇಶ್ವರ ಎಂಬುದಾಗಿದೆ.

ಈಶ್ವರ ಜ್ಯೋತಿಯಾಗಿ ವಿಶ್ವನಾಥನಾಗಿ, ಮಹಾಬಲನಾಗಿ ಇತ್ಯಾದಿ ಸಹಸ್ರಾದಿ ರೂಪದಲ್ಲಿ ಭವ್ಯತೆಗೊಳ್ಳುವ ಶಂಕರ ಇಲ್ಲಿ ಜ್ಞಾನದ ಸಂಕೇತನಾಗಿ ಸಾಂಖ್ಯೇಶ್ವರ ನಾಮದಲ್ಲಿ ತನ್ನ ಮಹಿಮೆಯನ್ನು ಮೆರೆದಿದ್ದಾನೆ. ಈ ಊರಿನ ಆರಾಧ್ಯ ಅಧಿಪತಿ ದೇವನಾಗಿದ್ದರಿಂದ ಅವನ ಹೆಸರೇ ಊರಿನ ಹೆಸರಾಗಿ ಪರಿಣಮಿಸಿದೆ. ಸಾಂಖ್ಯೇಶ್ವರ ಜನರ ಬಳಕೆಯಲ್ಲಿ ಸಂಕೇಶ್ವರವಾಗಿದೆ.

ಐತಿಹಾಸಿಕ ದೃಷ್ಟಿಯಿಂದ ಹಿರಿಮೆಯನ್ನು ಪಡೆದಿದೆ. ಪ್ರಾಚೀನ ಕಾಲದಲ್ಲಿ 'ಕುಹುಂಡಿ ಮೂರು ಸಹಸ್ರದ ನೂಲೆನಾಡಿ'ನಲ್ಲಿ ಸಂಕೇಶ್ವರವು ಮಹತ್ವದ ಸ್ಥಾನವನ್ನು ಪಡೆದಿತ್ತು. ನೂಲೆನಾಡು ವಿಭಾಗವು ಹುಕ್ಕೇರಿ, ಚಿಕ್ಕೋಡಿ, ಗಡಹಿಂಗ್ಲಜ ತಾಲೂಕುಗಳನ್ನೊಳಗೊಂಡ ಒಂದು ನಾಡಾಗಿತ್ತು[೧೦].

ಸಂಕೇಶ್ವರದಲ್ಲಿ ಮೂರು ಶಾಸನಗಳು ದೊರೆತಿವೆ. ಕ್ರಿ.ಶ. ೧೨೧೦ (ಶ.ಕೆ. ೧೧೨೧)ರ ಶಾಸನದಲ್ಲಿ ಶಂಕರಲಿಂಗ ಮಂದಿರಕ್ಕೆ ದತ್ತಿ ಬಿಟ್ಟ ವಿಷಯವಿದೆ[೧೧]. ಊರ ನೈಋತ್ಯ ದಿಶೆಯ ಹಿರಣ್ಯಕೇಶಿ ನದಿ ದಡದಲ್ಲಿ ಚಾಳುಕ್ಯ ಶೈಲಿಯ ನಕ್ಷತ್ರ ತಳಹದಿಯ ಮೇಲೆ ನಿರ್ಮಿಸಿದ ಭವ್ಯವಾದ ಸುಂದರ ಪ್ರಾಚೀನ ಗುಡಿ ಶಂಕರಲಿಂಗ ದೇವಸ್ಥಾನ ವಾಸ್ತುಶಿಲ್ಪದಿಂದ ಚಿತ್ತಾಕರ್ಷಕವಾಗಿದೆ.

ಅಡಿ ಟಿಪ್ಪಣಿಗಳು

೧. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೫೪

೨. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೩

೩. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೪

೪. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೪

೫. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೫

೬. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೫

೭. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೫

೮. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೨೯೮

೯. ಸುಭೋಧ ಮಂಜರಿ, ಪ್ರೆಬ್ರುವರಿ ೧೯೫೪, 'ಸಾಂಖ್ಯೆಸ್ವರ ಮಹಾಪುರಾಣ' ಗ್ರಂಥದೊಂದರಲ್ಲಿ ಅದರ ಬಹುಭಾಗ ದೊರಕಿದೆ. ರಚನೆಯಕಾಲಗೊತ್ತಿಲ್ಲ. ಪ್ರಾಚಿನವೆಂಬುದರಲ್ಲಿ ಸಂಶಯವಿಲ್ಲ. 'ಮಂಜರಿಕಾರರ' ಅಭಿಪ್ರಾಯವಾಗಿದೆ.

೧೦. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೩೦, ೩೧

೧೧. ನಂದನವನ (ಸಂ.) ; ಡಾ. ಡಿ. ಫಿ. ಪುರಾಣಿಕ : ೧೯೮೩ ; ಪು.೪೯

ಅಧ್ಯಾಯ ೩
ಸಂಕೇಶ್ವರವನ್ನಾಳಿದ ವಿವಿಧ ರಾಜಮನೆತನಗಳು

ಇತಿಹಾಸ :

ಸಂಕೇಶ್ವರದ ಪ್ರದೇಶವು ಕುಹುಂಡಿ ಮೂರು ಸಾವಿರದ ಭಾಗವಾಗಿತ್ತೆಂದು ತಿಳಿದು ಬರುತ್ತದೆ. 'ಕುಹುಂಡಿ ಮೂರುಸಾವಿರ' ಪ್ರದೇಶದ ಮೇಲೆ ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರೂ ಪ್ರಭುತ್ವವನ್ನು ಹೊಂದಿದ್ದರೂ ಇವರ ಕಾಲದ ಯಾವುದೇ ಶಾಸನಾಧಾರಗಳು ದೊರೆತಿರುವುದಿಲ್ಲ. ಕಲ್ಯಾಣ ಚಾಳುಕ್ಯರು ಮತ್ತು ಅವರು ಮಾಂಡಲಿಕರಾಗಿದ್ದ ಸವದತ್ತಿಯ ರಟ್ಟರು ಈ ಪ್ರದೇಶವನ್ನು ಆಳಿದರು. ಇಲ್ಲಿ ದೊರೆತಿರುವ ಅವರ ಶಾಸನಗಳು ಈ ಸಂಗತಿಯನ್ನು ಪುಷ್ಟಿಕರಿಸುತ್ತವೆ. ರಟ್ಟರ ದೊರೆ ೪ನೇ ಕಾರ್ತವೀರ್ಯನು (ಕ್ರಿ.ಶ. ೧೧೯೯-೧೨೨೨) ರಾಜಧಾನಿಯನ್ನು ಸವದತ್ತಿಯಿಂದ ಬೆಳಗಾವಿಗೆ ವರ್ಗಾಯಿಸಿದ ನಂತರದಲ್ಲಿ ಹುಕ್ಕೇರಿ-ರಾಯಬಾಗ ಪ್ರದೇಶಗಳಿಗೆ ಅತಿ ಮಹತ್ವ ಬಂದಿತು.

ಕಲ್ಯಾಣದ ಚಾಳುಕ್ಯರು :

ಕಲ್ಯಾಣದ ಚಾಳುಕ್ಯರು ತಾವು ಬಾದಾಮಿಯ ಚಾಳುಕ್ಯರ ವಂಶಜರೆಂದೇ ಹೇಳಿಕೊಂಡಿದ್ದಾರೆ. ಬಾದಾಮಿಯ ಎರಡನೆಯ ವಿಕ್ರಮಾದಿತ್ಯನ ಸಹೋದರನಾದ ಭೀಮನ ನಂತರ ಮೂರನೆಯ ಕಿರ್ತಿವರ್ಮನು ಪ್ರಮುಖ ಆಡಳಿತ ನಡೆಸಿದನು. ಅನಂತರ ಇತನ ಮಗನಾದ ಒಂದನೆಯ ತೈಲನು ತನ್ನ ಉತ್ತರಾಧಿಕಾರತ್ವವನ್ನು ಮುಂದುವರೆಸಿದನು. ಮೂರನೆಯ ವಿಕ್ರಮಾದಿತ್ಯ, ವಿಕ್ರಮಾದಿತ್ಯನ ಎರಡನೆಯ ಭೀಮ, ಭೀಮನ ಪುತ್ರ ಒಂದನೆಯ ಅಯ್ಯಣ, ಅಯ್ಯಣನ ನಂತರ ಅವನ ತನುಜ, ನಾಲ್ಕನೆಯ ವಿಕ್ರಮಾದಿತ್ಯ, ಇವರೆಲ್ಲರ ನಂತರ ವಿಕ್ರಮನ ಮಗನಾದ ಎರಡನೆಯ ತೈಲನು ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ ಅಧಿಕಾರ ವಹಿಸಿಕೊಂಡನು. ಒಂದನೆಯ ಭೀಮನ ನಂತರ ಏಳು ತಲೆಮಾರುಗಳ ಕಾಲ ಅಧಿಕಾರಚ್ಯುತರಾಗಿ ಚಾಳುಕ್ಯರು ಉಳಿಯಬೇಕಾಯಿತು.

ರಾಷ್ಟ್ರಕೂಟದ ಸಾಮಂತರಾಗಿ ಇವರು ಕರ್ನಾಟಕದಲ್ಲಿ ಆಳುತ್ತಿದ್ದರು. ಕ್ರಿ.ಶ. ೯೭೩ ರಲ್ಲಿ ಮಳಖೇಡದಲ್ಲಿ ಅಧಿಕಾರಗ್ರಹಣ ಮಾಡಿದ ತೈಲನು ನಾಲ್ಕನೆಯ ವಿಕ್ರಮ ಮತ್ತು ತ್ರಿಪುರಿಯ ಕಳಚುರಿ ವಂಶದ ರಾಜಕುಮಾರಿ ಬೊಂತಾದೇವಿಯ ಮಗ ಕ್ರಿ.ಶ. ೯೬೫ ರ ಒಂದು ಶಾಸನದಂತೆ ಅವನು ತರ್ಡವಾಡಿ ೧೦೦೦ ದ ಮಹಾ ಸಾಮಂತನಾಗಿದ್ದನು[೧].

ಕಲ್ಯಾಣ ಚಾಳುಕ್ಯರ ಆಳ್ವಿಕೆಯು ಈ ಭಾಗದಲ್ಲಿ ನಡೆದಿರುವದು ತಿಳಿಯುತ್ತದೆ. ಕಲೆ ಮತ್ತು ವಾಸ್ತುಶಿಲ್ಪಗಳು ಅವರ ಆಳ್ವಿಕೆಯ ನಿದರ್ಶನಗಳಾಗಿವೆ. ಸಂಕೇಶ್ವರದಲ್ಲಿನ ಶಂಕರಲಿಂಗ ದೇವಾಲಯ, ಲಕ್ಷ್ಮೀನಾರಾಯಣ ದೇವಾಲಯ ಮತ್ತು ಪಾರ್ಶ್ವನಾಥನ ಬಸದಿಯು ಇವರ ಆಳ್ವಿಕೆಯಲ್ಲಿಯೇ ನಿರ್ಮಾಣಗೊಂಡಿರುವವು.

ಸವದತ್ತಿಯ ರಟ್ಟರು :

ಭವ್ಯ ಪರಂಪರೆಯನ್ನು ಹೊಂದಿರುವ ಕನ್ನಡ ನಾಡಿನ ಸಂಸ್ಕೃತಿಯು ಹಲವಾರು ಚಿಕ್ಕ ದೊಡ್ಡ ರಾಜಮನೆತನಗಳು ಕಾರಣವಾಗಿವೆ. ಅಂತಹವುಗಳಲ್ಲಿ ರಟ್ಟರ ರಾಜ್ಯವು ಒಂದಾಗಿತ್ತು. ಇವರು ಸವದತ್ತಿಯನ್ನು ತಮ್ಮ ರಾಜಧಾನಿಯನ್ನಾಗಿಸಿಕೊಂಡು ಸವದತ್ತಿಯ ರಟ್ಟರು ಎಂದು ಪ್ರಸಿದ್ಧರಾಗಿದ್ದರು. ಇವರು ಕಲ್ಯಾಣ ಚಾಳುಕ್ಯರ ಮತ್ತು ರಾಷ್ಟ್ರಕೂಟರ ಮಾಂಡಲಿಕರಾಗಿದ್ದರು. ಇವರು ಆಳ್ವಿಕೆ ನಡೆಸಿದ ನಾಡನ್ನು ಕುಹುಂಡಿ ಮೂರುಸಾವಿರವೆಂದು ಕರೆಯಲಾಗಿದೆ[೨]. ಇಂತಹ ನಾಡಿನಲ್ಲಿ ಸಂಕೇಶ್ವರವು ಸೇರಿದ್ದು, ಅವರ ಆಳ್ವಿಕೆಗೆ ಒಳಪಟ್ಟಿತ್ತು. ಇವರು ತಮ್ಮನ್ನು ಲಟ್ಟಲಾಪುರಾವದೀಶ್ವರರೆಂದು ಕರೆದುಕೊಂಡಿದ್ದಾರೆ. ಅಂದರೆ ಮಳಖೇಡದ ರಾಷ್ಟ್ರಕೂಟ ವಂಶಜರೆಂದು ಶಾಸನಗಳಲ್ಲಿ ವರ್ಣಿತವಾಗಿರುವುದು ಕಂಡು ಬರುತ್ತದೆ[೩].

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ್ದ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ವಂಶಜರು ಪ್ರಮುಖರಾಗಿದ್ದರು. ಇವರು ಆಳ್ವಿಕೆ ನಡೆಸಿದ್ದು ೮ನೇ ಮತ್ತು ೯ನೇ ಶತಮಾನವಾಗಿತ್ತು. ಅಚ್ಚ ಕನ್ನಡಿಗರಾದ ಈ ವಂಶಜರ ಮೂಲಪುರುಷ ದಂತಿದುರ್ಗನೆಂಬುವನು ಆಗಿದ್ದನು. ಇತನ ನಂತರ ಉತ್ತರಾಧಿಕಾರಿಯಾದ ಅರಸರಲ್ಲಿ ೩ನೇ ಕರ್ಕನು ಪ್ರಮುಖನಾಗಿದ್ದನು. ಇತನಿಗೆ ರಟ್ಟ ಎಂಬ ಹೆಸರಿತ್ತು. ಅವನ ಮಗನಾದ ಇಂದ್ರನಿಗೆ ರಾಷ್ಟ್ರಕೂಟ ಎಂಬ ಬಿರುದು ಇತ್ತು[೪]. 'ರಟ್ಟ ಎನ್ನುವ ಕನ್ನಡ ಮಾತು ತೊಳಬಲವನ್ನು ಸೂಚಿಸುವ ಪದವಾಗಿದೆ'. ರಟ್ಟ ಎಂಬ ಮಾತಿಗೆ ಸಮನಾದ ಅರ್ಥವನ್ನು ಸೂಚಿಸುವ ಪದ 'ರಟ್ಟರು ಕೂಟ' ಎನ್ನುವದೇ ಮುಂದೆ ರಾಷ್ಟ್ರಕೂಟ ಎಂದಾಯ್ತು, ಎಂಬುದಾಗಿ 'ಕರ್ನಾಟಕ ಇತಿಹಾಸ ದರ್ಶನದಲ್ಲಿ ಎಂ. ವಿ. ಕೃಷ್ಣರಾವ್ ಹಾಗೂ ಕೇಶವ ಭಟ್ಟರು ಹೇಳುತ್ತಾರೆ.

ಮುಂದೆ ಇವರು ಕಲ್ಯಾಣದ ಚಾಳುಕ್ಯರು ಮತ್ತು ಕಳಚೂರಿಗಳ ಸಾಮಂತರಾಗಿ ಮುಂದುವರೆದರು. ಆಗ ಸವದತ್ತಿ, ಗೋಕಾಕ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ ಮತ್ತು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಪಶ್ಚಿಮ ಭಾಗ ಮತ್ತು ಜಮಖಂಡಿ ತಾಲೂಕುಗಳು ಕುಹುಂಡಿ ಮುರುಸಾವಿರ ಪ್ರದೇಶದ ಭಾಗಗಳಾಗಿದ್ದವು.

ರಟ್ಟರ ಆಳ್ವಿಕೆಯ ಅರಸರೆಂದರೆ ನನ್ನಿ ಇತನು ೧೩ನೇ ಶತಮಾನದಲ್ಲಿ ರಟ್ಟರ ಆಳ್ವಿಕೆಯನ್ನು ಆರಂಭಿಸಿದ ಅರಸನಾಗಿದ್ದನು. ಈ ವಂಶಜರಿಂದ ಬರೆಯಿಸಿಲಾಗಿರುವ ಹಲವಾರು ಶಾಸನಗಳಿದ್ದು ಒಂದನೇ ಕಾರ್ತವೀರ್ಯನ ಶಾಸನ (ಕ್ರಿ.ಶ. ೯೦೦) ದಲ್ಲಿ ಇತನು ತೈಲಪನ ಸಾಮಂತನಾಗಿದ್ದನಲ್ಲದೆ ಕುಹುಂಡಿ ೩೦೦೦ ನಾಡನ್ನು ಆಳುತ್ತಿದ್ದನ್ನೆಂದು ತಿಳಿದು ಬರುತ್ತದೆ.

೧ನೇ ಕಾರ್ತವೀರ್ಯ (೯೮೦)– ಇವನು ಕಲ್ಯಾಣ ಚಾಳುಕ್ಯರ ಎರಡನೆಯ ತೈಲಪನ ಸಾಮಂತನಾಗಿ 'ಕುಹುಂಡಿ ಮುರುಸಾಪಿರ' ನಾಡನ್ನು ಆಳುತ್ತಿದ್ದನು[3]. ಇವನು ರಟ್ಟರ ರಾಜ್ಯದ ಬೆಳವಣಿಗೆವನ್ನು ಪ್ರಾರಂಭಿಸಿದನು. ರಟ್ಟ ರಾಜ್ಯದ ವಿಸ್ತರಣೆ ಹಾಗೂ ವೈಭವದ ಪರಾಕಾಷ್ಠೆಯನ್ನು ಕಂಡಿರುವದು ಇತನ ಆಳ್ವಿಕೆಯಾಗಿದೆ. ಇವನ ಆಳ್ವಿಕೆಯಲ್ಲಿ ಶಂಕರಲಿಂಗ ದೇವಾಲಯ, ಪಾರ್ಶ್ವನಾಥನ ದೇವಾಲಯ ನಿರ್ಮಾಣಗೊಂಡಿರುವವು ಎಂಬುದಾಗಿ ತಿಳಿಯುತ್ತದೆ. ಈ ಭಾಗದಲ್ಲಿ ಬರುವ ಅಮ್ಮಣಗಿಯಲ್ಲಿ ದ್ರಾವಿಡ ಪದ್ಧತಿಯ ಪಾರ್ಶ್ವನಾಥನ ಬಸದಿಯು ಈ ಸಮಯದಲ್ಲಿಯೇ ನಿರ್ಮಾಣವಾಗಿರಬಹುದು ಎಂಬುದಾಗಿ ಕಂಡುಬರುತ್ತದೆ[4].

ಅಂಕರಸ (ಕ್ರಿ.ಶ. ೧೦೪೮–೧೦೫೧)– ಇತನು ಚಾಳುಕ್ಯರ ಒಂದನೆಯ ಸೋಮೆಶ್ವರನ ಸಾಮಂತನಾಗಿದ್ದನು. ಇದೇ ಸಮಯದಲ್ಲಿಯೇ ಸುಗಂಧವರ್ತಿ (ಇಂದಿನ ಸವದತ್ತಿ) ನಗರವು ರಟ್ಟರ ವಶವಾಯಿತು. ಯುದ್ಧಪರಾಕ್ರಮಿಯಾದ ಅಂಕರಸನು ಅನೇಕ ಕಾಳಗಗಳಲ್ಲಿ ಭಾಗವಹಿಸಿದ್ದನು. ಇದೇ ಸಮಯದಲ್ಲಿ ದಕ್ಷಿಣದೊಳಗೆ ಚೋಳರು ದಂಡೆತ್ತಿ ಯುದ್ಧಕ್ಕಿಳಿದರು. ಅವರೊಂದಿಗೆ ಶೌರ್ಯದಿಂದ ಹೋರಾಡಿ ಓಡಿಸಿದನು. ತನ್ನ ರಾಜ್ಯವನ್ನು ವಿಸ್ತರಿಸುವದಕ್ಕಾಗಿ ಸುಗಂಧವರ್ತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಇತನು ವಿದ್ಯಾಭಿಮಾನಿಯಾಗಿದ್ದು ಶಿಕ್ಷಣಕ್ಕೆ ಪ್ರೋತ್ಸಾಹಿಸಿದನು. ಇತನು ಕ್ರಿ.ಶ. ೧೦೫೧ ಬೆಳವಿ ಶಾಸನದಲ್ಲಿ ಬೆಳವಿ ಅಗ್ರಹಾರದಲ್ಲಿಯ ಒಂದು ಛತ್ರವನ್ನು ನಡೆಸುವದಕ್ಕಾಗಿ ಕೆಲವು ದತ್ತಿಗಳನ್ನು ನೀಡಿದನೆಂದು ತಿಳಿಸಲಾಗಿರುತ್ತದೆ[2].

೩ನೇ ಕಾರ್ತವೀರ್ಯ (೧೧೩೦–೧೧೫೩)– ಇತನು ಬಿಜ್ಜಳನ ಮಗನಾದ ಸೋಯಿದೇವನ ಸಾಮಂತನಾಗಿ 'ಕುಹುಂಡಿ ಮುರುಸಾವಿರ'ದ ನಾಡನ್ನು ಆಳುತ್ತಿದ್ದನು. ಇತನ ಆಳ್ವಿಕೆಯಲ್ಲಿ ಸವದತ್ತಿಯ ರಟ್ಟರ ಕೀರ್ತಿಯು ವಿಸ್ತಾರವಾಗಿ ಹರಡಿತು. ತಾನು ಸಂಪೂರ್ಣ ಸ್ವತಂತ್ರನಾಗಬೇಕೆಂಬ ಆಸೆಯಿಂದ ನೇಸರಗಿಯಲ್ಲಿ ರಾಜಧಾನಿಯನ್ನು ಸ್ಥಾಪಿಸಿದನು. ಕ್ರಿ.ಶ. ೧೧೮೪ ರಲ್ಲಿ ಹೊಯ್ಸಳರಿಗೂ ಮತ್ತು ಯಾದವರ ನಡುವೆ ಯುದ್ಧ ಜರುಗಿತು. ಈ ಸಂದರ್ಭದಲ್ಲಿ ರಟ್ಟರು ಸ್ವತಂತ್ರಗೊಂಡ ತಮ್ಮ ರಾಜಧಾನಿಯನ್ನು ಮತ್ತೇ ಸವದತ್ತಿಯಿಂದ ಬೆಳಗಾವಿಗೆ ಸ್ಥಳಾಂತರಿಸಿದರು.

ಕುಹುಂಡಿನಾಡಿನ ನಿಸರ್ಗ ಸೌಂದರ್ಯ 'ಬೆಳಸೆಂದುಂ ಕುಂದದ ವಿಫುಲ ಫಲ, ಜಯಂ ಕ್ಷೇಮ ಧಾನಂ' ಎಂಬುದಾಗಿ ನೇಸರಗಿಯ ಶಾಸನದಲ್ಲಿ ಹೇಳಲಾಗಿದೆ. ಹಣ್ಣಿಕೇರಿ ಹಾಗೂ ತೆರದಾಳ ಶಾಸನಗಳು ಕುಹುಂಡಿ ನಾಡಿನ ವಿಸ್ತಾರವನ್ನು ಹೇಳುತ್ತವೆ. ಪಶ್ಚಿಮಕ್ಕೆ ಕೊಲ್ಲಾಪುರದ ಶಿಲಾಹಾರರು, ಉತ್ತರಕ್ಕೆ ಮಂಗಳವೆಡದ ಕಳಚೂರಿಗಳು, ದಕ್ಷಿಣಕ್ಕೆ ಗೋವೆಯ ಕದಂಬರು, ಇಂದಿನ ಬೆಳಗಾವಿಯು ಪೂರ್ವದ ಸೀಮೆಯಾಗಿತ್ತೆಂದು ತಿಳಿಯುತ್ತದೆ[೮].

೪ನೇ ಕಾರ್ತವೀರ್ಯ (ಕ್ರಿ.ಶ.೧೧೯೯–೧೨೨೨)– ಈತನು ರಟ್ಟರ ಸಂತತಿಯ ಅರಸರಲ್ಲಿಯೇ ಶ್ರೇಷ್ಠ ಹಾಗೂ ಸುಪ್ರಸಿದ್ಧನಾಗಿದ್ದನು. ಸುತ್ತಲಿನ ಪ್ರಾಂತೀಯ ಅಧಿಕಾರಿಗಳನ್ನು ಸದೆಬಡೆದು ಸೋಲಿಸಿ, ತನ್ನ ರಾಜ್ಯ ವಿಸ್ತರಣೆ ನೀತಿಯನ್ನು ಅನುಸರಿಸಿದನು. 'ಸಾಮ್ರಾಜ್ಯ ಲಕ್ಷ್ಮೀಯನ್ನನುಭವಿಸುತ್ತಮಿರೆ' ಎಂಬ ಮಾತಿನಿಂದ ಇವನು ಸ್ವತಂತ್ರ ರಾಜನಾಗಿದ್ದನು. ರಾಜ್ಯದ ತುಂಬೆಲ್ಲಾ ಸುಖ,ಶಾಂತಿ, ನೆಮ್ಮದಿ ನೆಲೆಯೂರುವಂತೆ ಶ್ರಮಿಸಿದ್ದನು.

ಚತುರಭಾಷಾ ಕವಿಯಾದ ಬಾಳಚಂದ್ರ ಕವಿ ಕಂದರ್ಪನು ರಚಿಸಿದ ಬೆಳಗಾವಿಯ ಶಾಸನದಲ್ಲಿ ಹೇಳಿರುವುದೇನೆಂದರೆ, ಇತನು ತನ್ನ ತಮ್ಮನಾದ ಮಲ್ಲಿಕಾರ್ಜುನನೊಡಗೂಡಿ ಈ ಭಾಗವನ್ನು ಆಳಿದುದಾಗಿ ತಿಳಿಯುತ್ತದೆ. ಅಲ್ಲದೆ ರಟ್ಟ ಜೀನಾಲಯದ ಶಾಂತಿನಾಥ ಜೀನಾಲಯಕ್ಕೆ ಕೆಲಭೂಮಿಯನ್ನು ದತ್ತಿಯಾಗಿ ನೀಡಿರುವನೆಂದು ಕಂಡುಬರುತ್ತದೆ. ಇವರ ಕಾಲದ ಕ್ರಿ.ಶ.೧೯೯ ಮತ್ತು ೧೨೦೨ರ ಶಾಸನಗಳು ಸಂಕೇಶ್ವರದಲ್ಲಿ ದೊರೆತಿವೆ[೯]. ಪ್ರಸ್ತುತವಾಗಿ ಇವು ಅಲ್ಲಿ ಕಂಡುಬರುವುದಿಲ್ಲ. ೧೧೮೫ರ ಭೈರಾಪುರ ಶಾಸನವು ಲಲಿತೆಯದೇವಿ ಎಂಬ ರಟ್ಟರ ರಾಣಿಯು, ತನ್ನ ಆಡಳಿತಕ್ಕೆ ಒಳಪಟ್ಟಿರುವ ಮತ್ತಿವಾಡ ಎಂಬಲ್ಲಿ ಮಹಾಪ್ರಧಾನ ಸೇನಾಪತಿ ನಾಗೇಯನಾಯಕ ಎನ್ನುವವನಿಗೆ ಸಂಕೇಶ್ವರದಲ್ಲಿನ ಛತ್ರವನ್ನು ನಡೆಸುವುದಕ್ಕಾಗಿ ಭೂಮಿ, ಮನೆ ಮತ್ತು ಹುಲ್ಲು ಬಣವಿಯನ್ನು ದತ್ತಿಯಾಗಿ ನೀಡಿದ ವಿಷಯವನ್ನು ತಿಳಿಸುತ್ತದೆ[೧೦].

ದೇವಗಿರಿಯ ಯಾದವರು :

ದಕ್ಷಿಣ ಭಾರತದ ಚರಿತ್ರೆಯಲ್ಲಿ ಪ್ರಮುಖ ಹಿಂದೂ ರಾಜಮನೆತನವಾಗಿತ್ತು. ಇವರು ೧೨ ನೇ ಶತಮಾನದ ಕೊನೆಯಲ್ಲಿ ಪರಮಾಧಿಕಾರವುಳ್ಳ ದೊರೆಗಳಾಗಿ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದರು.

ಹೇಮಾದ್ರಿ ಎಂಬ ೧೩ನೇ ಶತಮಾನದಲ್ಲಿದ್ದ ಸೇವುಣರ ಮಂತ್ರಿಯು ಸಂಸ್ಕೃತ ಭಾಷೆಯಲ್ಲಿ ಬರೆದ 'ಚಾತುರ್ವರ್ಗ ಚಿಂತಾಮನಿ' ಎಂಬ ವಿಶ್ವಕೋಶದ

"ವ್ರತಖಂಡ" ಎಂಬ ಭಾಗದ ಆರಂಭದಲ್ಲಿ ಆತನು ಸೇವುಣರ ಇತಿಹಾಸವನ್ನು ಸ್ವಾರಸ್ಯವಾಗಿ ನೀಡಿದ್ದನು[೧೧].

ಯಾದವ ವಂಶದ ಸಿಂಘಣದೇವ ಹಾಗೂ ಕೃಷ್ಣರಿಂದ ರಟ್ಟರು ಸೋಲನ್ನು ಅನುಭವಿಸಿದರು. ಅನಂತರ ಕುಹುಂಡಿ ನಾಡು ಯಾದವರ ಆಳ್ವಿಕೆಗೆ ಒಳಪಟ್ಟಿತು.

ಸುಮಾರು ಮೂರುನೂರ ವರ್ಷಗಳ ಕಾಲ ಮಾನ್ಯಕೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಳುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ನಡೆಸಿದ ಯಾದವರು ದೇವಗಿರಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರು ಹೊಯ್ಸಳರೊಂದಿಗೆ ಹೋರಾಡುತ್ತ ಕರ್ನಾಟಕದ ಉತ್ತರಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು ಇವರಲ್ಲಿ ಐದನೆಯ ಬಿಲ್ಲಮನು ಕ್ರಿ. ಶ. ೧೧೮೭, ಸಾರ್ವಭೌಮ ಪ್ರಶಸ್ತಿಯನ್ನು ಪಡೆದು ಕೊಂಡಿದ್ದನು ಇವನ ನಂತರ ಜೈತುಗಿಯು ಆಳ್ವಿಕೆ ನಡೆಸಿದನು.

ಜೈತುಗಿಯ ನಂತರ ಸುಮಾರು ಕ್ರಿ.ಶ. ೧೨೧೦ರಲ್ಲಿ ಯಾದವ ವಂಶದ ಅತ್ಯಂತ ಪ್ರಸಿದ್ದ ರಾಜರಲ್ಲಿ ಸಿಂಘಣನು ಅಧಿಕಾರ ವಹಿಸಿಕೊಂಡನು. ಸಂಕೇಶ್ವರವು ಈ ವೇಳೆಯಲ್ಲಿ ಕುಹುಂಡಿ ಮೂರುಸಾಪಿರದ ನಾಡಾಗಿದ್ದು, ಸವದತ್ತಿಯ ರಟ್ಟರ ಆಳ್ವಿಕೆಗೆ ಒಳಪಟ್ಟಿತ್ತು. ಸಿಂಘಣನು ಸವದತ್ತಿಯ ರಟ್ಟರನ್ನು ಸೊಲಿಸಿ ಗೆಲವು ಪಡೆದು ಈ ಪ್ರದೇಶವನ್ನು ವಶಪಡಿಸಿಕೊಂಡನು. ಇತನ ಆಳ್ವಿಕೆಯ ನಂತರ ಕೃಷ್ಣನು (ಕನ್ನರ) ಉತ್ತರಾಧಿಕಾರಿಯಾಗಿ ಸಿಂಹಾಸನ ಪಡೆದನು.

ಸಿಂಘಣನು ಕಲ್ಯಾಣಚಾಳುಕ್ಯರ ಆರನೆಯವಿಕ್ರಮಾದಿತ್ಯನ ಮಾಂಡಳಿಕ-ನಾಗಿಯೆ ಮುಂದುವರೆದು ಅವನಿಂದ ಹೆಚ್ಚಿನ ಅಧಿಕಾರವನ್ನು ಪಡೆದನು. ಇತನ ಎರಡು ಶಾಸನಗಳು ದೊರೆತಿದ್ದು [೧೧೪೦ಮತ್ತು ೧೧೪೨] ಅವುಗಳ ಆಧಾರದಿಂದ ಇತನ ಆಡಳಿತದ ಕಾಲವು ಸುಮಾರು ೧೧೧೫ರಿಂದ ೧೧೪೫ ರವರಗೆ ಎಂಬುವುದಾಗಿ ಊಹಿಸಬಹುದಾಗಿದೆ. ಈ ವೇಳೆಯಲ್ಲಿ ಕುಹುಂಡಿ ಮೂರುಸಾವಿರದ ನಾಡಿನಲ್ಲಿ ಒಂದಾಗಿರುವ ಸಂಕೇಶ್ವರವು ಇತನ ಆಳ್ವಿಕೆಗೆ ಒಳಪಟ್ಟಿರುವುದು ತಿಳಿಯುತ್ತದೆ. ಇತನು ಸವದತ್ತಿಯ ರಟ್ಟರ ಅರಸನಾದ ಎರಡನೆಯ ಲಕ್ಷ್ಮೀದೇವನನ್ನು ಸೊಲಿಸಿ ಈ ಪ್ರದೇಶವನ್ನು ವಶಪಡಿಸಿಕೊಂಡನು. ಸಿಂಘಣನ ಶೂರಸೇನಾನಿಯಾದ ಬಿಚ್ಚಣ್ಣ ಎಂಬುವನಿಂದ ಎರಡನೆಯ ಲಕ್ಷ್ಮೀದೇವನು ಸೋತನು (ತಿಳವಳ್ಳಿ ಶಾಸನ ೧೨೩೮). ಈ ಯುದ್ದದಲ್ಲಿ ಎರಡನೆಯ ಲಕ್ಷ್ಮೀದೇವನು ಮಡಿದಿರುವದು ತಿಳಿದು ಬಂದಿರುವುದಿಲ್ಲ ಧರ್ಮದಲ್ಲಿ ನಂಬಿಕೆಯುಳ್ಳ ಇತನು ರಾಜಕೀಯದಿಂದ ಸನ್ಯಾಸತ್ವ ಪಡೆದಿರುವನು ಎಂಬುವುದಾಗಿ ತಿಳಿಯುತ್ತದೆ.

ಸಿಂಘಣನ ಮರಣದ ನಂತರ ರಟ್ಟರೊಂದಿಗೆ ಯುದ್ದಗಳು ನಡೆದಿವೆ ಎಂಬುವುದಾಗಿ ಇತಿಹಾಸಕಾರರು ಹೇಳುತ್ತಾರೆ. ಎರಡನೆಯ ಲಕ್ಷ್ಮೀದೇವನ ಬಂಧುವಾದ ಮೂರನೇಯ ಪುಷ್ಪದೇವನು ದೇವಗಿರಿಯ ಕೃಷ್ಣನ ಮೇಲೆ ಯುದ್ದಕ್ಕೆ ಹೋಗಲು ಸಹಾಯ ಮಾಡಿದನು. ಆದರೆ ಕೃಷ್ಣನ ಮಹಾಪ್ರಧಾನಿಯಾದ ನಾಗರಸನು ರಟ್ಟರ ಅರಸರನ್ನು ಸಂಪೂರ್ಣವಾಗಿ ಸೋಲಿಸಿದನು, ಅಲ್ಲದೆ ಆ ಪ್ರಾಂತ್ಯವನ್ನು ಯಾದವರ ಆಳ್ವಿಕೆಗೆ ವಶಪಡಿಸಿಕೊಂಡನು. ಅನಂತರ ಕುಹುಂಡಿ ಮೂರುಸಾಸಿರದ ನಾಡು ಸಂಪೂರ್ಣವಾಗಿ ಯಾದವರ ಆಳ್ವಿಕೆಗೆ ಒಳಪಟ್ಟಿತು.

ಕಲ್ಯಾಣದ ಚಾಳುಕ್ಯರ ೪ನೇ ಸೋಮೇಶ್ವರನ ಆಳ್ವಿಕೆಯಲ್ಲಿ (ಕ್ರಿ.ಶ. ೧೧೮೪) ದೇವಗಿರಿ ಯಾದವರ ಧಾಳಿಗಳು ಈ ಭಾಗದಲ್ಲಿ ಪ್ರಾರಂಭವಾಗಿ ಅವರ ಆಡಳಿತಕ್ಕೆ ಒಳಪಟ್ಟವು. ಯಾದವ ವಂಶದ ಅರಸರಲ್ಲಿ ಸಿಂಘನ, ಕೃಷ್ಣ ಅಥವಾ ಕನ್ನರ, ಮಹಾದೇವ, ಮತ್ತು ರಾಮಚಂದ್ರರು ಪ್ರಮುಖರಾಗಿದ್ದರು. ೧ನೇ ಸಿಂಘನ ಉತ್ತರಾಧಿಕಾರಿಯಾಗಿದ್ದ ಕನ್ನರ (ಕ್ರಿ.ಶ. ೧೨೪೭-೬೧)ನ ಶಾಸನವು ಶ.ಕ. ೧೧೭೯ ರ ಕಾಲಕ್ಕೆ ಸಂಬಂಧಿಸಿದ್ದು ಬೆಳಗಾವಿಯಲ್ಲಿ ದೊರಕಿದೆ. ಇದು ದಳವಾಯಿ ಭೋಗದೇವ ಯಾದವ ಎನ್ನುವವನು ಗ್ರಾಮ ದೇವತೆಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ[೧೨]. ಈ ಅರಸನ ಕ್ರಿ.ಶ. ೧೨೬೦ ರ ಶಾಸನವು ಅರ್ಜುನವಾಡದಲ್ಲಿ ದೊರೆತಿರುತ್ತದೆ. ಐತಿಹಾಸಿಕವಾಗಿ ಈ ಶಾಸನವು ಮಹತ್ವವನ್ನು ಪಡೆದಿರುತ್ತದೆ. ಈ ಶಾಸನವು ಬಸವೇಶ್ವರರ ಅಣ್ಣನಾದ ದೇವರಾಜನ ಮೊಮ್ಮಗ ಹಾಲಬಸವಿಶ ಎಂಬುವವನಿಗೆ ಯಾದವ ಕನ್ನರನ ಮಂತ್ರಿಯಾದ ಚೌಡಿಶೆಟ್ಟಿಯು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ[೧೩]. ಇಲ್ಲಿ ಬಸವೇಶ್ವರರ ಪ್ರಸ್ತಾಪ ಬರುವದರಿಂದ ಇತಿಹಾಸಕಾರರು ಈ ಶಾಸನಕ್ಕೆ ಮಹತ್ವವನ್ನು ನೀಡಿರುತ್ತಾರೆ. ಹಾಲಶಂಕರ ದೇವಾಲಯದ ಬದಿಯಲ್ಲಿ ಮಣ್ಣಿಗಾಗಿ ನೆಲವನ್ನು ಅಗಿಯುವಾಗ ಒಂದು ಶಾಸನ ದೊರೆತಿದೆ. ಇದು ಸುಮಾರು ೧೨ನೇ ಶತಮಾನಕ್ಕೆ ಸಂಬಂಧಿಸಿದ ಸೀಮೆಯ ಕಲ್ಲು. ಇದು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನದ ಪೀಠದಲ್ಲಿದೆ. ಬಸವಣ್ಣನವರ ವಂಶಜರ ಗ್ರಾಮದಲ್ಲಿಯೇ ಸಿಕ್ಕ ಅಪೂರ್ವತೆಯಿಂದ ಕೂಡಿದ ಇದು ಬಸವಣ್ಣನವರನ್ನು 'ದಣ್ಣಾಯಕ' ಎಂದು ಕರೆದ ಪ್ರಥಮ ಶಾಸನವಾಗಿರುತ್ತದೆ[೧೪]. ಯಾದವರಿಗೆ ಸಂಬಂಧಿಸಿದ ಕ್ರಿ.ಶ. ೧೨೬೫ ರ ಶಾಸನವೊಂದು ಯಾದಗೂಡದಲ್ಲಿ ದೊರೆತಿದ್ದು ಹಾಳಾಗಿರುವ ಸ್ಥಿತಿಯಲ್ಲಿರುತ್ತದೆ.

ದೆಹಲಿ ಸುಲ್ತಾನರು :

ಮಧ್ಯಕಾಲಿನ ಚರಿತ್ರೆಯಲ್ಲಿ ದೆಹಲಿ ಸುಲ್ತಾನರ ಆಳ್ವಿಕೆ ಪ್ರಮುಖವಾಗಿದೆ. ೧೪ನೇ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಭಾರತದ ಮೇಲೆ ಮುಸ್ಲಿಂ ಧಾಳಿಗಳು ಆರಂಭವಾದವು. ಕ್ರಿ.ಶ.೧೩೧೦ ರಲ್ಲಿ ಅಲ್ಲಾವುದ್ದೀನ ಖಿಲ್ಜಿಯ ಮಹಾದಂಡನಾಯಕ ಮಲ್ಲಿಕಾಫರನ ನೇತೃತ್ವದಲ್ಲಿ ಸೈನ್ಯವನ್ನು ದಂಡ ಯಾತ್ರೆಗೆ ಕಳುಹಿಸಿದನು. ಇವನು ಕ್ರಿ.ಶ. ೧೩೧೧ ರಲ್ಲಿ ದ್ವಾರಸಮುದ್ರ ಮತ್ತು ೧೩೧೩ ರಲ್ಲಿ ದೇವಗಿರಿಯ ಮೇಲೆ ದಾಳಿಮಾಡಿ ಅಪಾರ ಸಂಪತ್ತನ್ನು ಕೊಳ್ಳೆಹೊಡೆದನು. ಯಾದವರ ಎಲ್ಲ ಪ್ರದೇಶಗಳು ದೆಹಲಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದವು[೧೫]. ಮಹಮ್ಮದಬಿನ ತುಘಲಕನ ಕಾಲದಲ್ಲಿ (ಕ್ರಿ.ಶ. ೧೩೨೫–೫೧) ಈ ಪ್ರದೇಶವನ್ನು ಅವನ ಪ್ರತಿನಿಧಿಯಾಗಿ ಪ್ರಭು ಬಸವಂತರಾಯನು ಆಳುತ್ತಿದ್ದನು. (ವಂಟಮುರಿ ದೇಸಾಯಿಯವರ ಮೂಲಪುರುಷ). ಆದರೆ ಕೆಲವೇ ದಿನಗಳಲ್ಲಿ ಮಹಮ್ಮದಬಿನ್ ತುಘಲಕನು ತನ್ನ ಮೊದಲನೆಯ ಅಮೀರನನ್ನು ನೇಮಿಸಿದನು.

ಕ್ರಿ.ಶ. ೧೩೪೭ ಹೊರಡಿಸಿದ ಚಕ್ರವರ್ತಿಯ ಆಜ್ಞೆಯಲ್ಲಿ ಹುಕ್ಕೇರಿಯ ಅಮೀರನ ಹೆಸರು ಉಲ್ಲೇಖಿತವಾಗಿದೆ[೧೬]. ಬೆಳಗಾವಿ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಚಕ್ರವರ್ತಿಯು ಇಬ್ಬರು ಅಧಿಕಾರಿಗಳನ್ನು ನೇಮಿಸಿದನು. ಅವರಲ್ಲಿ ಒಬ್ಬನು ರಾಯಬಾಗದಲ್ಲಿದ್ದರೆ ಇನ್ನೊಬ್ಬನು ಹುಕ್ಕೇರಿಯಲ್ಲಿದ್ದನು. ಎಂಬುದಾಗಿ 'ಫೆರಿಸ್ತಾ'ರವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಾಯಶಃ ಆ ಅಧಿಕಾರಿ ಗಜಬರನಾಖಾನ ಆಗಿರಬೇಕು. ಇವನು ಈ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದನು. 'ಟಕರಿಖಾನಾಪುರ' ರಣರಂಗದಲ್ಲಿ ಗಜಬರಖಾನನ ಮರಣವಾಯಿತು. ಇಂದಿಗೂ ಅವನ ಸಮಾಧಿಯನ್ನು ಗಜಬರವಾಡಿಯಲ್ಲಿ ಕಾಣಬಹುದು. ಈ ಸಮಾಧಿಯ ಗುಮ್ಮಟದ ಕಟ್ಟಡವನ್ನು ನದಿಯ ಕೇತುಗೌಡ ದೇಸಾಯಿಯು ಕಟ್ಟಿಸಿದನು.

ಬಹಮನಿ ಸುಲ್ತಾನರು :

ಬಹಮನಿ ಸುಲ್ತಾನರ ಕಾಲದಲ್ಲಿ ಸುಲ್ತಾನ ಶಿಯಾಬುದ್ದೀನ ಮಹಮ್ಮದನ ಕಾಲದಲ್ಲಿ (೧೪೮೨–೧೫೧೮) ಕೊಂಕಣದಲ್ಲಿ (ಗೋವಾ) ಪ್ರಾಂತಾಧಿಕಾರಿಯಾಗಿದ್ದ ಬಹದ್ದೂರ ಗಿಲಾನಿಯು ಸುಲ್ತಾನನ ವಿರುದ್ಧ ದಂಗೆಯೆದ್ದು ಗೋವಾ ಮತ್ತು ಬೆಳಗಾವಿ ಕ್ರಿ.ಶ. ೧೪೮೯ ರಲ್ಲಿ ವಶಪಡಿಸಿಕೊಂಡು ಸಂಕೇಶ್ವರವನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಇವನ ಕಾಲದಲ್ಲಿಯೇ ಸಂಕೇಶ್ವರದ ಹತ್ತಿರ ಗುಡ್ಡದ ಮೇಲಿನ ಕೋಟೆಯು ನಿರ್ಮಿತವಾಯಿತು[೧೭]. ಸುಲ್ತಾನ ಮಹಮ್ಮದನು ಕ್ರಿ.ಶ.

೧೪೯೩ ರಲ್ಲಿ ಬಹದ್ದೂರ ಗಿಲಾನಿಯನ್ನು ಸೋಲಿಸಿ ಸಂಕೇಶ್ವರವನ್ನು ವಶಪಡಿಸಿಕೊಂಡನು. ೧೪೯೪ ರಲ್ಲಿ ಬಹದ್ದೂರ್ ಗಿಲಾನಿಯು ಮರಣ ಹೊಂದಿದ್ದರಿಂದ ಐನ್-ಉಲ್-ಮುಲ್ಕನನ್ನು ಈ ಪ್ರದೇಶದ ಆಡಳಿತಗಾರನನ್ನಾಗಿ ನೇಮಕ ಮಾಡಲಾಯಿತು.

ಬಿಜಾಪುರದ ಆದಿಲ್‌ಶಾಹಿಗಳು :

ಬಿಜಾಪುರದ ಯುಸೂಫ್ ಆಧಿಲ್‌ಖಾನನು ತನ್ನ ಸ್ವತಂತ್ರತೆಯನ್ನು ಘೋಷಿಸಿಕೊಂಡ ನಂತರದಲ್ಲಿ ಐನ್-ಉಲ್-ಮುಲ್ಕ್‌ನು ತನ್ನ ನಿಷ್ಠೆಯನ್ನು ಬಿಜಾಪೂರಕ್ಕೆ ವರ್ಗಾಯಿಸಿದನು. ಇವನ ಕಾಲದಲ್ಲಿ ಸಂಕೇಶ್ವರ ಪ್ರದೇಶವು ಅಭಿವೃದ್ಧಿಯನ್ನು ಪಡೆದಿರುತ್ತದೆ. ಇವನು ಹುಕ್ಕೇರಿಯಲ್ಲಿ ಕೋಟೆ ಮತ್ತು ದೊಡ್ಡ ಗುಮ್ಮಟವನ್ನು ಕಟ್ಟಿಸಿದನು. ಇವನು ಕೆರೆ, ಬಾವಿ, ಕಾರಂಜಿಗಳನ್ನು ಕಟ್ಟಿಸಿದನು. ಇವನು ಹೂ-ಬನಗಳನ್ನು ನಿರ್ಮಿಸಿದ್ದನು. ಆ ಕಾಲದಲ್ಲಿಯೇ ಇಲ್ಲಿನ ಉತ್ತಮ ದರ್ಜೆಯ ಹೂಗಳು ಬಿಜಾಪೂರಕ್ಕೆ ರಫ್ತಾಗುತ್ತಿದ್ದು ಹುಕ್ಕೇರಿಯ ಹೂವಿನಕೆರೆಯೆಂಬ ಹೆಸರು ಪಡೆದಿರಬಹುದೆಂದು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಐನ್-ಉಲ್-ಮುಲ್ಕ ಗಿಲಾನಿಯ ನಂತರದಲ್ಲಿ ಅವನ ಸಹೋದರನಾದ ಫತೇಹ-ಉಲ್-ಮುಲ್ಕ (ಕ್ರಿ.ಶ. ೧೫೪೭-೧೫೬೮) ನು ಹುಕ್ಕೇರಿಯ ಆಡಳಿತಗಾರನಾಗಿದ್ದನು. ಕ್ರಿ.ಶ. ೧೫೦೨ ರಲ್ಲಿ ಬಿಜಾಪೂರದ ಯುಸೂಫ್ ಆದಿಲ್ ಷಾಹನ ಆಡಳಿತಕ್ಕೆ ಒಳಪಟ್ಟಿತ್ತು. ಅನಂತರ ಒಂದನೆಯ ಇಬ್ರಾಹಿಂ ಮರಣದ (೧೫೫೮) ನಂತರ ಅಧಿಕಾರಕ್ಕೆ ಬಂದ ಒಂದನೆಯ ಅಲಿಯಕಾಲದಲ್ಲಿ 'ರಣದುಲ್ಲಾಖಾನ್' ಎಂಬುವವನಿಗೆ ಹುಕ್ಕೇರಿಯು ಕ್ರಿ.ಶ. ೧೫೮೯ ರಲ್ಲಿ ಜಹಗೀರಾಗಿ ನೀಡಲ್ಪಟ್ಟಿತು. ರಣದುಲ್ಲಾಖಾನನ ತರುವಾಯ ಅವನ ಮಗ ರುಸ್ತುಂಜಮಾನ್‌ನು ಹುಕ್ಕೇರಿಯ ಆಡಳಿತಗಾರನಾಗಿದ್ದನು. (ಕ್ರಿ.ಶ. ೧೬೦೦-೧೬೪೧). ಇವನು ಚೀನಿಗುಮ್ಮಟ ಮತ್ತು ಬಸ್ ನಿಲ್ದಾಣದ ಹತ್ತಿರವಿರುವ 'ಕದಮ್-ಎ-ರಸೂಲ್' ಮಸೀದೆಯನ್ನು ನಿರ್ಮಿಸಿದನು[೨೨]. ಚೀನಿ ಗುಮ್ಮಟದ ಒಳಭಾಗದಲ್ಲಿ ಟೈಲ್ಸ್‌ಗಳಿಂದ ಅಲಂಕೃತವಾಗಿರುತ್ತದೆ. ರುಸ್ತುಂ ಜಮಾನ್‌ನು ಕ್ರಿ.ಶ. ೧೬೪೧ ರಲ್ಲಿ ಮಿರಜ್ ಪ್ರಾಂತ್ಯದ ಆಡಳಿತಗಾರನಾಗಿ ನೇಮಕಗೊಂಡಾಗ ಹುಕ್ಕೇರಿ ಮತ್ತು ಕೋಲ್ಹಾಪೂರ ಬಹುಭಾಗಗಳು 'ಅಬ್ದುಲ ಖರೀದ' ಎಂಬುವವನ ಆಡಳಿತಕ್ಕೆ ಒಳಪಟ್ಟವು. ಮುಂದೆ ಪನ್ಹಾಳಾದ ಮರಾಠ ಅರಸರು ಕ್ರಿ.ಶ. ೧೬೪೩ ರಲ್ಲಿ ಈ ಭಾಗವನ್ನು ತಮ್ಮ ಪ್ರಭುತ್ವಕ್ಕೊಳಪಡಿಸಿಕೊಂಡರು.

ಮರಾಠರು ಮತ್ತು ಪೇಶ್ವೆಯರು :

ಇಲ್ಲಿಗೆ ಮಹಮ್ಮದಿಯರ ಆಡಳಿತ ಕೊನೆಗೊಂಡು ಈ ಪ್ರದೇಶವು ಮರಾಠರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ. ೧೬೬೮ ರಿಂದ ೧೬೮೬ ರ ವರೆಗೆ ಹುಕ್ಕೇರಿಯು ಮುಧೋಳದ ಘೋರ್ಪಡೆಯವರ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳಲಾಗಿರುತ್ತದೆ[೧೯]. ನಂತರ ಈ ಪ್ರದೇಶವು ಶಿವಾಜಿಯ ವಶವಾಯಿತು (೧೬೬೪-೮೦).

ಕ್ರಿ.ಶ. ೧೬೮೭ ರಲ್ಲಿ ಬಿಜಾಪುರವು ಮೊಗಲರಿಂದ ಸಂಪೂರ್ಣವಾಗಿ ಪತನವಾದ ನಂತರ ಸಂಕೇಶ್ವರ ಭಾಗವು ಮರಾಠರ ಸಂಪೂರ್ಣ ಆಳ್ವಿಕೆಗೆ ಒಳಪಟ್ಟಿತು. ಈ ಭಾಗವು ಆಗ ವಂಟಮೂರಿ ದೇಸಾಯಿಯವರ ಪೂರ್ವಜರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೧೭೬೩ ರಲ್ಲಿ ಮಾಧವರಾವ ಪೇಶ್ವೆಯು ಈ ಭಾಗವನ್ನು ಕೊಲ್ಹಾಪೂರ ಸರ್ದಾರರ ಆಡಳಿತಕ್ಕೆ ಒಳಪಡಿಸಿದನು. ಮುಂದೆ ಅವರ ಕಿರುಕುಳದಿಂದ ಈ ಪ್ರದೇಶವನ್ನು ಬೇರ್ಪಡಿಸಿ ಈ ಭಾಗಕ್ಕೆ ಸ್ವತಂತ್ರವಾದ ಅಧಿಕಾರಿಯನ್ನು ನೇಮಿಸಿದನು. ಪೇಶ್ವೆಯ ಪತನಾ ನಂತರದಲ್ಲಿ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತು. ೧೮೦೪ ರಲ್ಲಿ ಜನರಲ್ ವೆಲ್ಲೆಸ್ಲಿಗೆ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಹುಕ್ಕೇರಿ, ಚಿಕ್ಕೋಡಿ ಮತ್ತು ಮುನವಳ್ಳಿ, ನಿಪ್ಪಾಣಿಯು ವಂಟಮುರಿ ದೇಸಾಯಿಯವರ ಆಳ್ವಿಕೆಗೆ ನೀಡಲ್ಪಟ್ಟವು. ಅನಂತರದಲ್ಲಿ ಬ್ರಟೀಷರ ಪ್ರಭಾವವು ಪರಿಣಾಮಕಾರಿಯಾಗಿದ್ದರಿಂದ ಅವರ ಅಧೀನತ್ವಕ್ಕೆ ಒಳಪಟ್ಟಿತು.

ಬ್ರಿಟಿಷರ ಆಳ್ವಿಕೆ :

೧೮೮೫ ರ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯ ನಂತರದಲ್ಲಿ ಈ ಭಾಗದ ಮೇಲೆ ಸಂಘಟನೆಯ ಪ್ರಭಾವವು ಬೀರಿತು. ೧೮೯೫ ರಲ್ಲಿ ಪ್ರಾಂತಿಯ ಪರಿಷತ್ ಬೆಳಗಾವಿಯಲ್ಲಿ ಸಮಾವೇಶಗೊಂಡಿತು. ಇದರ ಅಧ್ಯಕ್ಷತೆಯನ್ನು ಸರ್ ಡಿ.ಇ. ವಾಛಾರವರು ವಹಿಸಿದ್ದರು. ಇದರಲ್ಲಿ ರಾಷ್ಟ್ರೀಯ ನಾಯಕರಾದ ಫಿರೋಜಷಹ ಮೆಹತಾ, ಗೊಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕರು, ಮುಂತಾದ ರಾಷ್ಟ್ರೀಯ ಹೋರಾಟಗಾರರು ಭಾಗವಹಿಸಿದ್ದರು. ನಂತರದಲ್ಲಿ ೧೯೧೬ ರಲ್ಲಿ ಬಾಲಗಂಗಾಧರ ತಿಲಕರು ಹೊಂರೂಲ್ ಚಳುವಳಿಯನ್ನು ಆರಂಭಿಸಿದರು. ಈ ಚಳುವಳಿಯು ಉಗ್ರರೂಪದ ಹೋರಾಟವನ್ನು ಅನುಸರಿಸಿತು. ಈ ಹೋರಾಟದ ಶಾಖೆಯು ಸಂಕೇಶ್ವರದಲ್ಲಿ ಸ್ಥಾಪನೆಗೊಂಡಿತು. ಈ ರಾಷ್ಟ್ರೀಯ ಚಳುವಳಿಯಲ್ಲಿ ಈ ಭಾಗದಿಂದ ಅನೇಕ ಜನರು ಭಾಗವಹಿಸಿದ್ದರು.

ಸ್ವಾತಂತ್ರ್ಯ ಹೋರಾಟವು ದಿನಗಳು ಕಳೆದಂತೆ ಹೆಚ್ಚಾಗ ತೊಡಗಿತು. ೧೯೧೯ ರಲ್ಲಿ ಜಾಲಿಯನವಾಲಾಭಾಗದಲ್ಲಿ ಹತ್ಯಾಕಾಂಡವಾಯಿತು. ಈ ಘಟನೆಯಿಂದ

ದೇಶಾದ್ಯಂತ ಚಳುವಳಿ ಜರುಗಿತು. ಅಪ್ಪಣ್ಣಗೌಡ ಪಾಟೀಲರು ಸಂಕೇಶ್ವರದಲ್ಲಿ ಈ ಘಟನೆಯನ್ನು ವಿರೋಧಿಸಿ ಅವರ ಅನುಯಾಯಿಗಳೊಂದಿಗೆ ಸುತ್ತಲಿನ ಹಳ್ಳಿಗಳಲ್ಲಿ ಪ್ರತಿಭಟನಾ ಚಳುವಳಿಗಳನ್ನು ಕೈಗೊಂಡರು.

೧೯೨೦ ರಲ್ಲಿ ಅಸಹಕಾರ ಚಳುವಳಿಯು ಜರುಗಿತು. ಇದರಲ್ಲಿಯೂ ಸಹ ಈ ಭಾಗದ ಜನರು ತಮ್ಮ ಬೆಂಬಲವನ್ನು ನೀಡಿ ಚಳುವಳಿ ನಡೆಸಿದ್ದರು.

೧೯೨೭ ರಲ್ಲಿ ಬ್ರಿಟಿಷ ಸರ್ಕಾರವು ಭಾರತಕ್ಕೆ ಸೈಮನ್ ಕಮೀಷನನ್ನು ಕಳುಹಿಸಿತು. ಈ ಸಂದರ್ಭದಲ್ಲಿ ಸೈಮನ್ ಕಮೀಷನನ್ನು ವಿರೋಧಿಸಿ, 'ಸೈಮನ್‌ರೆ ಹಿಂತಿರುಗಿ' ಎಂಬುದಾಗಿ ಸಂಕೇಶ್ವರದಲ್ಲಿಯೂ ಚಳುವಳಿ ಜರುಗಿತು.

೧೯೨೯ ರಲ್ಲಿ ಲಾಹೋರಿನ ಕಾಂಗ್ರೇಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಘೋಷಣೆಯಾಯಿತು. ಇದರ ಅನ್ವಯವಾಗಿ ಗಾಂಧೀಜಿಯವರು ೧೯೩೦ ರಲ್ಲಿ ಸ್ವಾತಂತ್ರ್ಯ ದಿನಾಚರಣೆ ನೆರವೇರಿಸಲು ಕರೆ ನೀಡಿದರು. ಈ ವೇಳೆಯಲ್ಲಿ ಅಪ್ಪಣ್ಣಗೌಡರ ಕ್ರಾಂತಿ ದಳವು ಮೆರವಣಿಗೆ ಮತ್ತು ಸಮಾರಂಭವನ್ನು ಏರ್ಪಡಿಸಿ ಸಂಪೂರ್ಣ ಸ್ವಾತಂತ್ರ್ಯ ಘೋಷಣೆಯನ್ನು ಪ್ರತಿಧ್ವನಿಸಿ ಪ್ರತಿಜ್ಞೆ ಸ್ವೀಕರಿಸಿದರು.

೧೯೩೦ ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕೆ ಕರೆ ನೀಡಿದರು. ಈ ಕರೆಗೆ ಸಂಕೇಶ್ವರದ ಜನತೆಯು ತಮ್ಮ ಬೆಂಬಲ ನೀಡಿ ಹೋರಾಟ ಚಳುವಳಿಯನ್ನು ಕೈಗೊಂಡರು.

೧೯೩೩ ರಲ್ಲಿ ದೇಶದ ತುಂಬೆಲ್ಲಾ ಗಾಂಧಿಯಾತ್ರೆ ಆರಂಭಗೊಂಡಿತು. ಈ ಯಾತ್ರೆಯು ಸಂಕೇಶ್ವರಕ್ಕೆ ಆಗಮಿಸಿದಾಗ ಅಪ್ಪಣ್ಣಗೌಡರು ಭವ್ಯ ಸ್ವಾಗತವನ್ನು ನೀಡಿ ತಮ್ಮ ಸಹಕಾರವನ್ನು ಕೊಟ್ಟು ಪ್ರೋತ್ಸಾಹಿಸಿದರು.

೧೯೪೨ ರ 'ಭಾರತ ಬಿಟ್ಟು ತೊಲಗಿರಿ' ಎಂಬ ಚಳುವಳಿಯು ಜರುಗಿತು. ಗಾಂಧೀಜಿಯವರು ಈ ಚಳುವಳಿಗೆ ಕರೆ ನೀಡಿದರು. ಈ ಕರೆಯಿಂದ ಸಂಕೇಶ್ವರದ ಅಪ್ಪಣ್ಣಗೌಡಾ ಪಾಟೀಲರ ಮುಖಂಡತ್ವದಲ್ಲಿ ಅನುಯಾಯಿಗಳೊಂದಿಗೆ ಚಳುವಳಿಗಿಳಿದರು.

ಹೀಗೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಈ ಭಾಗದ ಸೇನಾನಿಗಳು ತಮ್ಮನ್ನು ತೊಡಗಿಸಿಕೊಂಡಿರುವದು ಕಂಡು ಬರುತ್ತದೆ

ಅಡಿ ಟಿಪ್ಪಣಿಗಳು

೧. ಕರ್ನಾಟಕದ ಸಂಕ್ಷಿಪ್ತ ಇತಿಹಾಸ ; ಡಾ. ಸೂರ್ಯನಾಥ ಕಾಮತ ; ೧೯೭೩ ; ಪು.೪೮
೨. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೩೫೭, ೩೫೮
೩. ನಂದನವನ (ಸಂ.) ; ಡಿ. ಪ್ಪಿ. ಪುರಾಣಿಕ ; ೧೯೮೩ ; ಪು. ೪೮
೪. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೫
೫. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೮
೬. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೮
೭. ಆ್ಯನುವೆಲ್ ರಿಪೋರ್ಟ್ ಆನ್. ಸೌಥ ಇಂಡಿಯನ್ ಎಪಿಗ್ರಫಿ ೧೯೪೨–೪೩ ; ಅಪೆಂಡಿಕ್ಸ್ – ಇ
೮. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೧೭
೯. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೮೯
೧೦. ಆ್ಯನುವೆಲ್ ರಿಪೋರ್ಟ್ ಆನ್. ಸೌಥ ಇಂಡಿಯನ್ ಎಪಿಗ್ರಫಿ ೧೯೪೨–೪೩ ; ಅಪೆಂಡಿಕ್ಸ್ – ಇ
೧೧. ಕರ್ನಾಟಕದ ಸಂಕ್ಷಿಪ್ತ ಇತಿಹಾಸ ; ಡಾ. ಸೂರ್ಯನಾಥ ಕಾಮತ ; ೧೯೭೩ ; ಪು.೬೧
೧೨. ಆ್ಯನುವೆಲ್ ರಿಪೋರ್ಟ್ ಆನ್. ಸೌಥ ಇಂಡಿಯನ್ ಎಪಿಗ್ರಫಿ ೧೯೪೨–೪೩ ; ಅಪೆಂಡಿಕ್ಸ್ ಇ
೧೩. ಎಪಿಗ್ರಫಿಯ ಇಂಡಿಕಾ ಸಂಪುಟ ೨೧ ; ಪು.೯
೧೪. ಬಸವಣ್ಣನವರ ವಂಶಜರು ಕರ್ನಾಟಕ ಭಾರತಿ ಸಂಪುಟ ೯ ; ಸಂಚಿಕೆ ೪ ; ಎಂ. ಎಂ. ಕಲಬುರ್ಗಿ ;; ಪು.೯
೧೫. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೦೧
೧೬. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೦೧
೧೭. ಸಂಕೇಶ್ವರದ ಸಾಂಸ್ಕೃತಿಕ ದರ್ಶನ ; ಸಂಪುಟ ೧೧ ; ಡಾ. ಶಿ. ಬಾ. ಪಾಟೀಲ ; ೧೯೯೬ ; ಪು.೨೧೮
೧೮. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೮೯೨
೧೯. ಹುಕ್ಕೇರಿ ತಾಲೂಕು ದರ್ಶನ ; ಆರ್. ಆರ್. ಮುತಾಲಿಕ ; ೧೯೮೭ ; ಪು.೧೪

ಅಧ್ಯಾಯ ೪

ಸಂಕೇಶ್ವರದ ಸ್ವಾತಂತ್ರ್ಯ ಹೋರಾಟಗಾರರು

ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟವು ಚರಿತ್ರೆಯಲ್ಲಿ ಮಹತ್ವದ ಘಟನೆಗಳ ಮೂಲಕವಾಗಿ ವ್ಯಕ್ತವಾಗುತ್ತದೆ. ಈ ರಾಷ್ಟ್ರೀಯ ಹೋರಾಟದಲ್ಲಿ ಕನ್ನಡ ನಾಡಿನ ಪಾತ್ರವು ಬಹು ಮುಖ್ಯವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಸತ್ಯಾಗ್ರಹ, ಹೋರಾಟ, ಚಳುವಳಿಗಳು ಜರುಗಿದ್ದು ಇದರ ಪ್ರಭಾವವು ಕರ್ನಾಟಕದ ಮೇಲೆ ಪ್ರಭಾವ ಬೀರಿತು. ಇದರಿಂದ ಕರ್ನಾಟಕದ ಉತ್ತರ ಭಾಗದಲ್ಲಿರುವ ಬೆಳಗಾವಿ ಜನತೆಯ ಹೊರಾಟವು ಐತಿಹಾಸಿಕವಾಗಿದೆ. ಈ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿರುವ ಸಂಗತಿಗಳು ಕಂಡು ಬರುತ್ತವೆ. ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಈ ಭಾಗದ ಮಹಾನ ಹೋರಾಟಗಾರರು ಧೀರರಾಗಿ ಹೋರಾಡಿರುವದು ಉಲ್ಲೇಖವಾಗಿದೆ. ಅಂಥಹವರಲ್ಲಿ ಶ್ರೀ ಅಪ್ಪಣ್ಣಗೌಡ ಪಾಟೀಲ, ಶ್ರೀ ಎಂ. ಪಿ. ಪಾಟೀಲ, ಶ್ರೀ ಮಹಾದೇವಪ್ಪ ಮೆಂಡಗುದ್ದಿ ಮತ್ತು ಶತಾಯುಷಿ ಶಿವಪ್ಪಣ್ಣ ಗುಂಡಾಳಿ ಪ್ರಮುಖರಾಗಿರುವರು.

ಶ್ರೀ ಅಪ್ಪಣ್ಣಗೌಡ ಪಾಟೀಲ :

ಬಾಲ್ಯ ಜೀವನ : ಸಂಕೇಶ್ವರದ ನಿರಂಜನ ಪಾಟೀಲರು ವೀರಶೈವ ಗೌಡ ಮನೆತನದವರಾಗಿದ್ದರು. ಕೊಡುಗೈ ದೊರೆಗಳಾಗಿದ್ದರು. ನಿರಂಜನ ಗೌಡರು ಶೌರ್ಯಕ್ಕಾಗಿ ಮೆಚ್ಚಿಗೆಯಿಂದ ಬಿಜಾಪೂರದ ಆದಿಲಶಾಹಿಗಳಿಂದ ಇನಾಮಿ ಭೂಮಿಯನ್ನು ಪಡೆದರು. ಸುಸಂಸ್ಕೃತರು, ಧರ್ಮಪರರು ಇವರ ಮನೆತನದ ಸತ್ಯಗೌಡ ಮಾಲಕಪ್ಪರ ಹಿರಿಯ ಮಗ ಸಾತಗೌಡರು. ಸಾತಗೌಡರು ಬಾಯವ್ವರ ಮರುಚಲ ಮಗನೆ ಸತ್ಯಗೌಡಾ. ಅನ್ವರ್ಥಕ ನಾಮದಲ್ಲಿ ಅಪ್ಪಣ್ಣಗೌಡ ಎಂಬುದಾಗಿ ಬೆಳೆದರು. ತಂದೆ ತಾಯಿಯರ ಪ್ರೀತಿ ವಾತ್ಸಲ್ಯದ ಕಣ್ಮಣಿಯಾಗಿದ್ದ ಅಪ್ಪಣ್ಣರು ೨೦.೦೩.೧೮೯೯ ರಲ್ಲಿ ಜನಿಸಿದರು. ಊರಲ್ಲಿಯೇ ಮರಾಠಿ ಭಾಷೆಯಲ್ಲಿ ಏಳನೆಯ ತರಗತಿಯವರೆಗೆ ಶಿಕ್ಷಣ ಪಡೆದರು. ಜೊತೆಗೆ ಅಂದಿನ ಶಿಕ್ಷಕರು ಬೋಧಿಸುತ್ತಿದ್ದ ದೇಶಾಭಿಮಾನದ ಕಥೆಗಳನ್ನು ಕೇಳಿ ಸ್ವಾತಂತ್ರ್ಯದ ಬಗೆಗೆ ಕೆಚ್ಚನ್ನು ಬೆಳೆಸಿಕೊಂಡರು[೧].

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು :

ಅಪ್ಪಣ್ಣಗೌಡರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಗಾಂಧೀಜಿಯವರ ಪ್ರಭಾವ ಬೀರಿತು. ಗಾಂಧೀಜಿ ನಾಯಕತ್ವದಲ್ಲಿ ಅಸಹಕಾರ ಚಳುವಳಿ, ದಂಡಿ ಸತ್ಯಾಗ್ರಹ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ,

ಚಳುವಳಿಗಳು ಜರುಗಿದವು. ಈ ಚಳುವಳಿಯಲ್ಲಿ ಅಪ್ಪಣ್ಣರು ಧುಮುಕಿ ಖಾದಿ ಪ್ರಚಾರ ಕೈಕೊಂಡರು. ಅನಂತರ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಕ್ಕೆ ಕ್ರಾಂತಿ ದಳವನ್ನು ಕಟ್ಟಿದರು.

ಕ್ರಾಂತಿ ದಳದ ನೇತಾರರಾಗಿ :

ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕರ್ತರಿಗೆ ಇವರ ಮನೆಯು ದಾಸೋಹದ ಮಠ, ಗಂಜಿಯ ಕೇಂದ್ರವಾಯಿತು. ಈ ಭಾಗದಲ್ಲಿ ಡಾ: ನಾ.ಸು.ಹರ್ಡಿಕರರ ಸೇವಾ ದಳ ಬೆಳೆಯುತ್ತಿದ್ದ ಕಾಲ. ಪಾಶ್ಚಾಪೂರದಲ್ಲಿ ಅಣ್ಣೂಗುರುಜಿ, ಡಾ: ರಾಮಚಂದ್ರ ಜೋಶಿ, ಹುಕ್ಕೇರಿಯಲ್ಲಿ ಶ್ರೀನಿವಾಸ ದೇಶಪಾಂಡೆ, ಡಾ: ಚೆನ್ನಬಸಪ್ಪಾ ಅವರ ಮುಂದಾಳತ್ವದಲ್ಲಿ ಅಚ್ಚುಕಟ್ಟಾಗಿ ರಾಷ್ಟ್ರೀಯ ಚಳುವಳಿ ಜರುಗಿತು. ಹುಕ್ಕೇರಿ ತಾಲೂಕಿನ ಒಂದು ಭಾಗವನ್ನೆ ಗುತ್ತಿಗೆ ಹಿಡಿದಂತೆ ಅಪ್ಪಣ್ಣಗೌಡರು ಕಾರ್ಯನಿರ್ವಹಿಸ-ತೊಡಗಿದರು[೨].

ಶ್ರೀ ಮಹಾದೇವಪ್ಪಾ ಮೆಂಡಗುದ್ಲಿ, ಶ್ರೀ ಮಲಗೌಡಾ ಶೆಟಗೌಡಾ ಪಾಟೀಲ, ಡಾ: ಭೀಮರಾವ ಸುಭೇದಾರ, ಶ್ರೀ ಚಂಬಣ್ಣಾ ಪಟ್ಟಣಶೆಟ್ಟಿ, ಶ್ರೀ ತುಕಾರಾಮ ನಲವಡೆ, ಶ್ರೀ ದುಂಡಪ್ಪಾ ಸಂಸುದ್ದಿ, ಶ್ರೀ ನಿಜಪ್ಪಾ ಆಲೂರ ಮೊದಲಾದವರು ಅಪ್ಪಣ್ಣಗೌಡರ ಕ್ರಾಂತಿ ದಳದ ಸದಸ್ಯರಾಗಿದ್ದರು. ಅಪ್ಪಣ್ಣಗೌಡರು ಈ ಕ್ರಾಂತಿ ದಳದೊಂದಿಗೆ ೧೯೨೩ ರಲ್ಲಿ ನಾಗಪೂರದೊಳಗಿನ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಪ್ರತಿಬಂಧಕ ಆಜ್ಞೆಯನ್ನು ಮುರಿದು ಯಶಸ್ವಿಯಾದರು.

೧೯೨೪ ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೇಸ ಅಧಿವೇಶನವು ಐತಿಹಾಸಿಕವಾಗಿ ಮಹತ್ವವಾಗಿದೆ. ಉತ್ತರ ಕರ್ನಾಟಕದ ಸುತ್ತಲಿನ ನೆಲೆಗಳಿಗೆ ಸ್ವಾತಂತ್ರ್ಯದ ಕಿಡಿಯು ಬೆಂಕಿಯಾಗಿ ಪ್ರಜ್ವಲಿಸಿ ಬಲಯುತವಾಗಿ ಬ್ರಿಟಿಷರನ್ನು ಕಬಳಿಸಲು ಪ್ರೇರಣೆಯಾಯಿತು. ಈ ಅಧಿವೇಶನದಲ್ಲಿ ಅಪ್ಪಣ್ಣಗೌಡರು ತಮ್ಮ ಕ್ರಾಂತಿ ದಳದೊಂದಿಗೆ ಸಕ್ರೀಯವಾಗಿ ಭಾಗವಹಿಸಿದ್ದರು[೩].

೧೯೧೯ ರಲ್ಲಿನ ಜಾಲಿಯನವಾಲಾಭಾಗದ ದುರಂತದಿಂದ ಸಿಡಿದೆದ್ದ ಭಾರತೀಯರು ಆ ನೆಲದ ಮಣ್ಣನ್ನು ಮಡಕೆಯಲ್ಲಿ ತಂದು ತಮ್ಮ ಊರು, ನಗರಗಳ ಚೌಕದಲ್ಲಿ, ವೃತ್ತಗಳಲ್ಲಿ ಉನ್ನತ ಸ್ಥಾನದಲ್ಲಿ ಮಡಕೆಯನ್ನಿಟ್ಟು ಎಲ್ಲರೂ ಸೇರಿ ಪ್ರಾರ್ಥನೆ ಸಲ್ಲಿಸಿ ಆ ಮಡಕೆಯನ್ನು ಮುಚ್ಚಿ ಭಾರತದ ನೆಲವನ್ನು ಭಾರತೀಯರ ರಕ್ತದಿಂದ ತೋಯಿಸಿರುವ ಆಂಗ್ಲ ಅಧಿಕಾರಗಳ ರಕ್ತವನ್ನು ಈ ನೆಲದ ತಾಯಿಗೆ ಉಣಿಸುತ್ತೇವೆ' ಎಂಬುದಾಗಿ ಪ್ರತಿಜ್ಞೆಗೈದರು ಅಂಥಹವರಲ್ಲಿ ಭಗತಸಿಂಗ್, ಚಂದ್ರಶೇಖರ ಆಝಾದ ಪ್ರಮುಖರಾಗಿದ್ದರು. ಆಂಗ್ಲ ಪೊಲೀಸ ಅಧಿಕಾರಿಯಾದ ಸ್ಯಾಂಡರ್ಸನನ್ನು ಗುಂಡಿಟ್ಟು ಕೊಂದಿದ್ದಕ್ಕೆ ಭಗತಸಿಂಗರಿಗೆ ಗಲ್ಲು ಶಿಕ್ಷೆಯಾಯಿತು.

ಅದನ್ನು ಪ್ರತಿಭಟಿಸುವದಕ್ಕಾಗಿ ದೇಶದ ತುಂಬೆಲ್ಲಾ ಚಳುವಳಿಗಳು ನಡೆದವು. ಅಪ್ಪಣ್ಣಗೌಡರು ಸಂಕೇಶ್ವರದಲ್ಲಿ ಅವರ ಅನುಯಾಯಿಗಳಿಂದ ಹಳ್ಳಿ ಮತ್ತು ಪಟ್ಟಣಗಳಲ್ಲಿ ಪ್ರತಿಭಟನಾ ಚಳುವಳಿ ಅನುಸರಿಸಿದರು. ೧೯೨೦ ರ ಅಸಹಕಾರ ಚಳುವಳಿಯಲ್ಲಿಯೂ ಸಹ ಭಾಗವಹಿಸಿ ಬ್ರಿಟಿಷರ ವಿರುದ್ಧ ಹೋರಾಡಿದರು. ೧೯೨೭ ರಲ್ಲಿ ಬ್ರಿಟಿಷ ಸರ್ಕಾರವು ಭಾರತಕ್ಕೆ ಸೈಮನ ಸಮಿತಿಯನ್ನು ಕಳುಹಿಸಿತು. ಈ ಸಮಿತಿಯು ಇಲ್ಲಿನ ಆಡಳಿತ ಪದ್ಧತಿಯ ಸುಧಾರಣೆ. ಶಿಕ್ಷಣದ ಉನ್ನತೀಕರಣದ ವಿಚಾರಣೆಗಾಗಿ ಆಗಮಿಸಿತು. ಈ ಸೈಮನ್ ಕಮಿಷನನ್ನು ವಿರೋಧಿಸಿ, ಪ್ರತಿಭಟಿಸಿ 'ಸೈಮನ್ನರೇ ಹಿಂತಿರುಗಿರಿ' ಎಂಬುದಾಗಿ ಉಗ್ರ ರೂಪದ ಚಳುವಳಿ ಜರುಗಿತು. ಈ ಚಳುವಳಿಯಲ್ಲಿ ಸಂಕೇಶ್ವರದ ಹೋರಾಟಗಾರರು ಭಾಗವಹಿಸಿರುವದು ತಿಳಿಯುತ್ತದೆ.

೧೯೨೯ ರಲ್ಲಿ ಲಾಹೋರಿನೊಳಗೆ ಕಾಂಗ್ರೇಸ ಅಧಿವೇಶನ ಜರುಗಿತು. ಅಲ್ಲಿ 'ಸಂಪೂರ್ಣ ಸ್ವಾತಂತ್ರ್ಯ' ಗೊತ್ತುವಳಿಯನ್ನು ಪ್ರಕಟಿಸಲಾಯಿತು. ಗಾಂಧೀಜಿಯವರ ಕರೆಯ ಮೇರೆಗೆ ೨೬.೦೧.೧೯೩೦ ರಂದು "ಸ್ವಾತಂತ್ರ್ಯ ದಿನಾಚರಣೆ" ನೆರವೇರಿಸಲು ಸಂಕೇಶ್ವರವು ಸಿದ್ಧಗೊಂಡಿತು. ಅಪ್ಪಣ್ಣಗೌಡರ ಕ್ರಾಂತಿ ದಳವು ಮೆರವಣಿಗೆ ಕೈಗೊಂಡು. ಸಮಾರಂಭ ಏರ್ಪಡಿಸಿ. "ಸಂಪೂರ್ಣ ಸ್ವಾತಂತ್ರ್ಯದ " ಘೋಷಣೆಯನ್ನು ಉಚ್ಛರಿಸಿ ಪ್ರತಿಜ್ಞೆ ಸ್ವೀಕರಿಸಿದರು. ರಾಷ್ಟ್ರೀಯ ಧ್ವಜವು ಸರ್ಕಾರಿ ಕಟ್ಟಡದ ಮೇಲೆ ಹಾರಾಡಿತು. ನಂತರ ಧ್ವಜ ವಂದನೆಯು ನೆರವೇರಿತು.

೧೯೩೦ ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕೆ ಕರೆ ನೀಡಿದರು. ಈ ಚಳುವಳಿಯು ಕನ್ನಡಿಗರಿಗೆ ಅತ್ಯಂತ ಉತ್ಸಾಹದ. ಮಹತ್ವದ ದಿನವಾಗಿ ಪರಿಣಮಿಸಿತು. ಗಾಂಧೀಜಿಯವರು ೧೯೨೦ ರಂದು ಘೋಷಿಸಿರುವ ಉಪ್ಪುಮಾರಾಟ. ಕರ ನಿರಾಕರಣೆ ಸ್ವಾಧೀನಪಡಿಸಿಕೊಳ್ಳುವದು ಅಪರಾಧವೆಂದು ಮನವರಿಕೆಯಾದಾಗಿನಿಂದ ಅಪ್ಪಣ್ಣಗೌಡರು ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂದು ರಾಮಕೃಷ್ಣ ಪ್ರಭುಗಳು "ಸಾವಿರಾರು ಜನರೆದುರಿಗೆ ಉಪ್ಪನ್ನು ಕೊಳ್ಳುವವರು ಯಾರಿದ್ದೀರಿ?" ಎಂಬುದಾಗಿ ಕೇಳಿದಾಗ ಅದಕ್ಕೆ ಅಪ್ಪಣ್ಣಗೌಡರು ಸಾವಿರ ಜನರ ಮುಂದೆ ಬಂದು ಉಪ್ಪನ್ನು ಖರಿದಿಸಿದರು. ಅನಂತರ ಪೋಲೀಸರ ಕೈವಶವಾಗಿ ಸೆರೆಮನೆ ವಾಸಿಯಾದರು[೪].

ರಾಯಬಾಗ ಮತ್ತು ಕಬ್ಬೂರು ರೈಲು ನಿಲ್ದಾಣಗಳ ಮೇಲಿನ ಧಾಳಿಯಲ್ಲಿ ಸಿಂಧಿ ಗಿಡಗಳ ನಾಶದಲ್ಲಿ ಇವರ ತಂಡವು ಮಿಂಚಿನಂತೆ ಕೆಲಸ ಮಾಡಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿತ್ತು.

ಅಪ್ಪಣ್ಣಗೌಡರು ಅವರ ಸ್ನೇಹಿತರು ಯಾವುದೇ ಆಮಿಷಕ್ಕೆ ಜಗ್ಗದೆ ಎಲಿಮುನ್ನೋಳಿ, ಹೆಬ್ಬಾಳ, ಸಂಕೇಶ್ವರದಲ್ಲಿ ಕಾಯ್ದೆಭಂಗ ಚಳುವಳಿ ಆರಂಭಿಸಿ

ಬ್ರಿಟಿಷರ ಬೇರನ್ನೇ ಅಲ್ಲಾಡಿಸುವ ಪ್ರಯತ್ನ ಮಾಡಿದರು. ಶಿಂಧಿ ಬನಗಳನ್ನು ಹಾಳು ಮಾಡಿ, ಜನರು ಶೆರೆ ಶಿಂಧಿ ಕುಡಿಯದಂತೆ ಮನವೊಲಿಸಿ ಅನ್ಯಾಯದ ಕಾಯ್ದೆಗಳನ್ನು ಭಂಗಗೊಳಿಸಿ ಸತತವಾಗಿ ಚಳುವಳಿಯನ್ನು ನಡೆಸಿಕೊಂಡು ಬಂದ ಅಪ್ಪಣ್ಣಗೌಡರನ್ನು ಬ್ರಿಟಿಷರು ಬಂಧಿಸಿ ೧ ವರ್ಷ ೧೦ ತಿಂಗಳು ಶಿಕ್ಷೆ, ೫೦೦ ರೂ. ದಂಡವನ್ನು ವಿಧಿಸಿದರು. ಈ ವೇಳೆಗಾಗಲೇ ಶ್ರೀ ಎಂ. ಪಿ. ಪಾಟೀಲರು ಸಹ ಜೈಲಿನಲ್ಲಿ ಸಹವಾಸಿಗಳಾಗಿದ್ದರು. ಹಿಂಡಲಗಾ ಜೈಲಿನಲ್ಲಿಯೂ ಜೊತೆಯಾಗಿಯೇ ಇದ್ದರು. ಜೈಲಿನಲ್ಲಿ ನಡೆಯುವ ದಬ್ಬಾಳಿಕೆಯನ್ನು ಪ್ರತಿಭಟಿಸಿ ಅಪ್ಪಣ್ಣಗೌಡರು ಸ್ನೇಹಿತರೊಂದಿಗೆ ಉಪವಾಸ ಸತ್ಯಾಗ್ರಹ ಕೈಕೊಂಡರು.

೧೯೩೨ ರಲ್ಲಿ ಕಾಂಗ್ರೇಸ ಅದೀವೇಶನವು ಬ್ರಿಟಿಷರ ಎಲ್ಲ ಆತಂಕಕಾರಿಗಳನ್ನು ಮಿರಿ ಯಶಸ್ವಿಯಾಯಿತು. ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಗೆ ಕರೆ ಕೊಟ್ಟರು. ಅಪ್ಪಣ್ಣಗೌಡರು ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದ ಕೂಡಲೇ ಹರಿಜನರ ಸೇವೆಗೆ ನಿಂತರು. ಸಂಕೇಶ್ವರದಲ್ಲಿ ಸಹ ಭೋಜನವನ್ನು ಏರ್ಪಡಿಸಿ ಹರಿಜನರನ್ನು ಆಹ್ವಾನಿಸಿದರು[೫].

೧೯೩೩ ರಲ್ಲಿ ದೇಶದ ತುಂಬೆಲ್ಲಾ ಗಾಂಧಿ ಯಾತ್ರೆ ಆರಂಭಗೊಂಡಿತು. ಈ ಯಾತ್ರೆಯು ಸಂಕೇಶ್ವರಕ್ಕೆ ಆಗಮಿಸಿದಾಗ ಅಪ್ಪಣ್ಣಗೌಡರು ಭವ್ಯ ಸ್ವಾಗತವನ್ನು ಕೋರಿದರು. ಈ ಸಂಗತಿಯಿಂದ ಬ್ರಿಟಿಷ ಅಧಿಕಾರಿಗಳ ಕಣ್ಣುಗಳೂ ಅಪ್ಪಣ್ಣಗೌಡರ ಮೇಲೆ ಅಚಲವಾದವು. ಅಪ್ಪಣ್ಣಗೌಡರ ನಿರಂತರ ಹೋರಾಟದ ಫಲವಾಗಿ 'ಕಿಂಗಮೇಕರ ' ಎಂದು ಪ್ರಸಿದ್ಧರಾದರು.

೧೯೪೨ ರ "ಭಾರತ ಬಿಟ್ಟು ತೊಲಗಿರಿ" ಚಳುವಳಿಯು ಹಿರಿಯ ನಾಯಕರು, ಅದರಲ್ಲಿ ಗಾಂಧಿಜಿಯವರು ನಿಶ್ಚಿತವಾದ ಕಾರ್ಯಗಳ ರೂಪರೇಷಗಳನ್ನು ರಚಿಸುವ ಮುನ್ನವೇ ಮುಂಬೈ ಸಭೆಯಲ್ಲಿ ಬಂಧನಕ್ಕೊಳಗಾದರು. ಈ ವೇಳೆಯಲ್ಲಿ ಗೊತ್ತು ಗುರಿಯಿಲ್ಲದೆ ಹೋರಾಟ ಮುಂದುವರಿಯಿತು. ಹಿಂಸೆಗೆ ಅವಕಾಶವೇ ಇಲ್ಲದಂತೆ ನಡೆದ ಅಹಿಂಸಾ ಹೋರಾಟದ ಅಂತಿಮ ಘಟ್ಟ ಹಿಂಸೆಯ ಭೀಕರತೆಗೆ ಬಲಿಯಾಯಿತು. ಅಂಚೆ ಮತ್ತು ತಂತಿ ಇಲಾಖೆಗಳನ್ನು, ವಾಹನ ಸಂಪರ್ಕ ತಪ್ಪಿಸುವದು ರೈಲು ಹಳಿ ಕೀಳುವದು, ಸ್ಟೇಶನಗಳನ್ನು ಸುಡುವ ಕಾರ್ಯಗಳು ಭರದಿಂದ ಸಾಗಿದವು. ಅಪ್ಪಣ್ಣಗೌಡರು ಈ ಹೋರಾಟಗಳಲ್ಲಿ ಹಿಂದೆ ಬಿದ್ದಿರಲಿಲ್ಲ. ೦೬.೧೧.೧೯೪೨ ರಲ್ಲಿ ರಾಯಬಾಗ ಸ್ಟೇಶನವನ್ನು ತಮ್ಮ ಸಂಗಡಿಗರೊಂದಿಗೆ ಅಪ್ಪಣ್ಣಗೌಡರು ಸುಟ್ಟು ಹಾಕಿದರು. ಸ್ಟೇಶನ ಧ್ವಂಸ ಮಾಡಿದ ನಂತರ ಬೆಳಗಾಗುವದರಲ್ಲಿ ಸುರಕ್ಷಿತವಾದ ಕಾಡು, ಗುಡ್ಡ, ನದಿ ಹುಡುಕಿಕೊಂಡು ಹೋಗುತ್ತಿದ್ದ ವೀರ ಸೇನಾನಿಗಳಿಗೆ ಅಂಕಲಿಯ ಬಸವಪ್ರಭು ಕೋರೆಯುವರು ತಮ್ಮ

ಕಬ್ಬಿನ ತೋಟದಲ್ಲಿ ಆಶ್ರಯ ಕೊಟ್ಟರು. ಅಪ್ಪಣ್ಣಗೌಡರಿಗೂ ಅವರ ಸಂಗಡಿಗರಿಗೂ ಕೋರೆಯವರ ಮನೆಯೆಂದರೆ ತಮ್ಮ ಮನೆಯೇ ಎಂಬಷ್ಟು ಅಭಿಮಾನ, ಪ್ರೀತಿ ಮೂಡಿತು.

ಸಂಕೇಶ್ವರ, ಹೆಬ್ಬಾಳದ ಕಾರ್ಯಕರ್ತರು ಸೇರಿಕೊಂಡು ನೇರ್ಲಿಯಿಂದ ಸಂಕೇಶ್ವರದವರೆಗಿನ ತಂತಿ ಕತ್ತರಿಸಿ ಆ ಕಂಬಗಳನ್ನು ನೆಲಕ್ಕುರಿಳಿಸಿದರು.

ಹೀಗೆ ಅಪ್ಪಣ್ಣಗೌಡರು ಬ್ರಿಟಿಷರಿಗೆ ಅನೇಕ ಸಲ ಚಳ್ಳೆ ಹಣ್ಣು ತಿನ್ನಿಸಿದ್ದರು. ಒಂದು ಸಲ ಅವರು ಮನೆಯಲ್ಲಿದ್ದಾಗ ಆಂಗ್ಲ ಪೊಲೀಸ ತಂಡವು ಅವರನ್ನು ಬಂಧಿಸುವದಕ್ಕಾಗಿ ಆಗಮಿಸಿತು. ಬೆಳಗಿನ ಜಾವದಲ್ಲಿ ಪೋಲಿಸರು ಅಪ್ಪಣ್ಣಗೌಡರ ಮನೆಯ ಬಾಗಿಲನ್ನು ತಟ್ಟಿದರು. ಗೌಡರು ತಕ್ಷಣ ಹಳ್ಳಿಯ ಹೆಣ್ಣು ಮಗಳ ವೇಷ ಧರಿಸಿ, ತಲೆಯ ಮೇಲೆ ಬುಟ್ಟಿಯನ್ನು ಹೊತ್ತುಕೊಂಡು ಪೋಲಿಸರ ಎದುರು ಹೋರಟರು. ಯಾರಿಗೂ ಗುರುತು ಸಿಗಲಿಲ್ಲ ಇಂತಹ ಹಲವು ಪ್ರಸಂಗಗಳನ್ನು ಅವರ ಸಮಕಾಲೀನರು ಹೇಳುತ್ತಾರೆ[೬].

ಶ್ರೀ ಎಂ. ಪಿ. ಪಾಟೀಲರು

ಬಾಲ್ಯಜೀವನ : ಸಂಕೇಶ್ವರದ ಗೌಡಕಿ ಮನೆತನದ ಪುನಗೌಡರ ಮತ್ತು ಗಂಗಾಬಾಯಿ ಇವರುಗಳ ಬಡತನದ ಗೌರವಾನ್ವಿತ ಕುಟುಂಬದವರಾಗಿದ್ದರು. ಈ ದಂಪತಿಗಳ ಮಗನಾಗಿ ಎಂ. ಪಿ. ಪಾಟೀಲರು ೦೪.೦೨.೧೯೦೧ ರಂದು ಜನಿಸಿದರು. ಬಡತನದ ಬೇಗೆಯಲ್ಲಿ ಬೆಂದು ಬಹು ಕಷ್ಟಕರ ಜೀವನದಲ್ಲಿ ಬೆಳೆದರು, ಜೊತೆಗೆ ತಕ್ಕದಾದ ಆರಂಭಿಕ ಶಿಕ್ಷಣ ಪಡೆದರು. ನಂತರ ಉನ್ನತವಾದ ಕಾನೂನು ಪದವಿ ಪೂರೈಸಿದರು. ೧೪ನೇ ವಯಸ್ಸಿನಲ್ಲಿ ಆಗಿನ ಸಂಪ್ರದಾಯದಂತೆ ಮದುವೆಯಾದರು. ಇಂತಹ ಕಡುಬಡತನದ ಪರಿಸ್ಥಿತಿಯಲ್ಲಿ ಸಂಸಾರಿಕ ಬದುಕು ಒಂದು ಕಡೆಗೆ, ಮತ್ತೊಂದು ತಮ್ಮ ಶಿಕ್ಷಣ ಕಲಿಕೆಗೆ ಮಹಾರಾಷ್ಟ್ರದ ಮುಂಬೈಗೆ ತೆರಳಿದರು. ಅಲ್ಲಿ ತಮ್ಮ ಕಾನೂನು ಪದವಿಯನ್ನು ಉನ್ನತ ದರ್ಜೆಯಲ್ಲಿ ಪೂರೈಸಿದರು. ಅನಂತರ ರಾಜಕೀಯ ರಂಗಕ್ಕೆ ಪ್ರವೇಶಿಸಿದರು. ಉತ್ತಮ ವಕೀಲ ವೃತ್ತಿ ಪ್ರಾರಂಭಿಸಿದರು. ಬಡ ರೈತರ ಕುಟುಂಬಗಳಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಬೇಕೆಂಬ ಮನೋಭಾವ ಹೊಂದಿದ್ದರು. ಈ ವೇಳೆಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವವು ಇವರ ಮೇಲೆ ಬೀರಿತು.

ಸ್ವಾತಂತ್ರ್ಯ ಹೋರಾಟಗಾರರಾಗಿ ಭಾಗವಹಿಸಿದ್ದು : ವೃತ್ತಿಯ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡು ಜನಪ್ರೀಯರಾದರು. ದೇಶವು ಪರಕೀಯರ ಆಳ್ವಿಕೆಗೆ ಒಳಪಟ್ಟು ಸಂಕಷ್ಟಕ್ಕೆ ಸಿಲುಕಿತು. ಚಳುವಳಿಯಲ್ಲಿ ಧುಮುಕುವ ನಿರ್ಧಾರ ಕೈಗೊಂಡರು. ತಾವು ವಿದ್ಯಾರ್ಥಿ ಜೀವನದಲ್ಲಿ ಗಾಂಧೀಜಿ ಮತ್ತು ಬಾಲಗಂಗಾಧರ

ತಿಲಕರಂತಹ ಮಹಾನನಾಯಕರ ಭಾಷಣಗಳಿಗೆ ಪ್ರಭಾವಿತರಾಗಿದ್ದರು. ತಮಗೆ ಆದಷ್ಟು ಹೋರಾಟಗಾರರ ಸಂಘಟನೆಯನ್ನು ಕಟ್ಟಿಕೊಂಡು ದೇಶಕ್ಕಾಗಿ ಹೋರಾಡುವ ಛಲವನ್ನು ಹೊಂದಿದ್ದರು.

ಗಾಂಧೀಜಿ ನಾಯಕತ್ವದ ಅಸಹಕಾರ ಚಳುವಳಿ, ಸತ್ಯಾಗ್ರಹದ ಹೋರಾಟಗಳು ಇವರನ್ನು ಆಕರ್ಷಿಸಿದವು. ಸಂಕೇಶ್ವರದ ಸುತ್ತಲಿನ ಹೋರಾಟಗಾರರನ್ನು ಒಂದುಗೂಡಿಸಿ ಸತ್ಯಾಗ್ರಹ ಕೈಕೊಂಡರು. ೧೯೩೦ ರಲ್ಲಿ ಬ್ರಿಟಿಷರ ವಿರುದ್ಧ ಜನರು ಸಿಡಿದೇಳುವಂತೆ ಕರೆ ನೀಡಿ ಮುನ್ನಡೆದರು. ಬ್ರಿಟಿಷ ಸರ್ಕಾರ ಈ ಉಗ್ರ ರೂಪದ ಚಳುವಳಿಯನ್ನು ನಿಯಂತ್ರಿಸಲು ಮುಂದಾಯಿತು. ಇದರಿಂದ ಹಲವು ನಾಯಕರು ಭೂಗತರಾಗಿದ್ದರು. ಎಂ.ಪಿ. ಪಾಟೀಲರು ಹಳ್ಳಿಗಳಿಗೆ ಪ್ರಯಾಣ ಬೆಳೆಸಿ ಹೆಚ್ಚಿನ ಸಂಖ್ಯೆಯ ಜನರನ್ನು ಸಂಪರ್ಕಿಸಿ ಸಂಘಟನೆಗೊಳಿಸಿದರು. ಅವರಿಗೆ ಚಳುವಳಿಯ ಉಗ್ರ ಸ್ವರೂಪದ ಹೋರಾಟವನ್ನು ಮನವರಿಕೆಯಾಗಿ ಮಾಡಿ ಮುನ್ನಡಿಸಿದರು. ಇದರ ಪರಿಣಾಮವಾಗಿ ಬ್ರಿಟಿಷರು ಇವರನ್ನು ಬಂಧಿಸಿ ಹಿಂಡಲಗಾ ಜೈಲಿಗೆ ಕಳುಹಿಸಿದರು. ಈ ವೇಳೆಯಲ್ಲಿ ಅಪ್ಪಣ್ಣಗೌಡ ಪಾಟೀಲರು ಸಹಚರರಾಗಿದ್ದರು[೭]. ಅನಂತರ ಬಿಡುಗಡೆಗೊಂಡು ಬ್ರಿಟಿಷ ಸರ್ಕಾರದ ಸಾಮ್ರಾಜ್ಯ ಧೋರಣೆಯನ್ನು ಖಂಡಿಸಿ, ಬ್ರಿಟಿಷರ ದೌರ್ಜನ್ಯ, ದರ್ಪಿಷ್ಠತೆ, ದಾಸ್ಯತ್ವದಿಂದ ಭಾರತೀಯರನ್ನು ಮುಕ್ತಗೊಳಿಸುವ ಸಲುವಾಗಿ ಹೋರಾಡಿದರು. ಬ್ರಿಟಿಷರ ವಿರುದ್ದ ಪ್ರತಿ ತಂತ್ರಗಳನ್ನು ರೂಪಿಸಿ ಸಿಂಹಸ್ವಪ್ನವಾಗಿ ಹೋರಾಡಿದರು.

ಸ್ವಾತಂತ್ರ್ಯಕ್ಕೆ ಮಹಾತ್ಮಾ ಗಾಂಧೀಜಿಯವರ ಪ್ರೇರಣೆ ಪಡೆದು ಜನರನ್ನು ಸಂಘಟಿಸಿದರು. ಅನಂತರ ಜನರಿಗೆ ಸ್ವಾತಂತ್ರ್ಯದ ಅರಿವು ಮೂಡಿಸಿ ಬಲಯುತರನ್ನಾಗಿಸಿದರು. ಅನೇಕ ಕಾಂಗ್ರೇಸ ಕಾರ್ಯಕರ್ತರನ್ನು ಒಂದುಗೂಡಿಸಿ ಈ ಹೋರಾಟಕ್ಕೆ ಸಿದ್ಧಗೊಳಿಸಿದರು. ಹುಕ್ಕೇರಿ ಬೆಳಗಾವಿ ಗೋಕಾಕ, ನಿಪ್ಪಾಣಿ, ಇತ್ಯಾದಿ ಊರುಗಳಲ್ಲಿ ಸಂಘಟನೆಗಳನ್ನು ಕಟ್ಟಿ ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಿದರು. ಸ್ವಾತಂತ್ರ್ಯದ ಚಳುವಳಿಯ ಮಹತ್ವವನ್ನು ಜನಸಾಮಾನ್ಯರಿಗೆ ಮನವರಿಕೆಯಾಗಿ ತಿಳಿಸಿ ಯಶಸ್ವಿ ಹೋರಾಟಕ್ಕೆ ಸನ್ನದ್ಧಗೊಳಿಸಿದರು. ಇದರ ಪರಿಣಾಮವಾಗಿ ಉಗ್ರ ಹೋರಾಟಕ್ಕಿಳಿದು ಬ್ರಿಟಿಷರಿಂದ ಬಂಧನಕ್ಕೊಳಗಾದರು. ಜೈಲುವಾಸ ಅನುಭವಿಸಿ ಅನೇಕ ತೊಂದರೆಗಳಿಗೆ ಸಿಲುಕಿದರು. ಆದರೂ ಸಹ ಮುನ್ನಡೆದು ತಮ್ಮ ಸಾಹಸ ಹೋರಾಟವನ್ನು ಕೈಗೊಂಡ ಈ ಸಂದರ್ಭದಲ್ಲಿ ದಿವಾಕರ ಮತ್ತು ಗಾಂಧೀಜಿಯವರ ಆಪ್ತಸಹಾಯಕರಾದ ಮಹಾದೇವಬಾಯಿ ದೇಸಾಯಿ, ದಾವಲ ಸಾಹೇಬ ಪಟವರ್ಧನರಂತ ಪ್ರಮುಖ ವ್ಯಕ್ತಿಗಳ ಪರಿಚಯವು ಆಯಿತು[೮]. ಅಂತಹವರ ಜೊತೆಗೂಡಿ ಸ್ವಾತಂತ್ರ್ಯದ ಕುರಿತು ಹಲವು ವಿಚಾರಗಳನ್ನು

ಚರ್ಚಿಸಿದರು. ನಂತರ ತಮ್ಮ ಬಿಡುವಿನ ವೇಳೆಯಲ್ಲಿ ನೂಲುವ ಕಾಯಕವನ್ನು ಮಾಡುತ್ತ ಸ್ವತಂತ್ರ ಭಾರತ ಕನಸು ಈಡೇರಿಸುವ ಕಾರ್ಯದಲ್ಲಿ ತೊಡಗಿದರು.

ಹೀಗೆ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಧುಮುಕಿ ಈ ಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿ ಜನರ ಗುಂಪನ್ನು ಕಟ್ಟಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟವರಲ್ಲಿ ಎಂ. ಪಿ. ಪಾಟೀಲರು ಒಬ್ಬರಾಗಿದ್ದರು.

ಶ್ರೀ ಶಿವಪ್ಪಣ್ಣ ಗುಂಡಾಳಿ : ಇವರು ಸಂಕೇಶ್ವರ ಸಮೀಪದ ಹೆಬ್ಬಾಳದಲ್ಲಿನ ಕೃಷಿ ಕುಟುಂಬದಲ್ಲಿ ಜನಿಸಿದವರು. ಆರಂಭಿಕ ಶಿಕ್ಷಣ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗಿದರು. ರಾಷ್ಟ್ರೀಯ ಹೋರಾಟದಲ್ಲಿ ಧುಮುಕಲು ಗಾಂಧೀಜಿ ಮತ್ತು ತಿಲಕರ ಪ್ರಭಾವವು ಬೀರಿತು. ಸಂಕೇಶ್ವರದ ಅಪ್ಪಣ್ಣಗೌಡರ ಮತ್ತು ಎಂ. ಪಿ. ಪಾಟೀಲರ ಹೋರಾಟದ ಪ್ರಭಾವವೂ ತುಂಬಾ ಪರಿಣಾಮಕಾರಿಯಾಗಿ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿತು. ೧೯೪೦ ರಲ್ಲಿ ಅಪ್ಪಣ್ಣಗೌಡ ಹಾಗೂ ಎಂ. ಪಿ. ಪಾಟೀಲರ ಪರಿಚಯವಾಯಿತು. ಇವರಿಬ್ಬರೂ ಹೆಬ್ಬಾಳದಲ್ಲಿ ವೈಯಕ್ತಿಕ ಸತ್ಯಾಗ್ರಹ ಕೈಗೊಳ್ಳುವುದಕ್ಕಾಗಿ ಅನುಮತಿ ಕೇಳಲು ಬಂದಾಗ ಭೆಟಿಯಾದರು. ಅನಂತರ ೧೯೪೧ ರಲ್ಲಿ ಎಂ. ಪಿ. ಪಾಟೀಲರು ಹೆಬ್ಬಾಳದಲ್ಲಿ ಸತ್ಯಾಗ್ರಹವನ್ನು ನಡೆಸಿದರು. ಆ ಸಂದರ್ಭದಲ್ಲಿ ಎಲ್ಲರೂ ಬ್ರಿಟಿಷರ ಕೈವಶವಾಗಿ ಕಾರಾಗೃಹಕ್ಕೆ ಹೋದರು. ಅಂದಿನಿಂದ ಹೆಬ್ಬಾಳದ ೧೨ ಜನರು ಇವರಿಬ್ಬರ ಬೆಂಬಲಿಗರಾಗಿ ನಿಂತರು. ಇಬ್ಬರೂ ನಾಯಕರು ಎಣ್ಣೆಬತ್ತಿಯ ಹಾಗೆ ಇದ್ದರು. ಎಂ.ಪಿ. ಯವರು ಎಣ್ಣೆಯಾದರೆ ಗೌಡರು ಬತ್ತಿಯಾಗಿ ಬೆಳಗುತ್ತಿದ್ದರು. ಎಂದು ಗುಂಡಾಳಿಯರು ಉಲ್ಲೇಖಿಸಿದ್ದಾರೆ.

ನಾನು ಎಂ.ಪಿ. ಪಾಟೀಲರ ಜೋತೆ ೧೯೪೧ ರಲ್ಲಿ ಹೆಬ್ಬಾಳದಲ್ಲಿ ಸತ್ಯಾಗ್ರಹ ಮಾಡಿದ ಪರಿಣಾಮ ೬ ತಿಂಗಳು ಸೆರೆಮನೆವಾಸ ಅನುಭವಿಸಬೇಕಾಯಿತು. ಅಲ್ಲಿಂದ ಬಂದು ಕಾಂಗ್ರೇಸ್ ಪಕ್ಷದ ಕಾರ್ಯ ಮಾಡುತ್ತಿರುವ ವೇಳೆಯಲ್ಲಿ ಅಂದರೆ ೧೯೪೨ ಆಗಸ್ಟ್ ೯ ರಂದು ಚಲೆಜಾವ್ ಚಳುವಳಿಯಲ್ಲಿ ಗಾಂದೀಜಿಯವರ ಘೋಷಣೆಯನ್ನು ಯಶಸ್ವಿಗೊಳಿಸಲು ಹೆಬ್ಬಾಳದ ೧೨ ಜನ, ಸಂಕೇಶ್ವರದ ೫ ಜನ, ಮಹಾರಾಷ್ಟ್ರ ನೂಲದ ಇಬ್ಬರು, ಹೀಗೆ ಗುಂಪು ಕಟ್ಟಿಕೊಂಡು ಗೌಡರ ನಾಯಕತ್ವದಲ್ಲಿ ಚಳುವಳಿ ಮಾಡಿದ ನೆನಪು (ಇವತ್ತಿಗೂ) ಮಾಸದೆ ಉಳಿದಿದೆ. ಈ ಸಂದಂರ್ಭದಲ್ಲಿ ನಾವೆಲ್ಲ ಎರಡು ತಿಂಗಳು ಭೂಗತರಾಗಿದ್ದೆವು, ಅನಂತರ ಪೊಲೀಸರಿಂದ ಬಂಧನಕ್ಕೊಳಗಾಗಿ ಸೆರೆಮನೆಗೆ ಹೋದೆವು. ಆಗ ನಮ್ಮ ಮೇಲೆ ೬೫ ಮೊಕದ್ದಮೆಗಳನ್ನು ಹಾಕಿದರು. ಈ ಎಲ್ಲ ಮೊಕದ್ದಮೆಗೆ ಉಸ್ತುವಾರಿಯನ್ನು ಚಳುವಳಿಯಿಂದ ಹೊರಗಿದ್ದು ಎಂ.ಪಿ.

ಪಾಟೀಲರು ನೋಡುತ್ತಿದ್ದರು ೬೫ ಮೊಕದ್ದಮೆಗಳಲ್ಲಿ ೪ ಮೊಕದ್ದಮೆಗಳು ಸಾಬೀತಾದವು. ಇದರ ಪರಿಣಾಮ ೨ ವರ್ಷ ೯ ತಿಂಗಳು ಕಾರಾಗೃಹ ವಾಸವಾಯಿತು. ೨೧-೦೯-೧೯೪೨ ರಂದು ಗೌಡರ ನೇತೃತ್ವದಲ್ಲಿ ಚಿಕ್ಕಾಲಗುಡ್ಡದಿಂದ ಹತ್ತರಗಿಯವರೆಗಿನ ಟೆಲಿಫೋನ್ ವಾಯರ್‌ನ್ನು ಕಡಿದೆವು. ಶಿಕ್ಷೆಯನ್ನು ಸಹ ಅನುಭವಿಸಿದೆವು. ೬-೧೧-೧೯೪೨ ರಂದು ಗೌಡರ ನಾಯಕತ್ವದಲ್ಲಿ ರಾಯಬಾಗ ರೈಲ್ವೆಸ್ಟೇಶನ್ ಸುಡುವ ಸಂದರ್ಭದಲ್ಲಿ ನಾನು ಕೈಜಾರಿ ಬೆಂಕಿಯಲ್ಲಿ ಬಿದ್ದು ಸುಟ್ಟುಕೊಂಡು ಹಾಗೇಯೆ ಬೆಂಕಿ ಸಹಿತ ಗೌಡರ ಮುಂದೆ ಬಿದ್ದೆ, ಆಗ ನನ್ನ ಮೇಲೆ ಕಂಬಳಿಯನ್ನು ಹಾಕಿ ಬೆಂಕಿಯನ್ನು ಆರಿಸಿದರು. ಗೌಡರು ನಂತರ ನನ್ನನ್ನು ಕೋರೆಯವರ ಮನೆಯಲ್ಲಿಟ್ಟು ಉಪಚಾರ ವ್ಯವಸ್ಥೆಯನ್ನು ಮಾಡಿದರು. ಗೌಡರ ಈ ಎಲ್ಲಾ ಚಳುವಳಿಗಳನ್ನು ಗಮನಿಸಿ ಇಂಗ್ಲೀಷರು ಅವರನ್ನು ಹಿಡಿದುಕೊಟ್ಟವರಿಗೆ ೫.೦೦೦/-ರೂ ಇನಾಮು ಕೊಡುವುದಾಗಿ ಘೋಷಿಸಿದರು. ಆದರೆ ಗೌಡರು ಸಿಗಲಿಲ್ಲ ಒಮ್ಮೆ ಸಂಕೇಶ್ವರದಲ್ಲಿ ಸೈನಿಕರು ಅವರನ್ನು ಹುಡುಕಲು ಬಂದಾಗ ಅಲ್ಲಿ ಹೆಣ್ಣುಮಕ್ಕಳು ಗೌಡರಿಗೆ ಸೀರೆಯನ್ನುಡಿಸಿ ತಮ್ಮ ಜೊತೆ ಕರೆದುಕೊಂಡು ಹೋಗಿ ಪಾರು ಮಾಡಿದರು.

ಅಪ್ಪಣ್ಣಗೌಡರು ತಮ್ಮ ನಾಯಕರಾದರು ;ಎಂ.ಪಿ. ಪಾಟೀಲರು ನಮ್ಮೆಲ್ಲರ ರಕ್ಷಕರಾಗಿದ್ದರು ಹೇಗೆಂದರೆ ; ಚಳುವಳಿ ಮಾಡುವ ಸಂದರ್ಭದಲ್ಲಿ ನಮ್ಮ ಮೇಲೆ ಆಗುವ ಕೇಸುಗಳನ್ನೆಲ್ಲ ಸಾಕ್ಷಿರಹಿತವನ್ನಾಗಿ ಮಾಡುತ್ತಿದ್ದರು. ಇದರಿಂದ ನಾವೆಲ್ಲ ನಿರ್ದೋಶಿಗಳಾಗಿ ಚಳುವಳಿಯಲ್ಲಿ ಪಾಲ್ಗೋಳ್ಳುತ್ತಿದ್ದೆವು. ಎಂಬುವದಾಗಿ ಶಿವಪ್ಪಣ್ಣಾ ಗುಂಡಾಳಿಯವರ ಮಾತುಗಳಾಗಿವೆ.

ಹೀಗೆ ಶಿವಪ್ಪಣ್ಣಾ ಗುಂಡಾಳಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರಲ್ಲಿ ಒಬ್ಬರಾಗಿದ್ದು ಶತಾಯುಷಿಗಳಾಗಿ ಇವತ್ತಿಗೂ ನಮ್ಮೊಂದಿಗೆ ಇದ್ದಾರೆ.

ಸಂಕೇಶ್ವರದ ಸ್ವಾತಂತ್ರ್ಯ ಹೋರಾಟಗಾರಲ್ಲಿ ಮಹದೇವಪ್ಪ ಮೆಂಡಗುದ್ಲಿಯವರು ಸಹ ಅಪ್ಪಣ್ಣಗೌಡ ಪಾಟೀಲ ಮತ್ತು ಎಂ.ಪಿ. ಪಾಟೀಲರ ಜೊತೆಗೂಡಿ ರಾಷ್ಟ್ರೀಯ ಚಳುವಳಿಗಳಲ್ಲಿ ಹೋರಾಡಿರುವದು ತಿಳಿಯುತ್ತದೆ. ಆರಂಭದಲ್ಲಿ ಕ್ರಾಂತಿದಳದ ಸದಸ್ಯರಾಗಿ ಆಂಗ್ಲರನ್ನು ವಿರೋಧಿಸುವ ಚಟುವಟಿಕೆಗಳಲ್ಲಿ ತೊಡಗಿದರು. ಇವರು ಅಪ್ಪಣಗೌಡರ ಜೊತೆಗೂಡಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿ, ಸತ್ಯಾಗ್ರಹ, ಹಾಗೂ ಹೋರಾಟಗಳಲ್ಲಿ ಭಾಗ ವಹಿಸಿ ಬಂಧನಕ್ಕೊಳಗಾಗಿ ಕಾರಾಗೃಹ ವಾಸಿಯಾಗಿದ್ದರು. ಅನಂತರ ಬಿಡುಗಡೆಗೊಂಡು ಬ್ರಿಟೀಷರ ವಿರುದ್ಧ ಪ್ರತಿಧ್ವನಿಸಿ ಇಲ್ಲಿನ ಹೋರಾಟಗಾರರಲ್ಲಿ ಒಬ್ಬರಾಗಿದ್ದರು. ದೇಶದ

ಸ್ವಾತಂತ್ರ್ಯಕ್ಕಾಗಿ ಶ್ರಮಿಸಿರುವುದು ಕಂಡುಬರುತ್ತದೆ. ಅಲ್ಲದೆ ಸ್ವಾತಂತ್ರ್ಯದ ಮಹನೀಯರಲ್ಲಿ ಒಬ್ಬರಾಗಿದ್ದರು.

ಹೀಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಕೇಶ್ವರದ ಹೋರಾಟಗಾರರಲ್ಲದೆ, ಸುತ್ತಲಿನ ಜನರು ಭಾಗವಹಿಸಿ ರಾಷ್ಟ್ರ ಪ್ರೇಮ ಮೆರೆದಿರುವುದು ತಿಳಿಯುತ್ತದೆ.

ಅಡಿ ಟಿಪ್ಪಣಿಗಳು

೧. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೫
೨. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೬
೩. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೬
೪. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೭
೫. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೮
೬. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೧೮
೭. ಪ್ರತಿಭಾವಂತ ಸಂಸದೀಯ ಪಟು, ಪುಸ್ತಕ ಮಾಲಿಕೆ ; ಎಂ. ಪಿ. ಪಾಟೀಲ ; ಡಾ. ಗುರುಪಾದ ಮರಿಗುದ್ದಿ ; ೨೦೦೮ ; ಪು. ೧೯
೮. ಪ್ರತಿಭಾವಂತ ಸಂಸದೀಯ ಪಟು, ಪುಸ್ತಕ ಮಾಲಿಕೆ ; ಎಂ. ಪಿ. ಪಾಟೀಲ ; ಡಾ. ಗುರುಪಾದ ಮರಿಗುದ್ದಿ ; ೨೦೦೮ ; ಪು. ೨೦
೯. ಸಾರ್ಥಕ (ಸಂ.) ಪ್ರೊ. ಎಚ್. ಎಸ್. ಭೀಮನಗೌಡರ ; ೨೦೦೨ ; ಪು.೯, ೧೦

ಅಧ್ಯಾಯ ೫

ಸಂಕೇಶ್ವರದ ಸಾಂಸ್ಕೃತಿಕ ಪರಿಸರ

ಇತಿಹಾಸ ಅಧ್ಯಯನದಲ್ಲಿ ಸಾಂಸ್ಕೃತಿಕತೆಯು ಬಹು ಪ್ರಾಮುಖ್ಯವಾಗಿರುತ್ತದೆ. ಪ್ರತಿಯೊಂದು ಪ್ರದೇಶವು ತನ್ನದೆ ಆದ ಭೌಗೋಳಿಕ ಹಿನ್ನಲೆಯನ್ನು ಒಳಗೊಂಡಿರುತ್ತದೆ. ಸಂಕೇಶ್ವರವು ನೈಸರ್ಗಿಕವಾಗಿ ಸಂಪತ್ತಿನಿಂದ ಕೂಡಿರುವುದು, ಭಾಗಶಃ ನೈರುತ್ಯ ಮಾನ್ಸೂನ್ ಮಳೆಯನ್ನು ಅವಲಂಬಿಸಿರುತ್ತದೆ. ಅರೆಮಲೆನಾಡವಾಗಿದ್ದು, ಉತ್ತಮ ಭೂಮಿಯನ್ನು ಒಳಗೊಂಡಿದ್ದು ಬೆಳೆಗಳನ್ನು ಬೆಳೆಯುವುದಾಗಿದೆ. ಈ ಪಟ್ಟಣದ ನೈರುತ್ಯ ಭಾಗದಲ್ಲಿ ಹಿರಣ್ಯಕೇಶಿ ನದಿಯು ಹರಿಯುತ್ತಿರುವುದರಿಂದ ರೈತರಿಗೆ ಅನುಕೂಲಕರವಾಗಿದೆ. ಚಾರಿತ್ರಿಕವಾಗಿ ವಿವಿಧ ರಾಜಮನೆತನಗಳು ೧೦ ಮತ್ತು ೧೧ನೇ ಶತಮಾನದ ನಂತರದಲ್ಲಿ ಆಡಳಿತ ನಡೆಸಿರುವುದು ಕಂಡುಬರುತ್ತದೆ. ಅಂದಿನ ಕಲೆ ಮತ್ತು ವಾಸ್ತು ಶಿಲ್ಪದ ನಿದರ್ಶನಗಳು ಸಾಕ್ಷಿಯಾಗಿವೆ. ಇವು ಸಮಗ್ರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿನ ಸ್ಥಿತಿಗತಿಯನ್ನು ತಿಳಿಯಬಹುದಾಗಿದೆ.

ರಾಜಕೀಯ ಸ್ಥಿತಿ : ವಿವಿಧ ರಾಜಮನೆತನಗಳಾದ ಕಲ್ಯಾಣ ಚಾಳುಕ್ಯರು, ಸವದತ್ತಿಯ ರಟ್ಟರು, ಬಹಮನಿ ಸುಲ್ತಾನರು, ಬಿಜಾಪುರದ ಆದಿಲ್‌ಶಾಹಿಗಳು ಮತ್ತು ಮರಾಠರು ತಮ್ಮ ಅನುವಂಶಿಯ ಅರಸೊತ್ತಿಗೆಯ ಆಡಳಿತವನ್ನು ನಡೆಸಿರುವರು. ಪ್ರಜೆಗಳ ಕಲ್ಯಾಣ ಹಾಗು ಯೋಗ ಕ್ಷೇಮ ಅರಸನ ಕರ್ತವ್ಯವಾಗಿತ್ತು. ರಟ್ಟರ ಆಳ್ವಿಕೆಯಲ್ಲಿ ಸಂಕೇಶ್ವರವು 'ಕುಹುಂಡಿ ಮೂರು ಸಾವಿರದ' ನಾಡಾಗಿತ್ತೆಂದು ತಿಳಿದು ಬರುತ್ತದೆ. ಅನಂತರ ಬಹಮನಿಯರು ಮತ್ತು ಆದಿಲ್ ಶಾಹಿಗಳು ಇಸ್ಲಾಂ ಪ್ರಭುತ್ವದ ಆಡಳಿತ ನಡೆಸಿದರು. ಮಹಮ್ಮದಗಿಲಾನಿ ಎಂಬುವನು ಸಂಕೇಶ್ವರವನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡಿದ್ದನು ಎಂಬುದು ಶಾಸನಗಳಲ್ಲಿ ಕಂಡುಬರುತ್ತದೆ ಇವರ ಕಾಲದಲ್ಲಿ ಅನೇಕ ಸ್ಮಾರಕಗಳು ಹುಕ್ಕೇರಿಯಲ್ಲಿ ನಿರ್ಮಾಣಗೊಂಡಿರುವುದು ಸಾಕ್ಷೀಯಾಗಿವೆ.

ಮರಾಠರ ನಾಯಕನಾದ ಛತ್ರಪತಿ ಶಿವಾಜಿಯು ಈ ಭಾಗದಲ್ಲಿ ಆಳ್ವಿಕೆ ನಡೆಸಿದನೆಂದು ಕಂಡುಬರುತ್ತದೆ. ಸಂಕೇಶ್ವರ ಸಮಿಪದ ಹರಗಾಪುರದಲ್ಲಿ ಬೃಹತ್ ಕೋಟೆಯನ್ನು ನಿರ್ಮಿಸಿದನು. ಈ ಭಾಗದಲ್ಲಿ ತನ್ನ ಆಳ್ವಿಕೆ ನಡೆಸಿದ್ದನು ಎಂಬುವುದಕ್ಕೆ ಕೋಟೆಯು ಸಾಕ್ಷಿಯಾಗಿರುತ್ತದೆ.

೧೭ ಮತ್ತು ೧೮ನೇ ಶತಮಾನದಲ್ಲಿ ಸಂಕೇಶ್ವರವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಸಂಕೇಶ್ವರದ ಎಂ.ಪಿ ಪಾಟೀಲರು ಸ್ವಾತಂತ್ರ್ಯ ಪೂರ್ವದಲ್ಲಿ ಮುಂಬೈ

ಪ್ರಾಂತ್ಯದ ಕಾಂಗ್ರೇಸ್ ಸದಸ್ಯರಾಗಿದ್ದರು. ಇವರು ೧೯೪೬ ರಲ್ಲಿ ಮುಂಬೈ ಪ್ರಾಂತೀಯ ಚುನಾವಣೆಯಲ್ಲಿ ಈ ಭಾಗದ ಪ್ರತಿನಿಧಿಯಾಗಿ ಆಯ್ಕೆಯಾದ ನಂತರ ಸಹಕಾರ ಕ್ಷೇತ್ರದಲ್ಲಿ ಅಭಿವೃಧಿ ಕಾರ್ಯಗಳನ್ನು ಕೈಗೊಂಡರು.

ಸ್ವಾತಂತ್ರ್ಯದ ನಂತರದಲ್ಲಿ ಸಂಕೇಶ್ವರವು ರಾಜಕೀಯವಾಗಿ ಪ್ರತ್ಯೇಕ ಕ್ಷೇತ್ರವನ್ನು ಪಡೆಯಿತು. ಎಂ.ಪಿ. ಪಾಟೀಲರು ೧೯೪೯ರಲ್ಲಿ ಮತ್ತೆ ಮುಂಬೈ ಪ್ರಾಂತ್ಯದ ಸದಸ್ಯರಾಗಿ ಆಯ್ಕೆಗೊಂಡು ಕ್ಯಾಬಿನೆಟ್ ದರ್ಜೆಯ ಮಂತ್ರಿಯಾದರು. ನಂತರದಲ್ಲಿ ಸಂಕೇಶ್ವರವು ವಿಧಾನಸಭಾ ಮತಕ್ಷೇತ್ರವನ್ನು ಪಡೆಯಿತು. ಅನೇಕ ಮಹನೀಯರು ಈ ಭಾಗದಿಂದ ಆಯ್ಕೆಯಾಗಿರುವರು. ಅವರಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿ ಶ್ರೀ ಮಲ್ಲಾರಿಗೌಡ ಪಾಟೀಲ, ಶ್ರೀ ಎ.ಬಿ.ಪಾಟೀಲರು ಆಯ್ಕೆಗೊಂಡು ಅಭಿವೃಧಿ ಕಾರ್ಯಗಳನ್ನು ಕೈಗೊಂಡಿರುವರು. ಕೃಷಿ, ನೀರಾವರಿ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಮಹತ್ವದ ಸುಧಾರಣೆಗಳನ್ನು ಕೈಗೊಂಡಿರುವರು.

ಈ ಭಾಗದಿಂದ ಶ್ರೀ ಬಸಗೌಡ ಪಾಟೀಲ, ಶ್ರೀ ಓಂಪ್ರಕಾಶ್ ಕಣಗಲಿ ಮತ್ತು ಶ್ರೀ ಸಚ್ಚಿದಾನಂದ ಖೋತರವರು ಎಂ.ಎಲ್.ಸಿ. ಗಳಾಗಿ ಆಯ್ಕೆಗೊಂಡು ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಗೈದಿರುವರು.

ಶ್ರೀ ಅಪ್ಪಣ್ಣ ಗೌಡ ಪಾಟೀಲ, ಶ್ರೀ ಕೆ.ಬಿ.ಪಾಟೀಲ, ಶ್ರೀ ಬಾಳಾಸಾಹೇಬ ಸಾರವಾಡಿ, ಮೊದಲಾದವರು ಶಾಸಕರಾಗಿ ಈ ಭಾಗದ ಏಳಿಗೆಗಾಗಿ ಸೇವೆಗೈದ ಮಹನೀಯರಾಗಿರುವರು.

ಪ್ರಸ್ತುತವಾಗಿ ಸಂಕೇಶ್ವರವು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹುಕ್ಕೇರಿ ಮತ ಕ್ಷೇತ್ರಕ್ಕೆ ಸೇರಿರುತ್ತದೆ. ಈ ಕ್ಷೇತ್ರದಿಂದ ಶ್ರೀ ಉಮೇಶ ಕತ್ತಿಯವರು ಆಯ್ಕೆಗೊಂಡು ಕೃಷಿ ಸಚಿವರಾಗಿ ಸೇವೆಗೈಯುತ್ತಿರುವರು.

ಸಂಕೇಶ್ವರದ ಪುರಸಭೆ : ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರವು ಐತಿಹಾಸಿಕ ಪ್ರಾಮುಖ್ಯತೆಯನ್ನು ಒಳಗೊಂಡಿರುತ್ತದೆ. ಈ ಪಟ್ಟಣವು ತಾಲೂಕಿನಿಂದ ೧೩ ಕಿ.ಮೀ. ಪಶ್ಚಿಮ ಭಾಗದಲ್ಲಿರುತ್ತದೆ. ಹುಕ್ಕೇರಿ ತಾಲೂಕಿನಲ್ಲಿಯೇ ಮುಖ್ಯವಾದ ವ್ಯಾಪಾರ, ವಾಣಿಜ್ಯದ ಕೇಂದ್ರವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿನ ಸಹಕಾರ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ.

ಸಂಕೇಶ್ವರ ಪುರಸಭೆಯು ೧೯೭೩ ರಲ್ಲಿ ಸರಕಾರವು ಆದೇಶ ನಂ : ಎಲ್‌ಎಂಎ ೬೨ : ಎಂಎಎನ್‌ಸಿ : ದಿನಾಂಕ : ೧೭-೦೨-೧೯೭೩ ರನ್ವಯ ಅಸ್ತಿತ್ವಕ್ಕೆ ಬಂದಿರುತ್ತದೆ[೧]. ರಾಷ್ಟ್ರಿಯ ಹೆದ್ದಾರಿ ನಂ. ೪ ರ ಪೂಣೆ-ಬೆಂಗಳೂರು

ರಸ್ತೆಯ ಬೆಳಗಾವಿಯಿಂದ ಉತ್ತರಕ್ಕೆ ೪೮ ಕಿ.ಮೀ. ಅಂತರದಲ್ಲಿ ಹಿರಣ್ಯಕೇಶಿ ನದಿಯು ಈ ಪಟ್ಟಣದ ದಕ್ಷಿಣಕ್ಕೆ ಹರಿಯುತ್ತಿದೆ.

ಈ ಪಟ್ಟಣದ ಪುರಸಭೆಯ ಕ್ಷೇತ್ರವು ೧೭.೬೧ ಚ.ಕಿ.ಮೀ. ಇದ್ದು, ೩,೯೫೦ ಮನೆಗಳನ್ನು ಒಳಗೊಂಡಿರುತ್ತದೆ. ೨೦೦೧ ರ ಜನಗಣತಿಯ ಪ್ರಕಾರ ೩೨,೫೧೧ ಜನಸಂಖ್ಯೆ ಇರುತ್ತದೆ. ೧೯೯೫ ರ ನಂತರದಲ್ಲಿ ಪ್ರತ್ಯೇಕವಾದ ೨೩ ವಾರ್ಡುಗಳನ್ನು ರಚಿಸಿಕೊಂಡಿರುತ್ತದೆ. ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ ೨೩ ಆಗಿದ್ದು, ಹಾಗೂ ಸರಕಾರದಿಂದ ನಾಮಕರಣಗೊಂಡಿರುವ ಸದಸ್ಯರ ಸಂಖ್ಯೆ ೫ ಆಗಿರುತ್ತದೆ.

ಪುರಸಭೆಯಲ್ಲಿ ನಾಲ್ಕು ಸ್ಥಾಯಿ ಸಮಿತಿಗಳಿದ್ದು ಎಲ್ಲ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಅನುಕೂಲವಾಗಿದೆ. ೨೦ ಜನ ಕಾರ್ಯಾಲಯದ ಸಿಬ್ಬಂದಿಗಳಾಗಿ ಮತ್ತು ೬೦ ಪೌರ ಕಾರ್ಮಿಕರು ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಪುರಸಭೇಯ ಚುನಾವಣೆಯಲ್ಲಿ ಆಯ್ಕೆಗೊಂಡಿರುವ ಶ್ರೀ ಅಮರ ಮಧುಕರ ನಲವಡೆಯವರು ಅಧ್ಯಕ್ಷರಾಗಿ, ಮತ್ತು ಶ್ರೀಮತಿ ಜೀಜಿತಾಯಿ ಮಹಾದೇವ ದವಡತೆಯವರು ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವರು.

ಈ ಪರುಸಭೆಯ ಅಧೀನದಲ್ಲಿ ರೈತರು ಮತ್ತು ಕಾರ್ಮಿಕರಿಗೆ ಹಾಗೂ ನೌಕರರಿಗೆ ಅನುಕೂಲವಾಗುವಂತೆ ೪ ಮುಖ್ಯ ವಾಣಿಜ್ಯ ಬ್ಯಾಂಕುಗಳು, ೮ ಸಹಕಾರಿ ಸಂಘ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ೧ ಅಂಚೆ ಕಛೇರಿ, ೧ ದೂರವಾಣಿ ಕೇಂದ್ರ, ೧ ಸಾರ್ವಜನಿಕ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿವೆ. ೧ ಸರಕಾರಿ, ೧೫ ಖಾಸಗಿ ಆಸ್ಪತ್ರೆಗಳಿದ್ದು ಪಟ್ಟಣ ಹಾಗೂ ಸುತ್ತಲಿನ ಜನರಿಗೆ ಚಿಕಿತ್ಸೆ ನೀಡುವ ಕೇಂದ್ರಗಳಾಗಿವೆ. ಶೈಕ್ಷಣಿಕವಾಗಿ ಪೂರ್ವಪ್ರಾಥಮಿಕದಿಂದ ಪದವಿ ತರಗತಿಯವರೆಗೆ ೨೦ ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು, ತರಬೇತಿ ಶಿಕ್ಷಣ ಕೇಂದ್ರಗಳಿದ್ದು ವಿದ್ಯೆಯನ್ನು ಧಾರೆಯರಿಯುತ್ತಿವೆ.

ಸಾಮಾಜಿಕ ಸ್ಥಿತಿ : ಕರ್ನಾಟಕವು ಪ್ರಾಚೀನಕಾಲದಿಂದಲೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಇಲ್ಲಿಯ ಹಲವಾರು ಶಾಸನಗಳು ರಾಜ ಮಹಾರಾಜರ ಆಳ್ವಿಕೆಯನ್ನು ನಡೆಸಿರುವ ಬಗೆಗೆ ವಿವರಿಸ್ತ್ತದೆ. ಆದರೆ ಜನತೆಯ ಸಾಮಾಜಿಕ ಜೀವನದ ವಿವಿಧ ಆಯಾಮಗಳ ಬಗ್ಗೆ ಶಾಸನಗಳಲ್ಲಿ ಹೆಚ್ಚಾಗಿ ವಿಸ್ತಾರಗೊಂಡಿಲ್ಲ. ಆದರೂ ಶಾಸನಗಳಲ್ಲಿ ಅಲ್ಲಲ್ಲಿ ಉಲ್ಲೇಖಿತವಾದ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಿ ಮತ್ತು ಇತರ ಆಧಾರಗಳಿಂದ ಅಂದಿನ ಸಾಮಾಜಿಕತೆಯ ಬಗ್ಗೆ ವಿವರಿಸಬಹುದಾಗಿದೆ.

ಕನ್ನಡ ನಾಡಿನ ಸಾಮಾಜಿಕ ಸ್ಥಿತಿಗಳು ತಲೆಮಾರಿನಿಂದ ತಲೆಮಾರಿಗೆ ಶತಮಾನದಿಂದ ಶತಮಾನಕ್ಕೆ ಹೆಚ್ಚಾಗಿ ಹೊಂದುತ್ತಿರಲಿಲ್ಲ. ರಾಜಕೀಯ ಏಳುಬೀಳುಗಳು ಜನಸಾಮಾನ್ಯರ ನಿತ್ಯ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತಿರಲಿಲ್ಲ. ದಕ್ಷಿಣ ಪಥದಲ್ಲಿ ಕ್ರಿ.ಶ. ೬ನೇ ಶತನಮಾದಿಂದ ೧೨ನೇ ಶತಮಾನದ ಮಧ್ಯದಲ್ಲಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಸಮರಸವಾಗಿ ಒಂದು ಹೊಸದಾದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು.

ಸಂಕೇಶ್ವರ ಪಟ್ಟಣವು ಸಹ ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದ್ದು ಸಾಮಾಜಿಕವಾಗಿ ಶಾಂತಿ ಸಮೃದ್ಧಿಯನ್ನು ಒಳಗೊಂಡಿರುವುದು ಎಂಬುದಾಗಿ ಹಲವಾರು ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ.

ವರ್ಣವ್ಯವಸ್ಥೆ : ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬುದಾಗಿ ಚತುರ್ವರ್ಣಗಳಲ್ಲಿ ವಿಭಜಿಸಿದ್ದನ್ನು ಪ್ರಾಚೀನ ದಾಖಲೆಯಾದ "ಪುರುಷ ಸೂಕ್ತ"ದಲ್ಲಿ ಕಾಣಬಹುದು. ವೇದಕಾಲದಲ್ಲಿ ಸಮಾಜವನ್ನು ಹೀಗೆ ವಿಭಜಿಸಿದ್ದರೂ ಈ ವರ್ಣವ್ಯವಸ್ಥೆ ಜಿಗಿಯಾಗಿರದೇ ವೃತ್ತಿಯನ್ನವಲಂಬಿಸಿ ವಿಭಜಿಸಲಾಗಿತ್ತು. ಆದರೆ ಕಾಲಾಂತರದಲ್ಲಿ ಈ ವ್ಯವಸ್ಥೆಯು ಬದಲಾವಣೆಹೊಂದುತ್ತಾ ಜಾತಿವ್ಯವಸ್ಥೆಯಾಗಿ ಮಾರ್ಪಡಾದ ವಿಷಯವು ವೇದೋಪನಿಷತ್‌ಗಳಿಂದ ತಿಳಿಯುತ್ತದೆ[೨].

ಪ್ರಾಚೀನ ಮತ್ತು ಮಧ್ಯಕಾಲೀನ ಸಮಾಜದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನವನ್ನು ಹೊಂದಿದ್ದರು. ಇವರು ಸಮಾಜದ ಇತರ ಮೂರು ವರ್ಗಗಳಿಂದ ಪೂಜ್ಯನೀಯರಾಗಿದ್ದರೆಂದು ತಿಳಿದುಬರುತ್ತದೆ. ತಮ್ಮ ಜೀವನಮಾನವೆಲ್ಲಾ ಅಧ್ಯಯನ, ಧ್ಯಾನ, ಯಜ್ಞಯಾಗಗಳಲ್ಲಿ ನಿರತರಾಗಿರುತ್ತಿದ್ದರು. ಹಲವು ಶಾಸನಗಳಲ್ಲಿ ಇವರನ್ನು ಮಹಾಜನರೆಂದು ಕರೆಯಲಾಗಿದೆ. ಬ್ರಾಹ್ಮಣರಿಗೆ ದಾನ ನೀಡುವುದು ಪುಣ್ಯದ ಕೆಲಸವೆಂದು ಅಂದಿನ ಜನತೆ ತಿಳಿದುಕೊಂಡಿದ್ದರು.

ರಾಜಕೀಯ ರಂಗದಲ್ಲಿ ಕ್ಷತ್ರಿಯರ ಪಾತ್ರವು ಪ್ರಮುಖವಾಗಿತ್ತು. ಧೈರ್ಯ, ಸಾಹಸ, ಶೌರ್ಯ, ತೇಜಸ್ಸು, ಮುಂತಾದವು ಕ್ಷತ್ರಿಯರ ಸ್ವಾಭಾವಿಕ ಗುಣಗಳಾಗಿದ್ದರಿಂದ ಆಡಳಿತ ನಡೆಸಲು ಹಾಗೂ ಯುದ್ಧ ಮಾಡಲು ಸಮರ್ಥರಾಗಿದ್ದರು. ಈ ರೀತಿಯಾಗಿ ಕ್ಷತ್ರಿಯ ಅರಸರು ತಮ್ಮ ಘನತೆಗೆ ತಕ್ಕಂತೆ ಪ್ರಜೆಗಳಿಂದ ಹಾಗೂ ವಿದ್ವಾಂಸರಿಂದ ಬಿರುದುಗಳನ್ನು ಧರಿಸುತ್ತಿದ್ದರೆಂದು ಹೇಳಬಹುದು. ಪ್ರಸ್ತುತ ಸಮಾಜದಲ್ಲಿ ಬ್ರಾಹ್ಮಣರ ನಂತರದ ಸ್ಥಾನದಲ್ಲಿ ಕ್ಷತ್ರಿಯರು ಪ್ರಮುಖರಾಗಿದ್ದರು. ಅಂದಿನ ಸಮಾಜದಲ್ಲಿ ಕ್ಷತ್ರಿಯರು ಎಲ್ಲಾ ರಂಗಗಳಲ್ಲಿ ತಮ್ಮ

ಪ್ರಾವಿಣ್ಯತೆಯನ್ನು ತೋರಿಸುತ್ತಿದ್ದರೆಂದು ಹೇಳಬಹುದು. ಈ ಭಾಗದ ಹಲವಾರು ಶಾಸನಗಳು ದಂಡನಾಯಕ, ಮಹಾಮಂಡಲೇಶ್ವರ, ಮತ್ತು ಸಾಮಂತರನ್ನು ಉಲ್ಲೇಖಿಸುವುದರಿಂದ ಕ್ಷತ್ರಿಯರು ಸಮಾಜದ ಒಂದು ಪ್ರಮುಖ ವರ್ಗವಾಗಿತ್ತೆಂದು ತಿಳಿಯುವುದಾಗಿದೆ.

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದಲ್ಲಿ ಪ್ರಮುಖವಾದ ವರ್ಗವೆಂದರೆ ವೈಶ್ಯರು. ಹೆಸರೇ ಸೂಚಿಸುವಂತೆ ಇವರ ಪ್ರಮುಖ ಉದ್ಯೋಗ ವ್ಯಾಪಾರ, ಇದಲ್ಲದೇ ಕೃಷಿ ಮತ್ತು ವಾಣಿಜ್ಯದಲ್ಲಿ ತೊಡಗುವುದು. ವೈಶ್ಯರ ಇತರ ಕಸುಬುಗಳಾಗಿದ್ದು, ಇವರು ರಾಷ್ಟ್ರದ ಸುಖಜೀವನಕ್ಕೆ ಸಹಾಯಕರಾಗಿರುತ್ತಿದ್ದರು. ಇವರು ತಮ್ಮದೇ ಆದ ಸ್ಥಾನಮಾನ ಹೊಂದಿದ್ದು, ಶ್ರೇಣಿಗಳನ್ನು ಹೊಂದಿರುವುರೆಂದು ಕಂಡುಬರುತ್ತದೆ.

ಪ್ರಸ್ತುತ ಸಮಾಜದಲ್ಲಿ ಅತ್ಯಂತ ಕೆಳವರ್ಗದವರೆಂದರೆ ಶೂದ್ರರು, ಇವರು ಮೇಲಿನ ಮೂರು ವರ್ಗದವರು ಬಿಟ್ಟಿರುವ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಿದ್ದರೆಂದು ಹೇಳಬಹುದು. ಈ ವರ್ಗಕ್ಕೆ ಸೇರಿದವರು ಹೆಚ್ಚಾಗಿ ಇನ್ನೊಬ್ಬರ ಆಶ್ರಯದಲ್ಲಿರುವುದರಿಂದ ಇವರಿಗೆ ಸ್ವತಂತ್ರವಾದ ಯಾವ ಆಸ್ತಿ ಅಥವಾ ಅಂತಸ್ತು ಇದ್ದಿರಲಿಲ್ಲವೆಂದು ತಿಳಿಯುತ್ತದೆ. ಅರವನೆಗಳಲ್ಲಿ ಗೋವುಗಳನ್ನು ಕಾಯುವುದು ಹಾಗೂ ಅವುಗಳ ಸಂರಕ್ಷಣೆ ಮುಂತಾದವು ಇವರ ಕರ್ತವ್ಯಗಳಾಗಿದ್ದವು.

ಈ ಮೇಲೆ ವಿವರಿಸಿದಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂಬುವರು ಒಂದು ದೇಹಕ್ಕೆ ಸೇರಿದ ಅಂಗಗಳಿದ್ದಂತೆ. ಆದುದ್ದರಿಂದ ಇವರಲ್ಲಿ ಯಾವುದೇ ರೀತಿಯ ಭೇದಭಾವಗಳಿರಬಾರದು. ದೇಹದ ಅಂಗಗಳಲ್ಲಿ ಯಾವುದೊಂದು ಅಂಗವು ತಾನು ನಿರ್ವಹಿಸಬೇಕಾದ ಕರ್ತವ್ಯದಲ್ಲಿ ಲೋಪವುಂಟಾದರೆ ಅದರಿಂದ ಇಡಿ ದೇಹಕ್ಕೆ ಹೇಗೆ ತೊಂದರೆಯಾಗುತ್ತದೆಯೋ ಅದೇ ರೀತಿ ಸಮಾಜದಲ್ಲಿರುವ ವರ್ಗಗಳಲ್ಲಿ ಹೊಂದಾಣಿಕೆ ಇಲ್ಲದೆ ಇದ್ದರೆ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲಸಲಾರದು. ಈ ತತ್ವವನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿನ ಪ್ರಮುಖ ವರ್ಗ ಅಥವಾ ಜಾತಿಯವರು ಇತರರೊಂದಿಗೆ ಹೊಂದಾಣಿಕೆಯಿಂದ ಬಾಳುತ್ತಿದ್ದರೆಂದು ಹೇಳಬಹುದು. ಈ ರೀತಿಯಾಗಿ ಅಂದಿನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಪ್ರಮುಖ ಜಾತಿಯವರು ತಮ್ಮ ಪೂರ್ವಜರಿಂದ ಬಂದ ಕುಲಕಸುಬುಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರೆನ್ನಬಹುದು.

ಸುವ್ಯವಸ್ಥಿತವಾದ ಕೌಟುಂಬಿಕ ಜೀವನ ಇತಿಹಾಸದ ಪ್ರಾರಂಬದ ಕಾಲದಿಂದಲೂ ಕರ್ನಾಟಕದಲ್ಲಿ ಕಂಡುಬರುವದು. ತಂದೆತಾಯಿ, ಮಕ್ಕಳು, ಬಂಧು

ಬಳಗದವರೆಲ್ಲರೂ ಒಂದೇ ಚಪ್ಪರದಡಿಯಲ್ಲಿ ಕೂಡಿ ಬಾಳುವ ಅವಿಭಕ್ತ ಕುಟುಂಬಗಳೆ ಹೆಚ್ಚು ಹಾಗೆಯೇ ರಟ್ಟರ ಆಳ್ವಿಕೆಯಲ್ಲಿ ಹಮ್ಮು ಎನ್ನುವನಿಗೆ ನಾಲ್ಕು ಜನ ಗಂಡು ಮಕ್ಕಳು ಇದ್ದರೂ ಅವರೆಲ್ಲರೂ ರಾಜನ ಆಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದು ತಂದೆಗೆ ವಿಧೇಯರಾಗಿ ಕೂಡಿ ಬಾಳುತ್ತಿದ್ದರು. ಒಂದು ವೇಳೆ ಮುಖ್ಯಸ್ಥನಿಗೆ ವಾರಸುದಾರರಿಲ್ಲದ ಪಕ್ಷದಲ್ಲಿ ತನ್ನೆಲ್ಲ ಆಸ್ತಿಯನ್ನು ಧಾರ್ಮಿಕ ಕಾರ್ಯಕ್ಕೆ ಇಲ್ಲವೇ ಸಾರ್ವಜನಿಕ ಉಪಯೋಗಕ್ಕಾಗಿ ದಾನಮಾಡುವ ಸಂಪ್ರದಾಯವು ರಟ್ಟರ ಕಾಲದಲ್ಲಿತ್ತೆಂದು ತಿಳಿಯುತ್ತದೆ. ಸಂಕೇಶ್ವರದ ರಾಮಶೆಟ್ಟಿ ಎಂಬ ಧನಿಕನಿಗೆ ಸಂತಾನವಿಲ್ಲದ್ದಕ್ಕೆ ತನ್ನೆಲ್ಲ ಆಸ್ತಿಯನ್ನು ದಾನಪೂರ್ವಕವಾಗಿ ದೇವರಿಗೆ ಕೊಟ್ಟಿದ್ದು ಶಾಸನದಿಂದ ತಿಳಿದುಬರುತ್ತದೆ[೩].

ರಟ್ಟರ ಆಳ್ವಿಕೆಯಲ್ಲಿ ಬಹುಪತ್ನಿತ್ವ ಇತ್ತು. ತನ್ನ ಪತ್ನಿಯನ್ನು ಹೊರತುಪಡಿಸಿ ಉಳಿದ ಹೆಣ್ಣುಮಕ್ಕಳು ಕೂಡ "ಪರನಾರಿ ಸಹೋದರಿ" ಭಾವನೆಯಿಂದ ನಡೆದುಕೊಳ್ಳುತ್ತಿದ್ದರು. 'ಯಥಾ ರಾಜಾ, ತಥಾ ಪ್ರಜಾ' ಎಂಬಂತೆ ಪರಧನ ಪರಸತಿಯರನ್ನು ಬಯಸದ ಬಾಚಿಗೊಲ್ಲನ ನೈತಿಕತೆಯನ್ನು ಹೇಳುವ ಶಾಸನ "ಪರಧನಂ ಪರಸತಿಯಂ" ಗೌರವದಿಂದ ಕಾಣುತ್ತಿದ್ದನು[೪].

ಕಾವ್ಯಗಳು ತಮ್ಮ ಕಾಲದ ಸಮಾಜದ ಯಥಾವತ್ತಾದ ಚಿತ್ರಣವನ್ನು ಸಮಾಜದ ಆಶೋತ್ತರಗಳನ್ನು, ಆದರ್ಶಗಳನ್ನು, ಕಂಡುಂಡ ಕೊರತೆಗಳನ್ನು ಸೂಚಿಸುತ್ತವೆ. ಕಾವ್ಯಗಳಲ್ಲಿ ಸಮಾಜದ ಪ್ರತಿಬಿಂಬ ಗೋಚರಿಸುತ್ತವೆ. ನೇಮಿಚಂದ್ರನ ಲೀಲಾವತಿಯಲ್ಲಿ ಪತಿವ್ರತಾಸ್ತ್ರೀಯು ತನ್ನ ಪತಿಯನ್ನು ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವಳು.

ಗಂಡನಿಲ್ಲದೇ ಜೀವಿಸಲು ಒಪ್ಪದೆ ಅಸುನೀಗಲು ಸಿದ್ಧಳಾಗುತ್ತಾಳೆ. ಅದರಂತೆ ಕಂದರ್ಪನು 'ಏಕಪತ್ನಿವ್ರತಸ್ಥನಾಗಿ' ಆದರ್ಶ ಮೆರೆಸಿದ್ದಾನೆ[೫]. ಇಲ್ಲಿ ಕವಿಯು ರಾಜನನ್ನು ಆದರ್ಶವನ್ನಾಗಿ ಚಿತ್ರಿಸಿ ಸಮಾಜದ ಪ್ರತಿನಿಧಿಯನ್ನಾಗಿ ನಿಲ್ಲಿಸಿದ್ದಾನೆ.

ಪ್ರಾಚೀನಕಾಲದಿಂದಲೂ ಪ್ರಮುಖ ಜಾತಿಗಳು ಅಸ್ತಿತ್ವದಲ್ಲಿದ್ದಂತೆಯೇ ಇವತ್ತೂಕೂಡಾ ಕಾಣಬಹುದು. ಅವು ಉಪಜಾತಿಗಳು ಹಾಗೂ ವೃತ್ತಿ ಆಧಾರಿತ ಜಾತಿಗಳಾಗಿ ಕಂಡುಬರುತ್ತವೆ. ಅವುಗಳಲ್ಲಿ ಬಡಿಗರು, ಕಮ್ಮಾರರು, ಅಕ್ಕಸಾಲಿಗರು, ಒಡ್ಡರು, ಅಗಸರು, ಕುರುಬರು, ಬಣಜಿಗರು, ಮುಂತಾದವರು ಇರುವರೆಂದು ತಿಳಿಯುತ್ತದೆ. ಪ್ರಾಚೀನಕಾಲದಲ್ಲಿ ಸ್ತ್ರೀಯರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನಗಳಿದ್ದವು. ಸ್ತ್ರೀಯರು ಆಡಳಿತದಲ್ಲಿ, ಧರ್ಮದಲ್ಲಿ, ಶಿಕ್ಷಣದಲ್ಲಿ, ಪುರುಷರಷ್ಟೇ ಸಮಾನತೆಯುಳ್ಳವಳಾಗಿದ್ದಳು.

ಸಂಭ್ರಮ, ಸಂತಸಗಳಿಗೆ ಪ್ರತೀಕವಾಗಿರುವ ಅನೇಕ ಹಬ್ಬಗಳು ನಮ್ಮಲ್ಲಿ ಕಂಡುಬರುತ್ತವೆ. ಭಾರತಿಯರಲ್ಲಿ ಇರುವಷ್ಟು ಹಬ್ಬಗಳು ಬೇರೆಯಲ್ಲಿಯೂ ಕಂಡುಬರುವದಿಲ್ಲ. ನಮ್ಮ ನಾಡಿನ ಜನರ ಮನದಲ್ಲಿ ಪ್ರೀತಿ, ಸ್ನೇಹ, ದಯೇ, ಭಕ್ತಿ, ಮೊದಲಾದ, ನೀತಿ ನಿಯಮಗಳನ್ನು ಬೆಳೆಸುವದರಲ್ಲಿ ಹಬ್ಬ ಹರಿದಿನಗಳು ಪ್ರಮುಖವಾಗಿವೆ. ಅವುಗಳೆಂದರೆ ಕಾರಹುಣ್ಣಿಮೆ, ರಕ್ಷಾ ಬಂಧನ, ಜೋಕುಮಾರ ಹಬ್ಬ, ಮಹಾನವಮಿ, ಹೋಳಿಹಬ್ಬ, ಯುಗಾದಿಹಬ್ಬ, ಮುಂತಾದವು ಮುಖ್ಯವಾಗಿದ್ದವು. ಇಂತಹ ಹಬ್ಬಹರಿದಿನಗಳ ಆಚರಣೆಯಲ್ಲಿ ಸಂಕೇಶ್ವರವು ಹೊರತಾಗಿಲ್ಲ. ಸಾಂಸ್ಕೃತಿಕವಾಗಿ ಎಲ್ಲ ಧರ್ಮಿಯರು ಒಂದುಗೂಡಿ ವಿಶೇಷ ಹಬ್ಬಗಳನ್ನು ಆಚರಿಸುತ್ತಿರುವುದು ಕಂಡುಬರುತ್ತದೆ.

ಆರ್ಥಿಕ ಸ್ಥಿತಿ : ಒಂದು ನಾಡಿನ ಶ್ರೀಮಂತಿಕೆಯನ್ನು ಮತ್ತು ವೈಭವವನ್ನು ಅಲ್ಲಿನ ಸಂಪತ್ತಿನಿಂದ ಅಳೆಯುವದಾಗಿದೆ. ಭೌಗೋಳಿಕವಾಗಿ ಫಲವತ್ತಾದ ಮಣ್ಣು, ನೀರಾವರಿಯ ಸೌಕರ್ಯದಿಂದ ಉತ್ತಮ ಫಸಲುಗಳನ್ನು ಬೆಳೆಯುವದಾಗಿದೆ. ಆರ್ಥಿಕ ರಂಗದಲ್ಲಿ ಕೃಷಿಯು ಮುಖ್ಯವಾಗಿದ್ದು ಒಂದು ನೆಲೆಯ ಚಿತ್ರಣವನ್ನು ಬವಲಿಸುವದಾಗಿದೆ. ಇದಕ್ಕೆ ಸಂಕೇಶ್ವರವು ಹೊರತಾಗಿಲ್ಲ. ಕೃಷಿಯು ನಮ್ಮ ದೇಶದ ಪ್ರಧಾನ ಕಸಬು ಆಗಿತ್ತು. ಆದನ್ನೇ ಈ ಭಾಗದ ಜನರು ತಮ್ಮ ಮೂಲ ಉದ್ಯೋಗವನ್ನಾಗಿಸಿಕೊಂಡಿದ್ದರು. ಏಕೆಂದರೆ ಕಪ್ಪು ಮತ್ತು ಕೆಂಪು ಮಣ್ಣಿನ ಫಲವತ್ತತೆಯನ್ನು ಒಳಗೊಂಡಿದ್ದು ಸಂಕೇಶ್ವರದ ಪರಿಸರದಲ್ಲಿ ಕಂಡುಬರುತ್ತದೆ. ಇಲ್ಲಿನ ರೈತರಿಗೆ ವರದಾನವಾಗಿ ಹಿರಣ್ಯಕೇಶಿ ನದಿಯು ಹರಿಯುತ್ತಿದೆ. ಅಷ್ಟೇ ಅಲ್ಲದೇ ನೈರುತ್ಯ ಮಾನ್ಸೂನ ಮಳೆಯು ಹೆಚ್ಚಿನ ಪ್ರಮಾಣದಲ್ಲಿ ಆಗುವದರಿಂದ ಹೆಚ್ಚಿನ ಬೆಳೆಗಳನ್ನು ಬೆಳೆಯುವದಾಗಿದೆ. ಪ್ರತಿಶತ ೮೦% ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇಲ್ಲಿನ ಮುಖ್ಯ ಬೆಳೆಗಳೆಂದರೆ ಕಬ್ಬು, ತಂಬಾಕು, ಸೋಯಾಜಿನ, ಮೆನಸಿನಕಾಯಿ, ಜೋಳಗಳಾಗಿದ್ದು, ಅಲ್ಲದೆ ಇತರ ಆಹಾರ ಧಾನ್ಯ ಮತ್ತು ತರಕಾರಿ ಬೆಳೆಗಳು ಪ್ರಮುಖವಾಗಿವೆ. ಈ ಬೆಳೆಗಳಿಂದಲೇ ಸಂಕೇಶ್ವರವು ಪ್ರಾಚೀನ ಕಾಲದಲ್ಲಿ ವ್ಯಾಪಾರ ವಾಣಿಜ್ಯ ಕೇಂದ್ರವಾಗಿ ಹೊರಹೊಮ್ಮಿತು.

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸಲು ಕೆಲವೊಂದು ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡಿದ್ದನು. ಇಂತಹ ಕೈಗಾರಿಕೆಗಳನ್ನು (ವೃತ್ತಿಗಳನ್ನೇ) ಅವಲಂಬಿಸಿ ಜೀವನ ನಡೆಸುತ್ತಿರುವ ಕೆಲವು ಜನರಿದ್ದರು ಅಂತಹ ಕೈಗಾರಿಕೆಗಳನ್ನು ಇಲ್ಲಿ ಅಧ್ಯಯನಿಸಲಾಗಿದೆ. ಅವರಲ್ಲಿ ನೇಕಾರರು, ಕಮ್ಮಾರರು, ಬಡಿಗರು, ಅಕ್ಕಸಾಲಿಗರು, ಮೇದಾರರು, ಚಮ್ಮಾರರು ಇತ್ಯಾದಿಗಳು ಕರಕುಶಲ ಕಸುಬುದಾರರಾಗಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ : ಭಾರತವು ಸ್ವತಂತ್ರಗೊಂಡ ನಂತರ ಮುಂಬಯಿ ಪ್ರಾಂತ್ಯದಲ್ಲಿ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಮಿತಿಯು ೧೯೫೦ರಲ್ಲಿ ಅಸ್ತಿತ್ವಗೊಂಡಿತು. ಶ್ರೀ ಅಪ್ಪಣ್ಣಗೌಡ ಪಾಟೀಲರು ಈ ಸಮಿತಿಯ ಪ್ರಥಮ ಅಧ್ಯಕ್ಷರಾಗಿ, ಬಸಗೌಡಾ ಪಾಟೀಲರು ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ಈ ಸಂಸ್ಥೆ ಬೆಳೆಯಲು ಇವರಿರ್ವರು ಶ್ರಮವಹಿಸಿ ಭದ್ರವಾದ ಬುನಾದಿಯನ್ನು ಹಾಕಿದರು. ೧೫ ವರ್ಷಗಳ ಸುದೀರ್ಘ ಅವಧಿಯಲ್ಲಿ ಕಾಯ್ದೆಗೆ ಅನುಗುಣವಾಗಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಸೇವೆಗೈದು ಅದರ ಏಳ್ಗೆಗೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸಿದರು. ಈ ಸೇವಾ ನಿಷ್ಠೆ, ದಕ್ಷ ಆಡಳಿತವು ನನ್ನ ವ್ಯಕ್ತಿತ್ವದ ಮೇಲೆ ತುಂಬಾ ಪರಿಣಾಮವನ್ನು ಬೀರಿತು, ಎಂಬುದಾಗಿ ಬಸಗೌಡ ಪಾಟೀಲರು ಹೇಳಿರುವರು.

ಪ್ರಸ್ತುತವಾಗಿ ಈ ಮಾರುಕಟ್ಟೆಯು ಸಂಕೇಶ್ವರದಲ್ಲಿ ೧೭.೩೮ ಎಕರೆಯ ಮುಖ್ಯ ಪ್ರಾಂಗಣದ ಭೂಮಿಯನ್ನು, ಹಾಗೂ ೧೨ ಎಕರೆ ಭೂಮಿಯನ್ನು ಉಪಪ್ರಾಂಗಣ ಎಂಬುದಾಗಿ ದನಗಳ ಮಾರುಕಟ್ಟೆಗಾಗಿ ಒಳಗೊಂಡಿರುತ್ತದೆ. ೨೦೧೧ ರ ಚುನಾವಣೆಯಲ್ಲಿ ಆಯ್ಕೆಗೊಂಡಿರುವ ಸದಸ್ಯರ ಸಂಖ್ಯೆಯು ರೈತರ ಪ್ರತಿನಿಧಿಯಾಗಿ ೧೧ ಇದ್ದು, ವರ್ತಕರ ಪ್ರತಿನಿಧಿಯಾಗಿ ೧ ಇದ್ದು, ಸರಕಾರದಿಂದ ನಾಮಕರಣಗೊಂಡಿರುವ ಸದಸ್ಯರ ಸಂಖ್ಯೆ ೩ ಇದ್ದು, ಒಟ್ಟಾರೆಯಾಗಿ ೧೫ ಪ್ರತಿನಿಧಿಗಳನ್ನೊಳಗೊಂಡಿರುತ್ತದೆ. ಕಾರ್ಯಾಲಯದಲ್ಲಿ ೮ ಜನ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿರುವರು. ಸ್ವಾತಂತ್ರ್ಯ ನಂತರದಲ್ಲಿ ಸಹಕಾರ ಕ್ಷೇತ್ರದೊಳಗೆ ಈ ಮಾರುಕಟ್ಟೆಯು ಪ್ರಾಮುಖ್ಯತೆಯನ್ನು ಪಡೆದಿರುವದು. ಇದರ ಉಪಮಾರುಕಟ್ಟೆಗಳಾಗಿ ಹುಕ್ಕೇರಿ, ಪಾಶ್ಚಾಪೂರ, ದಡ್ಡಿ, ಹೆಬ್ಬಾಳ, ಈ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತವೆ.

ಈ ಸಮಿತಿಯು ರೈತರಿಗೆ ರಿಯಾಯತಿ ದರದಲ್ಲಿ ಋತುಮಾನಕ್ಕೆ ತಕ್ಕಂತೆ ರಸಗೊಬ್ಬರ ಮತ್ತು ಬೀಜಗಳನ್ನು ಪೂರೈಸುತ್ತದೆ. ಇದರಿಂದ ಆರ್ಥಿಕವಾಗಿ ರೈತರಿಗೆ ಸಹಾಯಕವಾಗಿದೆ. ಅಷ್ಟೇ ಅಲ್ಲದೇ ರೈತರು ಉತ್ಪಾದಿಸಿದ ಬೆಳೆಗಳಿಗೆ ಸೂಕ್ತವಾದ ಬೆಲೆಯನ್ನು ನಿಗದಿಗೊಳಿಸಿ ಅವರ ಹೆಚ್ಚು ದುಡಿಯುವಂತೆ ಪ್ರೋತ್ಸಾಹಿಸುವದಾಗಿದೆ.

ಸಹಕಾರಿ ಹಣಕಾಸು ಸಂಘ ಸಂಸ್ಥೆಗಳು : ಸಹಕಾರಿ ರಂಗದಲ್ಲಿ ರೈತರಿಗಾಗಿ, ಕಾರ್ಮಿಕರಿಗಾಗಿ, ವ್ಯಾಪಾರಸ್ಥರಿಗಾಗಿ, ಉದ್ಯೋಗಿಗಳಿಗೆ ಆರ್ಥಿಕ ಸಹಾಯ ನೀಡುವದಕ್ಕಾಗಿ ಸ್ಥಾಪನೆಗೊಂಡಿರುವದೇ ಸಹಕಾರಿ ಸಂಘಗಳಾಗಿವೆ. ಇವು ಸಂಕೇಶ್ವರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸ್ಥಾಪನೆಗೊಂಡು ಕಾರ್ಯಚಟುವಟಿಕೆಯಲ್ಲಿ ತೊಡಗಿರುತ್ತವೆ. ಸಂಕೇಶ್ವರ, ಹುಕ್ಕೇರಿ, ಮತ್ತು ಪಾಶ್ಚಾಪೂರಗಳಲ್ಲಿಯ ಸಹಕಾರಿ ಹಣಕಾಸು ಸಂಘಗಳು ಏಕಕಾಲದಲ್ಲಿ ದಿವಾಳಿಯಾದವು. ಇದರಿಂದ ಶೇರಬಂಡವಾಳ ಸಂಗ್ರಹಕ್ಕೆ ಹೆಚ್ಚಿನ ಆತಂಕ ಉಂಟಾಯಿತು. ಶೇರ ಬಂಡವಾಳ ಸಂಗ್ರಹಣೆಯ

ಕಾರ್ಯವು ಸ್ಥಗಿತಗೊಂಡಿತು. ಅಪ್ಪಣ್ಣಗೌಡರು ಈ ಕಾರ್ಯವನ್ನು ಪುನಃ ಆರಂಭಿಸಿದರು. ಶೇರ ಹಣವನ್ನು ಮೊದಲು ರೈತರಿಂದ ಸಂಗ್ರಹಿಸಬೇಕೆಂದು ಆಲೋಚಿಸಿ ಕಾರ್ಯಪ್ರವೃತ್ತಿಗಿಳಿದರು. ಶ್ರೀ ಜಿ. ಎಂ. ಹಿರೇಮಠ ತಹಶೀಲದಾರರು, ಶ್ರೀರಂಗ ಕಾಮತ, ಸಹಕಾರಿ ರಂಗದ ಪ್ರಥಮ ರಜಿಸ್ಟ್ರಾರರಾದ ಶ್ರೀ ಬಿ. ಎ. ಪಾಟೀಲರವರು ಸಹಕರಿಸಿದರು. ಹುಕ್ಕೇರಿ, ಚಿಕ್ಕೋಡಿ, ಗೋಕಾಕ, ಮತ್ತು ಗಡಹಿಂಗ್ಲಜ ತಾಲೂಕುಗಳಲ್ಲಿನ ರೈತ ಬಾಂಧವರಿಂದ ಶೇರ ಬಂಡವಾಳ ಸಂಗ್ರಹಿಸಲಾಯಿತು. ಶ್ರೀ ಎಸ್. ಐ. ಪಾಟೀಲ, ಶ್ರೀ ಎನ್. ಡಿ. ಕುಲಕರ್ಣಿ ಇವರು ಬಡ್ಡಿ ರಹಿತ ಹಣವನ್ನು ರೈತರಿಗೆ ಕೊಟ್ಟು ಶೇರ ಬಂಡವಾಳವನ್ನು ಸಂಗ್ರಹಿಸುವಲ್ಲಿ ಹೆಚ್ಚು ಸಹಾಯ ನೀಡಿದರು. ಶ್ರೀ ಎಂ. ಎಸ್. ರಾಮಯ್ಯಾ, ಶ್ರೀ ಆರ್. ವಾಯ್. ಚಂದರಗಿ, ಶ್ರೀ ಜಿ. ಆರ್. ಕಣಗಲಿ ಮೊದಲಾದ ಮಹನಿಯರು ದೊಡ್ಡ ಮೊತ್ತದ ಹಣ ನೀಡಿ ಹೆಚ್ಚು ಶೇರಗಳನ್ನು ಖರೀದಿಸಿ ಸಹಕರಿಸಿದರು.

ಈ ರೀತಿಯಾಗಿ ಹಣಕಾಸು ಸಂಸ್ಥೆಗಳು ರೈತರಿಗೆ ಬೆನ್ನೆಲಬು ಆಗಿ ನಿಂತು ಅವರ ದುಡಿಮೆಗೆ ಆರ್ಥಿಕ ಸಹಾಯ ನೀಡಿ, ಸಹಕರಿಸಿದವು.

ಸಕ್ಕರೆ ಕಾರಖಾನೆ : ಅಪ್ಪಣ್ಣಗೌಡರ ಮತ್ತು ಸಂಕೇಶ್ವರದ ಗಾಢವಾದ ಸಂಬಂಧ. ಅನ್ಯೋನ್ಯತೆ ವಿಸ್ಮಯಕಾರಿಯಾಗಿದೆ. ಸಂಕೇಶ್ವರದ ಸ್ಮರಣೆ ಸ್ಮೃತಿ ಪಟಲದಲ್ಲಿ ಮೂಡುತ್ತಲೆ ಅಪ್ಪಣ್ಣಗೌಡರ ಹೆಸರು ಪ್ರತ್ಯಕ್ಷವಾಗುತ್ತದೆ. ಅಪ್ಪಣ್ಣಗೌಡರು ಎನ್ನುತ್ತಲೆ ಸಂಕೇಶ್ವರದ ಚಿತ್ರವು ಕಣ್ಮುಂದೆ ಮೂಡುತ್ತದೆ. ಈ ಪುಣ್ಯ ಭೂಮಿಯ ಫಲವೇ ಅಪ್ಪಣ್ಣಗೌಡರು. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಸಹಕಾರಿ ನಕ್ಷೆಯೊಳಗೆ ಸಂಕೇಶ್ವರವು ಒಂದು ಸ್ಥಾನವನ್ನು ಪಡೆದುಕೊಂಡಿದೆ. ಅದಕ್ಕಾಗಿ ಸಕ್ಕರೆಯ ಸಿಹಿ ನಗರವೆಂಬ ಖ್ಯಾತಿಯನ್ನು ಪಡೆದಿರುವದು.

ಸ್ವಾತಂತ್ರ್ಯ ನಂತರದ ನವರಾಷ್ಟ್ರದ ನಿರ್ಮಾಣ ಕಾರ್ಯವು ಭರದಿಂದಲೇ ಸಾಗಿತು. ಪಂಚವಾರ್ಷಿಕ ಯೋಜನೆಗಳು ರೂಪಗೊಂಡು ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗಾಗಿ 'ಸಮಾಜ ವಿಕಾಸ ಯೋಜನೆ' ಹುಟ್ಟಿಕೊಂಡಿತು. ಸಹಕಾರಿ ಮನೋಭಾವದಿಂದ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು, ಸಮಾಜ ಕಲ್ಯಾಣ ಕೇಂದ್ರಗಳು ಹಾಗೂ ಅಕ್ಕನ ಬಳಗ, ಸ್ಥಾಪನೆಗೊಂಡವು. ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಹಳ್ಳಿಗಳ ಪ್ರಾಥಮಿಕ ಭರವಸೆಗಳನ್ನು ಈಡೇರಿಸಲು ರೈತಾಪಿ ವರ್ಗಕ್ಕೆ ಉಪಯೋಗವಾದ ಒಕ್ಕಲುತನದಲ್ಲಿ ಹೊಸ ಪ್ರಯೋಗಗಳನ್ನು ಜಾರಿಗೊಳಿಸಿದರು. ಹೊಸ ಉಪಕರಣ, ರಾಸಾಯನಿಕ ಗೊಬ್ಬರ, ಉತ್ತಮ ಬೀಜಗಳ ಪೂರೈಕೆ ಮಾಡಿದರು. ಕೆರೆ ಮತ್ತು ಬಾವಿಗಳ ನಿರ್ಮಾಣ, ಹೊಲಗಳಿಗೆ ಒಡ್ಡು ಹಾಕುವುದು ಆ ಮುಖಾಂತರ ನೀರಾವರಿ ಕ್ಷೇತ್ರವನ್ನು ಹೆಚ್ಚಿಸಿದರು.

ಗ್ರಾಮೋದ್ಯೋಗಗಳು ಹುಟ್ಟಿಕೊಂಡವು. ಹೀಗೆ ಹಳ್ಳಿಗಳು ರೈತರು ಮತ್ತು ಗ್ರಾಮೀಣ ಬದುಕಿನ ಮಧ್ಯದಲ್ಲಿ ಸಕ್ಕರೆ ಕಾರಖಾನೆ ಸ್ಥಾಪನೆಗೊಂಡಿತು.

ನಮ್ಮ ದೇಶದಲ್ಲಿ ಸಹಕಾರಿ ರಂಗದೊಳಗೆ ವಿಶಿಷ್ಟ ಸ್ಥಾನಪಡೆದು ಮೆರೆದ ಕೀರ್ತಿಯು ಈ ಕಾರಖಾನೆಗೆ ಲಭಿಸುತ್ತದೆ. ಇದು ಅಪ್ಪಣ್ಣಗೌಡರ ಮತ್ತು ಅವರ ಅಸಂಖ್ಯಾತ ನಿಷ್ಠಾವಂತ ಸ್ನೇಹಿತರ ದುಡಿಮೆಯ ಪ್ರತಿಫಲವಾಗಿದೆ. ಅವರಲ್ಲಿ ಎಂ. ಪಿ. ಪಾಟೀಲ, ಬಸಗೌಡಾ ಪಾಟೀಲ, ಎಸ್. ಐ. ಪಾಟೀಲರ ಸಹಕಾರ ಸ್ಮರಣೀಯವಾದುದಾಗಿದೆ.

ಮಹಾರಾಷ್ಟ್ರದ ಸಹಕಾರಿ ಆಂದೋಲನವು ಅಪ್ಪಣ್ಣಗೌಡರ ಮೇಲೆ ಹಾಗೂ ಅವರ ಸಹಕಾರಿ ಕ್ಷೇತ್ರದ ಮೇಲೆ ತುಂಬಾ ಪ್ರಭಾವ ಬೀರಿತು. ಗ್ರಾಮೀಣ ಬಡ, ಅಶಿಕ್ಷಿತ ರೈತ ಸಮೂಹದ ಪ್ರತಿಕೂಲ ವಾತಾವರಣದಲ್ಲಿ ಇದನ್ನು ಸಾಧ್ಯಗೊಳಿಸಿದರು. ಕಾರಖಾನೆಯ ಕನಿಷ್ಠ ಅವಶ್ಯಕತೆಯ ಪೂರೈಕೆಗಾಗಿ ೮-೧೦ ಲಕ್ಷ ರೂಗಳು ಬೇಕಾದ ಸಂದರ್ಭದಲ್ಲಿ ತಮ್ಮ ವ್ಯಕ್ತಿತ್ವವನ್ನೇ ಪಣಕ್ಕಿಟ್ಟು ಹೋರಾಟಕ್ಕಿಳಿದರು. ಸರಕಾರಿ ಸ್ನೇಹಿತರು ಸಹಾಯ ನೀಡಿದರು. ಈ ಕಾರಖಾನೆ ನೀಲನಕ್ಷೆ ರೂಪರೇಷೆ ಸಿದ್ಧವಾಯಿತು. ಕಾರ್ಯಾಚರಣೆ ಆರಂಭಗೊಂಡಿತು. ಈ ಸಮಯದಲ್ಲಿ ರಾಜ್ಯಗಳ ಪುನರ್‌ರಚನೆ, ಹಾಗೂ ಭಾಷಾವಾರು ಪ್ರಾಂತ್ಯಗಳ ಪುನರವಿಂಗಡನೆಯಿಂದಾಗಿ ಮುಂಬಯಿ, ಮೈಸೂರು ರಾಜ್ಯಗಳು ನಿರ್ಮಾಣಗೊಂಡವು. ಜನತೆಯ ಆರ್ಥಿಕ ಭದ್ರತೆಗೆ ಪ್ರಥಮ ಪ್ರಾಶಸ್ತ್ಯ ನೀಡಿ ೧೯೫೬ ರಲ್ಲಿ ಹಿರಾಶುಗರ ಸಕ್ಕರೆ ಕಾರಖಾನೆಗೆ ಚಾಲನೆ ನೀಡಿದರು[೬]. ಅಂದಿನ ರಾಜ್ಯದ ಸಹಕಾರಿ ಸಂಘಗಳ ಪ್ರಥಮ ರಜಿಸ್ಟ್ರಾರರಾದ ಶ್ರೀ ಬಿ. ಎ. ಪಾಟೀಲರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟರು. ಎಷ್ಟೋ ಜನರು ಕಾರಖಾನೆಗೆ ಬಡ್ಡಿರಹಿತ ಹಣ ತೊಡಗಿಸಿ ಶೇರ ಹಣ ಪಡೆದರು. ಪ್ರಥಮ ವಾರ್ಷಿಕ ಸಭೆಯು ೦೨.೧೦.೧೯೫೬ ರಂದು ಅಂದಿನ ಮಾನ್ಯ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರಿಂದ ಉದ್ಘಾಟಿಸಲ್ಪಟ್ಟಿತು.

ಸಂಸ್ಥೆಯ ಪ್ರಥಮ ಚೇರಮನರಾಗಿ ಶ್ರೀ ಎಸ್. ಆಯ್. ಪಾಟೀಲರು ಆಯ್ಕೆಗೊಂಡು ಕಾರ್ಯನಿರ್ವಹಿಸತೊಡಗಿದರು. ಈ ಕಾರಖಾನೆಯು ೧೫೦ ಎಕರೆ ಜಮೀನನ್ನು ಒಳಗೊಂಡು ಕಾರ್ಯ ಚಟುವಟಿಕೆಯಲ್ಲಿ ತೊಡಗಿತು. ೧,೨೫೦ ಮೆಟ್ರಿಕ ಟನ್ ಸಾಮರ್ಥ್ಯದ ಕಾರಖಾನೆ ಸ್ಥಾಪನೆಯ ಅಂದಾಜು ವೆಚ್ಚವನ್ನು ೧೪೫ ಲಕ್ಷ ರೂ.ಗಳಿಗೆ. ನಿಗದಿಪಡಿಸಲಾಯಿತು. ಅದಕ್ಕೆ ೧೨ ಲಕ್ಷ ಅಧಿಕ ವೆಚ್ಚಕೂಡಿಸಿ ರಾಜ್ಯ ಸರಕಾರಕ್ಕೆ ಸಿಫಾರಸ್ಸು ಮಾಡಲಾಯಿತು. ಸದಸ್ಯರ ಶೇರ ಹಣ ೨೦ ಲಕ್ಷ ರೂ.ಗಳು, ಆಯ್.ಎಫ್.ಸಿ. ಸಾಲದಿಂದ ೨೫ ಲಕ್ಷ ರೂ.ಗಳು, ಅಪೇಕ್ಸ ಬ್ಯಾಂಕನಿಂದ ೩೦ ಲಕ್ಷ ರೂ.ಗಳು, ರಾಜ್ಯ ಸರಕಾರದ ಶೇರ ಹಣ ೭೦ ಲಕ್ಷ ರೂ.ಗಳು, ಹೀಗೆ

ಬೇರೆ ಬೇರೆ ಮೂಲಗಳಿಂದ ಹಣವನ್ನು ಸಂಗ್ರಹಿಸಲಾಯಿತು. ೦೨.೦೬.೧೯೬೧ ರಂದು ಕಾರಖಾನೆಯಲ್ಲಿ ಕಬ್ಬು ನುರಿಸುವ ಪ್ರಾಯೋಗಿಕ ಕಾರ್ಯವು ಆರಂಭಗೊಂಡಿತು. ೦೫.೧೧.೧೯೬೧ ರಂದು ಪ್ರಥಮ ಹಂಗಾಮಿನ ಕಾರ್ಯವು ಆರಂಭಗೊಂಡಿತು. ಗೋಟೂರು, ಕೊಟಬಾಗಿ, ಅವರಗೋಳ, ಕೋಚರಿ, ಸುಲ್ತಾನಪೂರ, ಇತ್ಯಾದಿ ಹಳ್ಳಿಗಳಿಂದ ೩೦೦ ರಿಂದ ೩೫೦ ಎಕರೆ ಜಮೀನನ್ನು ಈ ಯೋಜನೆಗೆ ಅಳವಡಿಸಲಾಯಿತು. ಈ ಸಕ್ಕರೆ ಕಾರಖಾನೆಯು ರೈತರ ಕಾರಖಾನೆ ಎಂಬುದಾಗಿ ಪ್ರಸಿದ್ಧವಾಯಿತು. ಸತ್ಯ, ಶುದ್ಧ, ಪ್ರಾಂಜಲ, ಬದುಕು ನಡೆಸಿದ ಅಪ್ಪಣ್ಣಗೌಡರು ತ್ರೀಕರಣ ಪೂರ್ವಕವಾಗಿ ದುಡಿದರು. ಅನಾವಶ್ಯಕ ಖರ್ಚಿನಲ್ಲಿ ಕಡಿತ, ಆಡಳಿತ ವೆಚ್ಚದಲ್ಲಿ ಹಿಡಿತ, ಇದು ಅವರ ಸಿದ್ಧಾಂತವಾಗಿತ್ತು. ಸಂಚಾಲಕ ಮಂಡಳಿಯು ಮತ್ತು ಅಧಿಕಾರಿಗಳ ಹಸ್ತಕ್ಷೇಪಕ್ಕೆ ಅವಕಾಶ ಇರಲಿಲ್ಲ.

ಸ್ಥಾಪನೆಗೊಂಡ ನಂತರದಲ್ಲಿ ಶ್ರೀ ಎಸ್. ಆಯ್. ಪಾಟೀಲರು ಪ್ರಥಮಿಗರಾಗಿ ಹಾಗೂ ಅಪ್ಪಣ್ಣಗೌಡರು ಮತ್ತು ಬಸಗೌಡ ಪಾಟೀಲರು ಈ ಕಾರಖಾನೆಯ ಚೇರಮನ್‌ರಾಗಿ ದಕ್ಷಯತೆಯ ಕಾರ್ಯ ನಿರ್ವಹಿಸಿದರು. ಕಾರಖಾನೆಯ ವಸ್ತುಗಳು ಸುಗಮವಾಗಿ ಸಾಗಾಣಿಕೆಯಾಗಲು ಸಂಸ್ಥೆಗಳಿಗೆ ಸ್ವಂತ ವಾಹನಗಳ ಅವಶ್ಯಕತೆಯಾಯಿತು. ಇದರಿಂದ ಆಡಳಿತ ನಿರ್ವಹಣೆಗಾಗಿ ೪ ಕಾರುಗಳನ್ನು, ಎರಡು ಜೀಪುಗಳನ್ನು ಖರೀದಿಸಲಾಯಿತು. ಕಾರಖಾನೆಯ ಎರಡು ಸಾವಿರ ಕಾರ್ಮಿಕರು ಸಂಚಾಲಕ ಮಂಡಳಿಯ ಜೊತೆಗೆ, ಅಧಿಕಾರಿಗಳ ಜೊತೆಗೆ ಸಹಕರಿಸಿ ಸೌಹಾರ್ದತೆಯಿಂದ ದುಡಿದಿರುವದು ಕಂಡುಬರುತ್ತದೆ. ಪ್ರತಿವರ್ಷ ಲಾಭಾಂಶವನ್ನು ಬೋನಸ್ ರೂಪದಲ್ಲಿ ವಿತರಿಸಲಾಗುತಿತ್ತು. ಮೂಲಭೂತ ಸೌಕರ್ಯಗಳು ಕಾರ್ಮಿಕರಿಗೆ ದೊರೆಯುವಂತೆ ಮಾಡಲಾಯಿತು. ವಸತಿಗಳ ನಿರ್ಮಾಣ, ಮಕ್ಕಳ ಶಿಕ್ಷಣ, ಮನರಂಜನೆಗೆ ಅವಕಾಶಗಳನ್ನು ಅಧಿಕಪ್ರಮಾಣದಲ್ಲಿ ನೀಡಲಾಗಿತ್ತು. ಧೈನಂದಿನ ವಸ್ತುಗಳ ಖರೀದಿಗಾಗಿ ಯೋಗ್ಯವಾದ ಬೆಲೆಯನ್ನು ನಿಗದಿಗೊಳಿಸಲಾಯಿತು. ಇದರಿಂದ ಪ್ರತಿಯೊಬ್ಬ ಕಾರ್ಮಿಕರು ಸಂಸ್ಥೆಯು ತನ್ನದೆಂಬ ಅಭಿಮಾನದಿಂದ ಶ್ರದ್ಧಾಪೂರ್ವಕವಾಗಿ ದುಡಿಯುವಂತಾಯಿತು. ಪ್ರಸ್ತುತವಾಗಿ ಈ ಕಾರಖಾನೆಯು ಈ ಭಾಗಕ್ಕೆ ಪ್ರಸಿದ್ಧವಾಗಿದೆ.

ಸಹಕಾರಿ ಗ್ರಾಮೀಣ ವಿದ್ಯುತ್ ಸಂಸ್ಥೆ : ರಾಜ್ಯದಲ್ಲಿಯೇ ಪ್ರಥಮಬಾರಿಗೆ ಸಹಕಾರಿ ಕ್ಷೇತ್ರದಲ್ಲಿ ವಿದ್ಯುತ ಸಂಸ್ಥೆ ಸ್ಥಾಪನೆಗೊಂಡಿರುವ ಶ್ರೇಯಸ್ಸು ಹುಕ್ಕೇರಿಗೆ ಲಭಿಸುತ್ತದೆ. ಶ್ರೀ ಎಂ. ಪಿ. ಪಾಟೀಲರು ಹಾಗೂ ಶ್ರೀ ಅಪ್ಪಣ್ಣಗೌಡರು ಕೂಡಿಕೊಂಡು ಈ ಸಂಸ್ಥೆಯನ್ನು ಹುಟ್ಟುಹಾಕಿದರು. ಎಂಬುದಾಗಿ ಶಿವಪ್ಪಣ್ಣ ಗುಂಡಾಳಿಯವರು ತಿಳಿಸಿರುವರು. ಅಂದು ಅಮೇರಿಕಾದವರು ದೇಶದಲ್ಲಿಯೇ ಐದು ಕಡೆಗೆ ವಿದ್ಯುತ

ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಕೈಗೊಂಡರು. ಮುಂಬಯಿ ಪ್ರಾಂತ್ಯದಲ್ಲಿ ಒಂದು ಕೇಂದ್ರದ ನಿರ್ಮಾಣಕ್ಕೆ ಅಂತಿಮ ಸಿಫಾರಸ್ಸುವಾಯಿತು. ಅದನ್ನು ಎಂ. ಪಿ. ಪಾಟೀಲರು ತಮ್ಮ ಕ್ಷೇತ್ರವಾದ ಹುಕ್ಕೇರಿಯಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯು ಯಶಸ್ವಿಯಾಗಿ ಕಾರ್ಯನಿರ್ವಹಿಸುದರ ಮೂಲಕ ದೇಶದಲ್ಲಿಯೇ ಉತ್ತಮ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಸಹಕಾರಿ ಗ್ರಾಮೀಣ ವಿದ್ಯುತ್ ಸಂಸ್ಥೆಯ ಉಪಶಾಖೆಯು ಸಂಕೇಶ್ವರದಲ್ಲಿ ಸ್ಥಾಪನೆಗೊಂಡಿತು. ಇದರಿಂದ ಪಟ್ಟಣದ ಸುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜುಗೊಳಿಸುವ ಸೌಲಭ್ಯವನ್ನು ಪಡೆಯಿತು. ಹೀಗೆ ಸಹಕಾರಿ ಕ್ಷೇತ್ರವು ಒಂದಿಲ್ಲ ಒಂದು ಕಾರ್ಯವನ್ನು ಕೈಗೊಂಡು ಉತ್ತಮ ಸಂಸ್ಥೆಯಾಗಿ ಬೆಳೆದಿರುವದು ಈ ಭಾಗದ ಸ್ಮರಣೀಯವಾಗಿದೆ.

ಕಾರ್ಮಿಕರ ಸಂಸ್ಥೆ : ಕಾರಖಾನೆ ಮತ್ತು ಮಾರುಕಟ್ಟೆ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರ ಹಿತರಕ್ಷಣೆ, ಪೋಷಣೆಗಾಗಿ ಈ ಸಂಸ್ಥೆಯು ಸಂಕೇಶ್ವರದಲ್ಲಿ ಸ್ಥಾಪನೆಗೊಂಡಿತು. ಇದು ಕಾರ್ಮಿಕರ ದುಡಿಯುವ ಅವಧಿ, ಸಂಬಳ, ಸೌಲಭ್ಯ ಹಾಗೂ ಕಲ್ಯಾಣ ಯೋಜನೆಗಳನ್ನೊಳಗೊಂಡು ಉತ್ತಮ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವದು. ಪ್ರಸ್ತುತವಾಗಿ ಈ ಸಂಸ್ಥೆಯು ಹಿರಣ್ಯಕೇಶಿ ಕಾರ್ಮಿಕರ ಸಂಸ್ಥೆ ಎಂಬುದಾಗಿ ನಾಮಕರಣಗೊಂಡಿರುವದು.

ಧಾರ್ಮಿಕ ಸ್ಥಿತಿ : ಭಾರತವು ಪ್ರಾಚೀನ ಕಾಲದಿಂದಲೂ ಹಲವಾರು ಧರ್ಮಗಳನ್ನು ಪೋಷಿಸಿ ಬೆಳೆಸಿಕೊಂಡು ಬಂದಿವೆ. ಈ ಮಾತು ಸಮಗ್ರ ಭಾರತದಂತೆ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಕರ್ನಾಟಕದ ಇತಿಹಾಸದೊಂದಿಗೆ "ಚತುಸ್ಸಮಯ" ವರ್ಗಗಳಾದ ಬೌದ್ಧ, ಜೈನ, ಹಿಂದೂ, ಮುಸ್ಲಿಂ ಧರ್ಮಗಳು ಬೆಳೆದುಕೊಂಡಿ ಬಂದಿವೆ. ಇದನ್ನು ಪ್ರಾಚೀನ ಮತ್ತು ಮಧ್ಯಕಾಲೀನ ಸಂಕೇಶ್ವರದಲ್ಲಿ ಕಾಣುವುದಾಗಿದೆ. ಇಲ್ಲಿನ ಹಲವು ಶಾಸನಗಳು ದೇವಸ್ಥಾನಗಳ ನಿರ್ಮಾಣ, ಅವುಗಳ ಜೀರ್ಣೋದ್ಧಾರ, ನೈವೇದ್ಯ ಸ್ಥಾನಾದಿಪತಿಗಳಿಗೆ, ಧಾರ್ಮಿಕಗುರುಗಳಿಗೆ ಹಾಗೂ ವಿದ್ಯಾದಾನಕ್ಕೆ ದತ್ತಿಯನ್ನು ನೀಡಿದ ವಿಷಯವನ್ನು ತಿಳಿಸುತ್ತವೆ. ಈ ನಿಟ್ಟಿನಲ್ಲಿ ಸಂಕೇಶ್ವರವು ಹಲವಾರು ಧರ್ಮಗಳ ನೆಲೆಯಾಗಿತ್ತು ಎಂಬುದು ಶಾಸನಾಧಾರಗಳಿಂದ ಮತ್ತು ವಾಸ್ತುಶಿಲ್ಪದಿಂದ ತಿಳಿದುಬರುತ್ತದೆ.

ಭಾರತೀಯರ ಜನಜೀವನದಲ್ಲಿ ಎದ್ದು ಕಾಣುವ ಸರ್ವಧರ್ಮದ ಸಮನ್ವಯತಾ ನೀತಿಯು ಸಂಕೇಶ್ವರಕ್ಕೆ ಹೊರತಾಗಿರಲಿಲ್ಲ. ಪ್ರಾಚೀನಕಾಲದಿಂದಲೂ ಎಲ್ಲ ಧರ್ಮ, ಮತ, ಪಂಥ, ಪಂಗಡಗಳು ಕೂಡಿಯೇ ಬಂದಿರುವದು

ಕಂಡುಬರುತ್ತದೆ. ಈ ಪಟ್ಟಣದಲ್ಲಿ ಧಾರ್ಮಿಕವಾಗಿ ರಚನೆಗೊಂಡಿರುವ ಪ್ರಾಚೀನ ದೇವಾಲಯಗಳು ಸರ್ವಧರ್ಮಸಹಿಷ್ಣುತೆಯ ಕುರುಹುಗಳಾಗಿ ನಿಂತಿವೆ. ಸನಾತನ ವೈದಿಕ ಪರಂಪರೆಯ ಹಿಂದೂ ಧರ್ಮವು ತನ್ನ ವೈಶಿಷ್ಟ್ಯವನ್ನು ಪಡೆದಿದೆ. ಈ ಧರ್ಮವು ಅಂದಿನ ಪರಂಪರೆಯನ್ನು ಒಳಗೊಂಡು ಜನರ ಸಂಸ್ಕೃತಿಗೆ ಪ್ರೇರಣೆಯಾಗಿದೆ.

ಶೃಂಗೇರಿ ಪೀಠದ ಪರಂಪರೆಯ ಶ್ರೀ ವಿದ್ಯಾಶಂಕರ ಭಾರತಿಯವರ ಕಾಶಿಯಾತ್ರೆಗಾಗಿ ತಮ್ಮ ಶಿಷ್ಯರೊಂದಿಗೆ ಹೊರಟರು. ಈ ವೇಳೆಯಲ್ಲಿ ಬದರಿ ಆಶ್ರಮಕ್ಕೆ ಆಗಮಿಸಿ, ಅಲ್ಲಿನ ಗುರುಗಳಾದ ಶ್ರೀ ಗೋವಿಂದಭಗವತ್ಪಾದಾಚಾರ್ಯರ ಗುಹೆಯನ್ನು ನೋಡಲು ಹೋದರು. ಅಲ್ಲಿಯೇ ಕೆಲವು ದಿನಗಳವರೆಗೆ ಇದ್ದು, ಸಕಲ ಜ್ಞಾನಾರ್ಜನೆಯನ್ನು ಪಡೆದು ಹಿಂತಿರುಗಿದರು. ಈ ಮಾರ್ಗದ ಮಧ್ಯದಲ್ಲಿ ಕೂಡಲಗಿ (ತುಂಗಾ, ಭದ್ರಾ ನದಿಗಳ ಸಂಗಮ ಸ್ಥಳ) ಯಲ್ಲಿಯೇ ಒಂದು ಪೀಠವನ್ನು ಸ್ಥಾಪಿಸಿದರು. ಮತ್ತೆ ಕಾಶಿಯಾತ್ರೆಯನ್ನು ಜೆಳಿಸಿ ಮಧ್ಯದಲ್ಲಿ ವಲ್ಲಭಗಡದೊಳಗೆ (ಈಗಿನ ಹರಗಾಪುರ) ನೆಲೆಸಿದರು. ಅಲ್ಲಿಯ ಹರಿದ್ರಾದೇವತೆಯ ಅನುಗ್ರಹ ಪಡೆದು ನೆಲೆಸಿದರು. ಆ ದೇವತೆಯ ಇಚ್ಛೆಯ ಮೆರೆಗೆ ಶ್ರೀ ಶಂಕರಲಿಂಗನ ಪೂಜೆಯಲ್ಲಿ ತೊಡಗಿದರು. ಆಗ ಅಲ್ಲಿಯೇ ಮಠವನ್ನು ಸ್ಥಾಪಿಸಿ ಶೃಂಗೇರಿ ಮಠದ ಪೀಠಪರಂಪರೆಯನ್ನು ಮುಂದುವರೆಸಿದರು. ಅದುವೇ ಇವತ್ತಿನ ಶಂಕರಾಚಾರ್ಯರ ಮಠವಾಗಿ ಪ್ರಸಿದ್ಧಗೊಂಡಿರುವುದು[೭].

ಶೈವಧರ್ಮ : ಭಾರತದ ಪ್ರಾಚೀನ ಧರ್ಮಗಳಲ್ಲಿ ಶೈವ ಧರ್ಮವು ಒಂದಾಗಿತ್ತು. ವೇದಪೂರ್ವ ಕಾಲದ ಹರಪ್ಪಾ ಮೊಹಂಜೊದಾರೋ ಸಂಸ್ಕೃತಿಯಷ್ಟು ಪ್ರಾಚೀನವುಳ್ಳ ಧರ್ಮವನ್ನು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮವೆಂದು ಕರೆದಿದ್ದಾರೆ. ಶೈವ ಧರ್ಮಕ್ಕೆ ಪಾಶುಪಥ ಧರ್ಮವೆಂದು ಸಹ ಕರೆಯಲಾಗಿದೆ. ಇದರ ಉಲ್ಲೇಖ ಮಹಾಭಾರತದಷ್ಟು ಪ್ರಾಚೀನವಾದುದಾಗಿದೆ[೮].

ಶೈವ ಧರ್ಮಕ್ಕೆ ಲಾಕುಳ ಎಂಬ ಮತ್ತೊಂದು ಹೆಸರು ಇದೆ. ಈ ಹೆಸರು ಬಹುಶಃ ಪ್ರಾಚೀನವಾದುದ್ದು. ಇದು ಲಾಕುಳಿಶ ಎಂಬ ಒಬ್ಬ ಮಾನವ ವ್ಯಕ್ತಿಯನ್ನು ಸೂಚಿಸುವುದರಿಂದ ಇವರ ಸ್ಥಾನದಲ್ಲಿ ಪಶುಪತ ಎಂಬ ಭಗವಂತನು ಹೆಸರನ್ನಿಟ್ಟು ಪಾಶುಪತ ಸಮಯ ಎಂದು ಮುಂದಿನವರು ಮಾಡಿಕೊಂಡಿರಬೇಕೆಂದು ಡಾ. ಬಂಡಾರ್ಕರ ಅವರು ಹೇಳುತ್ತಾರೆ. ನಂತರದಲ್ಲಿ ಅವರು ಲಾಕುಳ ಅಥವಾ ಪಾಶುಪಥರಿಗೆ ಕಾಳಾಮುಖವೆಂದು ಹೆಸರಿದ್ದು ಕಾಳಾಮುಖರು ಮತ್ತು ಕಾಪಾಲಿಕರು ಒಂದೇ ಎಂದು ಹೇಳಿದ್ದಾರೆ[೯].

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ಒಂದಾದ ಈ ಧರ್ಮವು ಸಂಕೇಶ್ವರ ಹಾಗೂ ಸುತ್ತಲಿನ ಪರಿಸರದಲ್ಲಿ ವ್ಯಾಪಕವಾಗಿ ಹರಡಿದ್ದು ಅಂದಿನ ರಾಜ ಮಹಾರಾಜರನ್ನು, ಮಾಂಡಳಿಕರನ್ನು ಮತ್ತು ಸಾಮಂತರನ್ನು ಆಕರ್ಷಿಸಿತು. ಸಂಕೇಶ್ವರದಿಂದ ಸುಮಾರು ೨೦ ಕಿ.ಮೀ. ಅಂತರದಲ್ಲಿ (ಪೂರ್ವಕ್ಕೆ) ಅರ್ಜುನವಾಡ ಇರುತ್ತದೆ. ಇಲ್ಲಿನ ಅಡವಿಯಲ್ಲಿ ಶ್ರೀಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯದಲ್ಲಿ ಬಸವಣ್ಣನವರ ವಂಶಜರಾದ ಹಾಲಬಸವೀಶನು ವೀರಸಪ್ರದಾಯದ ವ್ಯಕ್ತಿಯಾಗಿದ್ದನು. ಈತನ ಪ್ರಭಾವವು ಸಂಕೇಶ್ವರದ ಮೇಲೆ ಬೀರಿರುವದು ಅಂದಿನಿಂದಲೇ ಶೈವಧರ್ಮ ಇಲ್ಲಿ ನೆಲೆಯೂರಿತ್ತೆಂದು ತಿಳಿದುಬರುತ್ತದೆ.

ವೈಷ್ಣವಧರ್ಮ : ವೇದೋಪನಿಷತಗಳಲ್ಲಿ ತನ್ನ ಬೇರುಗಳನ್ನು ಹೊಂದಿದ ವೈಷ್ಣವ ಧರ್ಮವು ಕರ್ನಾಟದ ಪ್ರಮುಖ ಧರ್ಮಗಳಲ್ಲಿ ಒಂದಾಗಿತ್ತು. ರಾಮಾನುಜ ಮತ್ತು ಮಧ್ವಾಚಾರ್ಯರ ಉದಯದಿಂದಾಗಿ ಈ ಧರ್ಮವು ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಬಾದಾಮಿ ಚಾಳುಕ್ಯರ ಮಂಗಳೇಶನು ವೈಷ್ಣವ ಗುಹಾಲಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಇದರಿಂದ ಕ್ರಿ.ಶ. ೫ ನೇ ಶತಮಾನದಿಂದಲೇ ಈ ಧರ್ಮವು ಕರ್ನಾಟಕದಲ್ಲಿ ಜನಪ್ರೀಯವಾಗಿ ಬೆಳೆದು ಬಂದಿರುವುದು ತಿಳಿದುಬರುತ್ತದೆ.

ವಿಷ್ಣುವಿನ ಆರಾಧಕರು ವೈಷ್ಣವರು ಇವರ ಧರ್ಮವೇ ವೈಷ್ಣವ ಧರ್ಮ. ಆದರೆ ಅದು ವೈದಿಕ ಧರ್ಮವೂ ಹೌದು. ಇದು ತನ್ನ ಬೆಳವಣಿಗೆಯ ಕಾಲಘಟ್ಟಗಳಲ್ಲಿ ಭಾಗವತ ಪಂಥ, ವೈಷ್ಣವ ಪಂಥ, ದ್ವೈತ ಪಂಥಗಳಾಗಿ ವಿಂಗಡನೆಗೊಂಡಿರುವುದು ಕಂಡುಬರುತ್ತದೆ.

ರಟ್ಟರ ಆಳ್ವಿಕೆಯಲ್ಲಿ ಚಾವುಂಡರಾಯ ಎಂಬುವನು ಮಂತ್ರಿಯಾಗಿದ್ದನು. ಈತನು ವರ್ಣಾಶ್ರಮವನ್ನು ಅನುಸರಿಸಿಕೊಂಡು ಬಂದಿದ್ದನು. ಒಂದೊಂದು ವರ್ಣದವರಿಗೆ ಒಂದೊಂದು ಓಣಿಯನ್ನು ನಿರ್ಮಿಸಿದ್ದನಂತೆ. ಅಲ್ಲದೇ ಬ್ರಾಹ್ಮಣರಿಗೆ ಭೂದಾನವನ್ನು ನೀಡಿದನು ಎಂಬುದಾಗಿ ತಿಳಿಯುತ್ತದೆ. 'ಕುಲಹೀನಸ್ಯ ಕರ್ಮಹೀನಸ್ಯನ ಪೂಜೆಯಂತೆ' ಎಂಬುದಾಗಿ ಲಕ್ಷ್ಮೀನಾರಾಯಣ ದೇವಾಲಯದ ಶಾಸನದಲ್ಲಿ ಕಂಡು ಬರುತ್ತದೆ[೧೦].

ವೈಷ್ಣವ ಧರ್ಮದ ಪ್ರತಿಪಾದಕರಾದ ಮಹಾಜನಗಳು ಅಂದಿನ ಸಮಾಜದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದರು. ಇವರ ಉಪಜೀನವಕ್ಕಾಗಿ ರಾಜರು, ಮಂಡಲೇಶ್ವರರು, ಅಧಿಕಾರಿಗಳು, ಗ್ರಾಮಗಳನ್ನು ದತ್ತಿ ಬಿಟ್ಟು ಅವುಗಳ ಧಾರ್ಮಿಕ ರಾಜಕೀಯ ಆಡಳಿತವನ್ನು ವಹಿಸಿಕೊಡುತ್ತಿದ್ದರು. ಅವು ಅಗ್ರಹಾರಗಳೆನಿಸಿದವು. ಬ್ರಹ್ಮಪುರಿ,

ಘಟಿಕಸ್ಥಾನ, ಅವರ ವಾಸಸ್ಥಳ ಹಾಗೂ ಧಾರ್ಮಿಕ ಕೇಂದ್ರಗಳಾಗಿದ್ದವು. ಸಂಕೇಶ್ವರದಲ್ಲಿನ ಶಂಕರಲಿಂಗ ದೇವಾಲಯವು ಘಟಿಕಸ್ಥಾನವಾಗಿತ್ತೆಂದು ತಿಳಿದುಬರುತ್ತದೆ. ಈ ಧರ್ಮವು ಸಂಕೇಶ್ವರದಲ್ಲಿ ಪ್ರಚಾರವಾಗಿ ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಂಡಿತು. ಸಂಕೇಶ್ವರದಲ್ಲಿನ ಲಕ್ಷ್ಮೀನಾರಾಯಣ ದೇವಾಲಯವು ಈ ಧರ್ಮದ ನಿದರ್ಶನವಾಗಿದೆ.

ಜೈನ ಧರ್ಮ : ಕ್ರಿ.ಪೂ. ೩ ನೇ ಶತಮಾನದಲ್ಲಿ ಅಂದರೆ ಮೌರ್ಯರ ಕಾಲದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ ಜೈನ ಧರ್ಮವು ಕ್ರಿ.ಶ. ೧೨ ನೇ ಶತಮಾನದವರೆಗೂ ತನ್ನ ಪ್ರಾಬಲ್ಯವನ್ನು ಮೆರೆದಿತ್ತು.

ಗಂಗ ಮತ್ತು ಹೊಯ್ಸಳರ ವಿಶೇಷ ಪ್ರೋತ್ಸಾಹಕ್ಕೆ ಪಾತ್ರವಾದ ಈ ಧರ್ಮವು ಕದಂಬ, ಚಾಳುಕ್ಯ, ರಾಷ್ಟ್ರಕೂಟ, ಹಾಗೂ ಮಾಂಡಳಿಕರಾದ ರಟ್ಟರ ಸಹಾಯದಿಂದ ಈ ಭಾಗದಲ್ಲಿ ಪೋಷಿಸಲ್ಪಟ್ಟಿತು. ಹೀಗೆ ಪ್ರವರ್ಧಮಾನಕ್ಕೆ ಬಂದ ಈ ಧರ್ಮವನ್ನು ಕೆಲವು ಮಾಂಡಳಿಕರು, ಸಾಮಂತರು, ಹಾಗೂ ಜನಸಾಮಾನ್ಯರು ಪ್ರೊತ್ಸಾಹಿಸಿ ಅದನ್ನು ಒಪ್ಪಿಕೊಂಡರು ಎಂದು ಹೇಳಲಾಗಿದೆ.

ಪ್ರಾಚೀನತೆಯಿಂದ ಜೈನಧರ್ಮವು ತನ್ನ ಪ್ರಭಾವನ್ನು ಅನೇಕ ನೆಲೆಗಳಲ್ಲಿ ಬೀರಿರುವದು. ಈ ಧರ್ಮದ ಪ್ರಭಾವವು ಸಂಕೇಶ್ವರದಲ್ಲಿ ಆಗಿರುವುದು ಕಂಡುಬರುತ್ತದೆ. ಕಲ್ಯಾಣಚಾಳುಕ್ಯರ ಆಳ್ವಿಕೆಯಲ್ಲಿ ಈ ಧರ್ಮವು ಪ್ರಚಾರಗೊಂಡಿತು. ಸಂಕೇಶ್ವರದಲ್ಲಿ ಪಾರ್ಶ್ವನಾಥನ ಬಸದಿಯು ನಿದರ್ಶನವಾಗಿರುವದು. ಅಮ್ಮಣಗಿ ಮತ್ತು ಬೆಣಿವಾಡದಲ್ಲಿನ ಪಾರ್ಶ್ವನಾಥನ ಬಸದಿಗಳು ರಟ್ಟರ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುತ್ತವೆ. ಈ ಧರ್ಮವು ಈ ಭಾಗದ ಸುತ್ತಲೂ ಬೆಳೆದು ತನ್ನ ಬಸದಿಗಳನ್ನು ನಿರ್ಮಿಸಿರುವದನ್ನು ಕಾಣಬಹುದಾಗಿದೆ. ಸಂಕೇಶ್ವರದಿಂದ ನಿಪ್ಪಾಣಿಗೆ ಹೋಗುವ ಮಾರ್ಗದ ಮಧ್ಯದಲ್ಲಿ ಸ್ತವನಿಧಿಯು ಜೈನರ ನೆಲೆಯಾಗಿತ್ತೆಂದು ಕಂಡುಬರುತ್ತದೆ.

ಇಸ್ಲಾಂ ಧರ್ಮ : ದೆಹಲಿ ಸುಲ್ತಾನರ ಆಳ್ವಿಕೆಯಿಂದ ಬಿಜಾಪುರದ ಆದಿಲಶಾಹಿಗಳ ಆಳ್ವಿಕೆಯವರೆಗೆಗೂ ಬೆಳೆದುಬಂದಿರುವದು ತಿಳಿಯುತ್ತದೆ. ೧೬-೧೭ ನೇ ಶತಮಾನದಲ್ಲಿ ಮಹಮ್ಮದಿಯರ ಪ್ರಭಾವವು ಸಂಕೇಶ್ವರದ ಮೇಲೆ ಪ್ರಭಾವ ಬೀರಿತು. ಬಹಮನಿ ಸುಲ್ತಾನರು ಮತ್ತು ಬಿಜಾಪೂರದ ಆದಿಲಶಾಹಿಗಳು ಈ ಭಾಗದಲ್ಲಿ ಆಳ್ವಿಕೆ ನಡೆಸಿ ಮಸೀದಿಗಳನ್ನು ನಿರ್ಮಿಸಿರುವರು. ರಣದುಲ್ಲಾಖಾನನು ವಲ್ಲಭಗಡದಲ್ಲಿರುವ (ಹರಗಾಪೂರ) ದೇವಗೋಸಾವಿಯವರ ಮಹಿಮೆಯನ್ನು ಕೇಳಿ ಅವರ ದರ್ಶನ

ಪಡೆದು ಶ್ರೀ ಶಂಕರಲಿಂಗ ಮಠಕ್ಕೆ ಕೆಲವು ಹಳ್ಳಿಗಳನ್ನು ದಾನವಾಗಿ ನೀಡಿದನು. ಇದು ತಾಮ್ರಪಟದ ಉಲ್ಲೇಖದಲ್ಲಿ ಕಂಡು ಬರುತ್ತದೆ[11].

ಸಾಂಸ್ಕೃತಿಕ ಕೊಡುಗೆಗಳು :

ಶಿಕ್ಷಣ : ನಮ್ಮ ನಾಡಿನ ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ರೂಪಿಸಿದ ಸಾಧನೆಗಳಲ್ಲಿ ಶೈಕ್ಷಣವು ಒಂದಾಗಿದೆ. ಎಲ್ಲಾ ದಾನಗಳಿಗಿಂತ ವಿದ್ಯಾದಾನವೇ ಮಿಗಿಲಾದುದೆಂಬ ನಂಬಿಕೆ ನಮ್ಮ ಪೂರ್ವಜರಲ್ಲಿತ್ತು.

ವೇದಗಳ ಕಾಲದಲ್ಲಿ ವೇದ ಮಂತ್ರಗಳನ್ನು ಬಾಯಿಪಾಠ ಮಾಡುತ್ತಿದ್ದರು. ಋಗ್ವೇದ ಕಾಲಕ್ಕೆ ಅದನ್ನು ಬಾಯಿಂದ ಬಾಯಿಗೆ ಕಲಿಯುತ್ತ ಬಂದ ರಿತಿಯೇ ನಮ್ಮ ವಿದ್ಯಾಭ್ಯಾಸದ ಮೊದಲ ಘಟ್ಟ ಎನ್ನಬಹುದು. ವೇದಗಳ ಕಾಲದಲ್ಲಿ ವಿದ್ಯೆ ಪಡೆಯುವ ಹಕ್ಕು ಇತ್ತು. ಆದರೆ ಚತುರ್ವರ್ಣಗಳು ತದನಂತರದಲ್ಲಿ ಸಮಾಜವನ್ನು ವಿಭಜಿಸಿದವು. ವಿದ್ಯಾಭ್ಯಾಸ ಮತ್ತು ಧರ್ಮ ಮುಖ್ಯವಾಗಿ ಬ್ರಾಹ್ಮಣರ ಸೊತ್ತಾಗಿತ್ತು.

ಮಠಗಳು : ಮಠಗಳು ಸಾಮಾನ್ಯವಾಗಿ ದೇವಾಲಯಗಳಿಗೆ ಹೊಂದಿಕೊಂಡು ಇರುತ್ತಿದ್ದವು. ಪ್ರಾಚೀನ ಕಾಲದಲ್ಲಿ ಕಾಳಾಮುಖಶೈವ ಮಠಗಳು ಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದವು. ಶಂಕರಲಿಂಗ ಮಠವು ಇದಕ್ಕೆ ಹೊರತಾಗಿಲ್ಲ.

ಘಟಿಕಾಸ್ಥಾನ : ಪ್ರೌಢ ಶಿಕ್ಷಣ ಕೇಂದ್ರಗಳಲ್ಲಿ ಘಟಿಕಾಸ್ಥಾನಗಳು ಪ್ರಮುಖವಾಗಿವೆ. 'ಘಟಿಕ' ಎನ್ನುವದು ವಿದ್ಯೆಯ ಮತ್ತು ಧರ್ಮದ ಕೇಂದ್ರವಾಗಿತ್ತು. ಇವುಗಳು ಈಗಿನ ಕಾಲೇಜುಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಘಟಿಕಗಳಲ್ಲಿ ಪಂಡಿತರು, ಗ್ರಂಥಪಾಲಕರು, (ಸಂಸ್ಕೃತಿ ಭಂಡಾರಕರು) ಘಟಿಕ ಪ್ರಹಾರಿಗಳು (ಕೆಲಸಗಾರರು ಬರುಹೋಗುವ ವೇಳೆಯ ಲೆಕ್ಕ ಇಡುವರು) ಮತ್ತು ಅನೇಕ ವಿದ್ಯಾರ್ಥಿಗಳು ಇರುತ್ತಿದ್ದರು. ಇದೊಂದು ಧಾರ್ಮಿಕ ಕೇಂದ್ರ, ಇದೊಂದು ಉಚ್ಚ ಅಥವಾ ಉನ್ನತ ಶಿಕ್ಷಣ ಕೇಂದ್ರ ಮತ್ತು ವಿದ್ಯಾವಂತ ಹಾಗೂ ಧನವಂತರು ಒಂದು ಕಡೆ ಕುಳಿತು ಚರ್ಚಿಸುವ ಸ್ಥಳವಾಗಿತ್ತು. ವೇದ, ಧರ್ಮಶಾಸ್ತ್ರ, ವ್ಯಾಕರಣ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತು.

ಅಗ್ರಹಾರ : ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಿಕ್ಷಣ ಪ್ರಸಾರ ಕಾರ್ಯಗಳಲ್ಲಿ ಅಗ್ರಹಾರಗಳು ತಮ್ಮದೇ ಆದ ಸ್ಥಾನವನ್ನು ಹೊಂದಿದ್ದವು. ಸಾಮಾನ್ಯವಾಗಿ ಇಲ್ಲಿಯು ಕೂಡಾ ಉಚ್ಚ ಶಿಕ್ಷಣವನ್ನು ಬೋಧಿಸಲಾಗುತ್ತಿತ್ತು. ಈ

ಅಗ್ರಹಾರಗಳು ಕೇವಲ ಶಿಕ್ಷಣ ರಂಗದಲ್ಲಿ ಮಾತ್ರವಲ್ಲದೇ ಸಾಮಾಜಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದನ್ನು ಕಾಣಬಹುದು.

ಒಂದು ಹಳ್ಳಿಯನ್ನು ವೇದ ಶಾಸ್ತ್ರಗಳಲ್ಲಿ ಪಾರಂಗತರಾದ ಬ್ರಾಹ್ಮಣ ಮಹಾಜನರು ಜೀವನ ಸಾಗಿಸಲು ಮತ್ತು ಅಧ್ಯಯನ ಕೈಗೊಳ್ಳಲು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದತ್ತಿ ಬಿಡುತ್ತಿದ್ದರು. ಒಂದು ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುವಲ್ಲಿ ರಾಜ ಮಹಾರಾಜರಿಗೆ ಹಲವಾರು ಉದ್ದೇಶಗಳಿದ್ದವು. ಹೀಗೆ ಮಾಡುವದರಿಂದ ಪುಣ್ಯ ಲಭಿಸುತ್ತದೆ. ಎಂಬುದು ಒಂದಾದರೆ ವಿದ್ವಾಂಸರಾದ ಬ್ರಾಹ್ಮಣರನ್ನು ಒಂದಡೆ ನೆಲೆಗೊಳಿಸುವುದರಿಂದ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡಿದಂತಾಗುತ್ತದೆ ಎಂಬುದು ಮತ್ತೊಂದು ಉದ್ದೇಶವಾಗಿದೆ.

ಸಂಕೇಶ್ವರವು ಪ್ರಾಚೀನ ಕಾಲದಿಂದಲೂ ಶೈಕ್ಷಣಿಕವಾಗಿ ಬೆಳೆದು ಬಂದಿರುವುದು ತಿಳಿಯುತ್ತದೆ. ಕಲ್ಯಾಣ ಚಾಳುಕ್ಯರ ಮಾಂಡಲಿಕರಾದ ಸವದತ್ತಿ ರಟ್ಟರ ಆಳ್ವಿಕೆಯಲ್ಲಿ ಈ ಭಾಗದೊಳಗೆ ಶಿಕ್ಷಣ ಪ್ರಸಾರ ಆರಂಭವಾಗಿತ್ತು. ಅಂದಿನ ಶಿಕ್ಷಣ ಪದ್ದತಿಯು ಅಗ್ರಹಾರ, ಮಠಗಳು, ಘಟಕಸ್ಥಾನ. ಮತ್ತು ದೇವಾಲಯಗಳಲ್ಲಿ ನಡೆಯುತಿತ್ತು ಎಂಬುವುದಾಗಿ ತಿಳಿಯುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಈ ಭಾಗದೊಳಗೆ ಶಿಕ್ಷಣ ರಂಗಕ್ಕೆ ಎಂ. ಪಿ. ಪಾಟೀಲ ಹಾಗೂ ಅಪ್ಪಣ್ಣಗೌಡ ಪಾಟೀಲರು ತುಂಬಾ ಶ್ರಮಿಸಿರುವರು. ಇವರು ಪ್ರಾಥಮಿಕ ಶಾಲೆಯ ಕಟ್ಟಡದ ನಿರ್ಮಾಣಕ್ಕಾಗಿ ಅನೇಕರಿಂದ ಹಣವನ್ನು ದಾನ ಅಥವಾ ಕಾಣಿಕೆಯ ರೂಪದಲ್ಲಿ ಪಡೆದಿರುವರು. ಇವರೀರ್ವರ ಸತತ ಪರಿಶ್ರಮದ ಫಲವಾಗಿ ಸಂಕೇಶ್ವರದಲ್ಲಿ ಶ್ರೀ ದುರದುಂಡೀಶ್ವರ ವಿದ್ಯಾ ಸಂವರ್ಧಕ ಸಂಸ್ಥೆಯು ಹುಟ್ಟಿಕೊಂಡಿತು. ಆರಂಭದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಶಾಲೆಗಳು ಸ್ಥಾಪನೆಗೊಂಡು ಕನ್ನಡ ಹಾಗೂ ಆಂಗ್ಲ ಭಾಷೆಯ ಬೋಧನೆಯನ್ನು ನೀಡುವ ಕೇಂದ್ರಗಳಾದವು.

ಸ್ವಾತಂತ್ರ್ಯ ನಂತರದಲ್ಲಿ ಶಿಕ್ಷಣ ರಂಗವು ಈ ಭಾಗದೊಳಗೆ ತೀವ್ರಗತಿಯಾಗಿ ಬೆಳೆಯಿತು. ಕನ್ನಡ, ಮರಾಠಿ, ಆಂಗ್ಲ, ಉರ್ದು, ಭಾಷೆಯ ಶಾಲೆಗಳು ಆರಂಭಗೊಂಡು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯನ್ನು ಒದಗಿಸಲಾಗುತ್ತಿದೆ.

ಎಂ. ಪಿ. ಪಾಟೀಲರು ಈ ಭಾಗದ ಎಲ್ಲರಿಗೂ ಶಿಕ್ಷಣ ನೀಡುವ ಉದ್ದೇಶವನ್ನು ಹೊಂದಿದ್ದರು. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿ ಶಾಲೆಯನ್ನು ನಿರ್ಮಿಸಿ, ಶಿಕ್ಷಕರನ್ನು ನೇಮಿಸಿದರು. ಯಾರು ತಮ್ಮ ಹಳ್ಳಿಗೆ ಶಾಲೆ ಬೇಕೆಂದು ಬಯಸುತ್ತಾರೋ ಅವರಿಂದ ೨೫ ಪೈಸೆಯನ್ನು ಪಡೆದು ಆ ಹಳ್ಳಿಗೆ ಶಾಲೆಯನ್ನು

ಸ್ಥಾಪಿಸಿದರು. ಇದೇ ವೇಳೆಯಲ್ಲಿ ನಮ್ಮೂರೊಳಗೆ ಒಂದು ಶಾಲೆ ಸ್ಥಾಪನೆಗೊಂಡಿತು ಎಂಬುದಾಗಿ ಸ್ವಾತಂತ್ರ್ಯ ಯೋಧರಾದ ಶಿವಪ್ಪಣ್ಣಾ ಗುಂಡಾಳಿಯವರು ತಿಳಿಸಿರುವರು.

ಸಂಕೇಶ್ವರದಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದಕ್ಕಾಗಿ ಅಪ್ಪಣ್ಣಗೌಡರು ಸುತ್ತಲಿನ ಹಳ್ಳಿಗಳಿಗೆ ತೆರಳಿ ಹಣ ಸಂಗ್ರಹಿಸಿದರು. ಇವರು ಗುಜರಾತಕ್ಕೆ ತೆರಳಿದಾಗ, ಅಲ್ಲಿ ಇವರನ್ನು ಸ್ವಾಗತಿಸಿ ಚೆನ್ನಾಗಿ ಉಪಚಾರ ಮಾಡಿರುವುದು ತಿಳಿಯುತ್ತದೆ. ನಂತರ ಹಿಂತಿರುಗುವಾಗ 'ನಿಮಗೆ ನಾವು ಉಡುಗೋರೆ ಕೊಡಬೇಕೆಂದು ನಿರ್ಧರಿಸಿದ್ದೇವೆ. ನಿಮಗೇನು ಬೇಕು' ಎಂಬುದಾಗಿ ಅಲ್ಲಿನ ಜನರು ಪ್ರಶ್ನಿಸಿದರು. ಆಗ ಗೌಡರು ನಾನು ಒಂದು ಶಾಲಾ ಸಂಸ್ಥೆಯನ್ನು ಕಟ್ಟುತ್ತಿದ್ದೇನೆ ಅದಕ್ಕೆ ನೀವು ಪ್ರೀತಿಯಿಂದ ಏನೇ ಕೊಟ್ಟರು ನಾನು ಸ್ವೀಕರಿಸುತ್ತೇನೆ ಎಂಬುದಾಗಿ ಉಚ್ಚರಿಸಿದರು. ಆಗ ಅವರು ೫೦,೦೦೦ ರೂ.ಗಳ ಚೆಕ್ಕನ್ನು ನೀಡಿದರು ಎಂಬುದನ್ನು ಗೌಡರ ಸಹಚರರಾದ ಶಿವಪ್ಪಣ್ಣಾ ಗುಂಡಾಳಿಯವರು ತಿಳಿಸಿರುವರು.

ಸಂಕೇಶ್ವರದಲ್ಲಿನ ಶ್ರೀ ದುರದುಂಡೀಶ್ವರ ವಿದ್ಯಾ ಸಂವರ್ಧಕ ಸಂಸ್ಥೆಯು ಬೃಹದಾಕಾರವಾಗಿ ಬೆಳೆದು ನಿಂತಿರುವದು ಶ್ರೀ ಅಪ್ಪಣ್ಣಗೌಡರ ಪರಿಶ್ರಮದಿಂದ ಇವರ ಸಹವರ್ತಿಗಳಾದ ಶ್ರೀ ಜಿ. ಎ. ಪಾಟೀಲರು ನಿರಂತರ ಪರಿಶ್ರಮ ವಹಿಸಿರುವದು ಕಂಡುಬರುತ್ತದೆ. ಈ ಸಂಸ್ಥೆಯು ಸುತ್ತಲಿನ ಪರಿಸರದಲ್ಲಿ ಶೈಕ್ಷಣಿಕ ಶಾಲಾ ಕಾಲೇಜುಗಳನ್ನು ತೆರೆದಿರುವದು. ಹೆಬ್ಬಾಳ, ಕಣಗಲಾ ಹಾಗೂ ಯಾದಗೂಡದಲ್ಲಿ ಮಾಧ್ಯಮಿಕ ಶಾಲೆಗಳು ಪ್ರಾರಂಭಗೊಂಡವು. ಅನಂತರ ಸಂಕೇಶ್ವರದಲ್ಲಿ ಹೆಣ್ಣು ಮಕ್ಕಳಿಗಾಗಿ ಶ್ರೀ ಅಕ್ಕಮಹಾದೇವಿ ಕನ್ಯಾಶಾಲೆಯು ೧೯೫೫ ರಲ್ಲಿ ಸ್ಥಾಪನೆಗೊಂಡಿತು. ಇದೇ ಸಮಯದಲ್ಲಿ ಟಿ. ಪಿ. ವಿಜ್ಞಾನ ಮತ್ತು ಶ್ರೀ ಎಲ್. ಕೆ. ಖೊತ ವಾಣಿಜ್ಯ ಮಹಾವಿದ್ಯಾಲಯಗಳು ಸ್ಥಾಪನೆಗೊಂಡವು. ಅಂದಿನಿಂದ ಸಂಕೇಶ್ವರವು ಶೈಕ್ಷಣಿಕ ಕೇಂದ್ರವಾಯಿತು. ಪ್ರಸ್ತುತವಾಗಿ ೨೦ ಕ್ಕೂ ಹೆಚ್ಚಿನ ಶಾಲಾಕಾಲೇಜುಗಳನ್ನು ತೆರೆದು ಸುತ್ತಲಿನ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಧಾರೆಯರೆಯುತ್ತಿರುವದು ಇವತ್ತಿಗೂ ಕಂಡು ಬರುತ್ತದೆ.

ಪ್ರಸ್ತುತವಾಗಿ ಸಂಕೇಶ್ವರದಲ್ಲಿ ಆದ್ಯ ಶ್ರೀ ನಿಜಲಿಂಗೇಶ್ವರ ಶಿಕ್ಷಣ ಸಂಸ್ಥೆ, ಪಂಚಾಚಾರ್ಯ ಶಿಕ್ಷಣ ಸಂಸ್ಥೆ, ಮಗದುಮ್ಮ ಶಿಕ್ಷಣ ಸಂಸ್ಥೆ, ವಿವೇಕಾನಂದ ಶಿಕ್ಷಣ ಸಂಸ್ಥೆ, ನಾಗಪ್ಪಣ್ಣಾ ಕರಜಗಿ ಶಿಕ್ಷಣ ಸಂಸ್ಥೆ, ಹೀಗೆ ಮೊದಲಾದ ಶಿಕ್ಷಣ ಸಂಸ್ಥೆಗಳು ಕಾರ್ಯನಿರತವಾಗಿವೆ. ಈ ರೀತಿಯಾಗಿ ಶೈಕ್ಷಣಿಕ ಕ್ಷೇತ್ರವು ಈ ಭಾಗದಲ್ಲಿ ಬೆಳೆದು ಜಿಲ್ಲೆಯಲ್ಲಿ ಗುರುತಿಸಿಕೊಂಡಿವೆ.

ಸಾಹಿತ್ಯ : ಸಾಹಿತ್ಯವು ಒಂದು ಪ್ರದೇಶದ ಚರಿತ್ರೆಯ ಮೇಲೆ ಬೆಳಕು ಬೀರುವದಾಗಿದೆ. ಅಂದಿನ ನೈಜ ಸ್ಥಿತಿಗತಿಯ ಕುರಿತು ಬರವಣಿಗೆಯ ರೂಪದಲ್ಲಿ ದೊರೆತಿರುವುದೆ

ಸಾಹಿತ್ಯವಾಗಿದೆ. ಸಾಹಿತ್ಯದ ಅಧ್ಯಯನ ಕೈಗೊಳ್ಳುವವರೆಗೆ ಕೈಪಿಡಿಯಾಗಿ ವಾಸ್ತವಿಕ ಅಂಶಗಳನ್ನು ವಿವರಿಸುವದಾಗಿದೆ. ಈ ಭಾಗದೊಳಗೆ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಸಾಹಿತಿಗಳು ಅನೇಕರಿದ್ದಾರೆ.

ಶ್ರೀ ಎಂ. ಅಕಬರಅಲಿ : ಇವರು ಸಂಕೇಶ್ವರ ಸಮೀಪದ ಉಳ್ಳಾಗಡ್ಡಿ-ಖಾನಾಪೂರದವರು. ಸ್ನಾತಕೋತ್ತರ ಪದವಿಧರರಾಗಿದ್ದು ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿ ಕಾಲೇಜಿನ ಉಪನ್ಯಾಸರಾಗಿ ನಿವೃತ್ತರಾಗಿರುವರು. ಇವರು ಕವಿಗಳಾಗಿ ಚುಟುಕಗಳ ಚಾಟಿಯೇಟಿನಲ್ಲಿ ನಿಷ್ಣಾತರಾಗಿದ್ದರು. ವಿಷಯಸಿಂಧು, ನವಚೇತನ, ಸುಮನಸೌರಭ, ಗಂಧಕೇಶರ ಇತ್ಯಾದಿಗಳು ಇವರ ಕೃತಿಗಳಾಗಿವೆ. ಈ ಕೃತಿಗಳಿಂದ ಕನ್ನಡದ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ.

ಶ್ರೀ ರಾ. ಕ. ನಾಯಿಕರು : ಇವರು ಈ ಭಾಗದಲ್ಲಿನ ಶ್ರೇಷ್ಠ ನಾಟಕಕಾರರು ಅನ್ಯಭಾಷೆಯ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಇವರದು ಅಪೂರ್ವ ಪ್ರತಿಭೆ. ಇವರ 'ಓಡಸ್ಸಿ' ನಾಟಕ ಕೃತಿಗೆ ರಾಜ್ಯಮಟ್ಟದ ಬಹುಮಾನ ದೊರೆತಿರುವುದು. ಇಂದಿಗೂ 'ರಂಗತೋರಣ'ದಂತ ಪತ್ರಿಕೆಗಳಲ್ಲಿ ಬೆಲೆಯುಳ್ಳ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ.

ಶ್ರೀ ಪಾಟೀಲ ಪರ್ವತರಾಜ : ಇವರು ಸಂಕೇಶ್ವರದ ಸಕ್ಕರೆ ಕಾರಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಕವನ ಬರೆಯುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 'ನೋವು-ನಲಿವು' ಎಂಬ ಕವನ ಸಂಕಲನವನ್ನು ಪ್ರಕಟಗೊಳಿಸಿರುವರು.

ಶ್ರೀ ಬಸ್ತವಾಡ ಎಂ. ಎಸ್. : ಇವರು ಸಂಕೇಶ್ವರ ಸಮೀಪದ ಕಮತನೂರಿನವರು ಹುಟ್ಟೂರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಸಂಕೇಶ್ವರದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಉನ್ನತ ಅಧ್ಯಯನಕ್ಕಾಗಿ ಕೊಲ್ಲಾಪುರಕ್ಕೆ ತೆರಳಿದರು. ಅಲ್ಲಿಯೇ ಸಾಹಿತ್ಯ ರಚನೆಯ ಒಲವನ್ನು ಬೆಳೆಸಿಕೊಂಡರು. 'ಇಲ್ಲಿದೆ ಸ್ವರ್ಗ', 'ನಿರಾಶ್ರಿತಲತೆ' ಪ್ರಕಟಗೊಂಡಿರುವ ಲೇಖನಗಳಾಗಿವೆ. ಹಿರಣ್ಯಕೇಶಿ ಸಕ್ಕರೆ ಕಾರಖಾನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಡಾ. ಡಿ. ವ್ಹಿ. ಪುರಾಣಿಕ : ಇವರು ಸಂಕೇಶ್ವರದ ಶ್ರೀ ಎಲ್. ಕೆ. ಖೋತ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವರು. ಇವರು ಕವನ ಕಥೆಗಳ ಸೃಜನಾತ್ಮಕ ಕೃತಿಗಳನ್ನು ರಚಿಸಿರುವರು. 'ಮೊಗ್ಗೆಯ ಮಾಯಿದೇವ' ಒಂದು ಅಧ್ಯಯನದ ಮಹಾಪ್ರಬಂಧವಾಗಿದೆ. ಅನೇಕ

ಮಠಮಾನ್ಯಗಳ ಚರಿತ್ರೆ ಹಾಗೂ ಶಿವಯೋಗಿಗಳ ಚರಿತ್ರೆಗಳನ್ನು ಬರೆದು ಹೆಸರು ಗಳಿಸಿರುವರು.

ಪ್ರೊ. ಎಚ್. ಎಸ್. ಭೀಮನಗೌಡರ : ಇವರು ಸಂಕೇಶ್ವರದ ಶ್ರೀ ಎಲ್. ಕೆ. ಖೋತ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಆಂಗ್ಲಭಾಷೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವರು. ಇವರು ಇವರು ನಾಲ್ಕು ಕವನ ಸಂಕಲನಗಳನ್ನು ಪ್ರಕಟಿಸಿರುವರು. 'ನೆಲ ಹಿಡಿಯುವ ಮೊದಲು' ಕೃತಿಗೆ ರಾಜ್ಯ ಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಲಭಿಸಿರುತ್ತದೆ'. ಇವರ ಕೆಲವು ಮೌಲಿಕ ವಿಮರ್ಶಾ ಬಿಡಿಲೇಖನಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರೊ. ಎಲ್. ವ್ಹಿ. ಪಾಟೀಲ : ಇವರು ಸಂಕೇಶ್ವರದ ಶ್ರೀ ಶಿವರುದ್ರೇಶ್ವರ ಕಲಾ ಹಾಗೂ ಟಿ. ಪಿ. ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವರು. ಇವರು ಒಂದು ಕವನ ಸಂಕಲನ ಮತ್ತು ವಿಮರ್ಶಾ ಸಂಶೋಧನೆಯ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. 'ಬೆಳ್ವಲ ನಾಡಿನ ಸಾಂಸ್ಕೃತಿಕ ಸಮೀಕ್ಷೆ' ಪ್ರೌಢ ಪ್ರಭಂದವಾಗಿ ಪ್ರಕಟವಾಗಿರುವುದು. ಹುಕ್ಕೇರಿ ತಾಲೂಕು ದರ್ಶನ ಇನ್ನೂ ಮುಂತಾದ ಬಿಡಿ ಲೇಖನಗಳು ಬೆಳಕು ಕಂಡಿರುತ್ತವೆ.

ಡಾ : ಜಿ. ಎಸ್. ಮರಿಗುದ್ದಿ : ಇವರು ಸಂಕೇಶ್ವರದ ಶ್ರೀ ಶಿವರುದ್ರೇಶ್ವರ ಕಲಾ ಹಾಗೂ ಟಿ. ಪಿ. ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವರು. ವಿಮರ್ಶೆ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿರುವರು. 'ಕುವೆಂಪು ಕಾದಂಬರಿಗಳ ಸಂಸ್ಕೃತಿಕ ಅಧ್ಯಯನ' ಮಹಾಪ್ರಬಂಧ. ಕವನ, ಜೀವನ ಚರಿತ್ರೆ, ವಿಮರ್ಶೆ ಕೃತಿಗಳನ್ನು ರಚಿಸಿರುವರು. ಬಸವೋತ್ತರ ಯುಗದ ವಚನ ಸಾಹಿತ್ಯ, ಕಣವಿ ಸಾಹಿತ್ಯ ಸಂಪದ, ಮೊದಲಾದ ಅನೇಕ ಕೃತಿಗಳನ್ನು ಸಂಪಾದಿಸಿರುವರು. ಮೈಸೂರಿನ ದೇಜಗೌ ಪ್ರತಿಷ್ಠಾನದ ವಿಶ್ವಮಾನವ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಪ್ರೊ. ಶ್ರೀಶೈಲ ಮಠಪತಿ : ಇವರು ಸಂಕೇಶ್ವರದ, ಶ್ರೀ ದು.ವಿ.ಸಂ. ಸಂಘದ ಕಲಾ, ವಿಜ್ಞನ ಮತ್ತು ವಾಣಿಜ್ಯ ಪದವಿ ಮತ್ತು ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೆವೆ ಸಲ್ಲಿಸ್ಮತ್ತಿರುವ್ಯರು. ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವರು. ಕನ್ನಡ ಪುಸ್ತಕ ಪ್ರಾಧಿಕಾರದ ಸಹಾಯ ಧನದಲ್ಲಿ ಬಂದು ಕವನ ಸಂಕಲನ ಪ್ರಕಟಕೊಂಡಿದೆ. ಜಾಗೃತಿ ಕೇಂದ್ರ ಚಿಂಚಣಿ ಮಠ ಎಂಬ ಪ್ರಬಂಧ ರಚಿಸಿ

ಎಂ.ಫಿಲ್. ಪದವಿ ಪಡೆದಿದ್ದಾರೆ. ಹಲವಾರು ಬಿಡಿ ಲೇಖನಗಳು ಮತ್ತು ಕವಿತೆಗಳು, ವಿವಿಧ ಪತ್ರಿಕೆ ಮತ್ತು ಪುಸ್ತಕಗಳಲ್ಲಿ ಪ್ರಕಟಗೊಂಡಿವೆ.

ಶ್ರೀಮತಿ. ಎಚ್.ಬಿ. ದೇಸಾಯಿ : ನಿವೃತ್ತ ಪ್ರೌಢಶಾಲಾ ಶಿಕ್ಷಕಿಯಾದ ಇವರು ವಚನಾಂಜಲಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ರಾಷ್ಟ್ರ ಮಟ್ಟದ ಆದರ್ಶ ಶಿಕ್ಷಕಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಶ್ರೀಮತಿ. ಪ್ರಭಾವತಿ ಬೋರಗಾಂವಕರ : ಇವರು ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿದ್ದು 'ನಿಡಸೋಶಿಯ ಶ್ರೀ ದುರದುಂಡೀಶ್ವರ ಸಿದ್ಧ ಸಂಸ್ಥಾನಮಠ' ಒಂದು ಅಧ್ಯಯನ ವಿಷಯದ ಕುರಿತು ಎಂ.ಫಿಲ್. ಪದವಿ ಪಡೆದಿದ್ದಾರೆ.

ಶ್ರೀ ಎಂ. ಪಿ. ಪಾಟೀಲ : ಶ್ರೀ ಎಂ. ಪಿ. ಪಾಟೀಲರು ಸಂಶೋಧನೆಯ ಕ್ಷೇತ್ರದಲ್ಲಿ ಸಾಧನೆಯ ಗೈದಿರುವ ಪ್ರಮುಖರಾಗಿರುವರು. ಇವರು ಅಪರೂಪದ ಸಂಶೋಧಕ ಮತ್ತು ಲೇಖಕರಾಗಿದ್ದರು. ವೀರಶೈವ ಧರ್ಮ, ಸಾಹಿತ್ಯ ಸಂಸ್ಕೃತಿಗಳ ತಲಸ್ಪರ್ಶಿ ಅಧ್ಯಯನ ಮಾಡಿರುವರು. ಶ್ರೀ ಬಸವೇಶ್ವರರ ಚರಿತ್ರೆಯ ಮೇಲೆ ಹೊಸ ಬೆಳಕು, ಲಾಕುಳ ಶೈವ ಅಥವಾ ಕಾಳಾಮುಖ, ಶೈವದ ನಿಜಸ್ವರೂಪ ವೀರಶೈವ ಧರ್ಮಪ್ರವರ್ತಕ ವೀರಭದ್ರದೇವರು ಇವು ಅವರ ಸಂಶೋಧನೆಯ ಕೃತಿಗಳು.

ಡಾ. ಬಿ. ಕೆ. ಖಡಬಡಿ : ಡಾ. ಬಿ. ಕೆ. ಖಡಬಡಿಯವರು ಈ ಭಾಗದ ಹಿರಿಯ ಸಂಶೋಧಕರು. ಇವರು ಜೈನ ಧರ್ಮದ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ರಾಷ್ಟ್ರೀಯ ಮಟ್ಟದ ವಿದ್ವಾಂಸರಲ್ಲಿ ಒಬ್ಬರು. ಬಹು ಭಾಷಾ ವಿಶಾರದರು, 'ವಡ್ಡಾರಾಧನೆ ಒಂದು ಅಧ್ಯಯನ' ಎಂಬುದು ಇವರ ಪಿಎಚ್.ಡಿ. ಮಹಾಪ್ರಬಂಧವಾಗಿದೆ. ನಂತರ 'ಶ್ರಾವಕಾಚಾರ ರಥನೇಮಿ', 'ಗೊಮ್ಮಟೇಶ ಸ್ತುತಿ', 'ಮಹಾವೀರ ಬುದ್ಧ' ಮೊದಲಾದವು ಇವರ ಪ್ರಮುಖ ಕೃತಿಗಳು. ನೂರಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ರಾಷ್ಟ್ರೀಯ, ಅಂತರಾಷ್ಟ್ರೀಯ, ಪ್ರಮುಖ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳಾದ 'ಕುಂದ ಕುಂದಾಚಾರ್ಯ ಪ್ರಶಸ್ತಿ', 'ಪ್ರಾಕೃತ ಜೈನ ಭಾರತಿ ಪ್ರಶಸ್ತಿ' ಈ ಮೊದಲಾದ ಪ್ರಶಸ್ತಿಗಳಿಂದ ಪುರಸ್ಕೃತರಾಗಿರುವರು.

ಡಾ. ಶಿ. ಬಾ. ಪಾಟೀಲ : ಡಾ. ಶಿ. ಬಾ. ಪಾಟೀಲರವರು ಸಂಶೋಧಕರಲ್ಲಿ ಒಬ್ಬರು. ಇವರು 'ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಪ್ರಕಟಿಸಿರುವರು. ಇವರ 'ಶ್ರೀ ಕ್ಷೇತ್ರ ಸೊಗಲ', 'ಕುಹುಂಡಿ ನಾಡು'

ಪ್ರಬಂಧಗಳಾಗಿದ್ದವು. 'ಭಾರತದ ಶಾಲೆಗಳಲ್ಲಿ ಜನಸಂಖ್ಯಾ ಶಿಕ್ಷಣ ಕಲಿಸುವಿಕೆ' ಈ ಪ್ರಬಂಧಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರೆತಿರುತ್ತದೆ.

ಚಿತ್ರ-ಶಿಲ್ಪಕಲೆ : ಈ ಭಾಗದಲ್ಲಿ ಚಿತ್ರ ಶಿಲ್ಪಕಲೆಗೆ ಶ್ರೇಷ್ಠ ಸಾಧನೆಗೈದಿರುವ ಚಿತ್ರಕಾರರಿರುವರು. ಅವರಲ್ಲಿ ಶ್ರೀಶೈಲ ಅಂಬಲಿಮಠರವರು ಸಂಕೇಶ್ವರದವರಾಗಿದ್ದು, ಚಿತ್ರಕಲೆಯಲ್ಲಿ ಒಳ್ಳೆಯ ಹೆಸರನ್ನು ಗಳಿಸಿರುವರು. ಇವರು ನಿರ್ಮಿತಿಯ ತೈಲಚಿತ್ರಗಳು ನಿಡಸೋಸಿಯ ಶ್ರೀಮಠದಲ್ಲಿ ನೋಡಲು ಸಿಗುತ್ತವೆ.

ಎಸ್. ಜಿ. ಚಿನ್ನನವರು ಸಮೀಪದ ಹುಕ್ಕೇರಿಯವರಾಗಿದ್ದು ಚಿತ್ರಕಲೆಯಲ್ಲಿ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವರು. ಇವರ ತೈಲ ಚಿತ್ರಗಳು ಹಾಗೂ ನಿಸರ್ಗದ ರಮಣೀಯ ಚಿತ್ರಗಳು ಸಜೀವವಾಗಿ ನಿರ್ಮಿತಗೊಂಡಿವೆ. ಇವರ ಕಲಾ ಪ್ರತಿಮೆಗೆ ಅನೇಕ ಪ್ರಶಸ್ತಿಗಳು ಲಭಿಸಿರುತ್ತವೆ.

ಸಿ.ಪಿ. ನಾಗೌಡಾರರು ಸಮೀಪದ ಅಮ್ಮಣಗಿಯವರಾಗಿದ್ದು ಶ್ರೇಷ್ಠ ಪ್ರತಿಭಾನ್ವಿತ ಚಿತ್ರಗಾರ ಹಾಗೂ ಫೋಟೋಗ್ರಾಫರ್ ಆಗಿದ್ದರು. ಗಿಡ-ಮರ, ಪಕ್ಷಿ-ಪ್ರಾಣಿ ಚಿತ್ರಬಿಡಿಸುವ ಹವ್ಯಾಸವನ್ನು ಬಾಲ್ಯದಿಂದಲೂ ಬೆಳೆಸಿಕೊಂಡಿದ್ದರು. ಇವರು ಮುಂಬಯಿಯ ನೂತನ ಕಲಾಮಂದಿರದಲ್ಲಿದ ಅಭ್ಯಾಸ ಮಾಡಿರುವರು. ಈ ಅವಧಿಯಲ್ಲಿ ಅವರು ಕೆ.ಕೆ. ಹೆಬ್ಬಾಳ, ಎ. ಎಂ. ಮಾಳಿ, ಹಳದನಕರ ಪಂಡಿತ, ಮೊದಲಾದ ಪ್ರಖ್ಯಾತ ಕಲಾವಿಧರ ಸಹವಾಸ ಸಂಪರ್ಕ ಪಡೆದಿದ್ದರು. ಶ್ರೀಯುತರು ಚಲನಚಿತ್ರ ರಂಗದಲ್ಲಿಸಹ ಕಲಾನಿರ್ದೇಶಕರಾಗಿ ಸೇವೆ ಗೈದಿರುವರು.

ಇವರ ರೇಖಾ ಚಿತ್ರ, ಬಣ್ಣದ ಚಿತ್ರ, ದೃಶ್ಯಾವಳಿ, ಜಲವರ್ಣ, ತೈಲವರ್ಣ, ಚಿತ್ರಗಳ ಪ್ರದರ್ಶನಗಳು ದೊಡ್ಡ ನಗರಳಲ್ಲಿ ಏರ್ಪಟ್ಟಿದ್ದವು. ಒಂದು ನಿಸರ್ಗ ಚಿತ್ರಕ್ಕೆ ಅಂದಿನ ಮುಂಬಯಿ ಸರಕಾರದಿಂದ ಬಂಗಾರ ಪದಕ ಪ್ರಶಸ್ತಿ ಪಡೆದಿದ್ದಾರೆ. ನಿಸರ್ಗದ ಸೂಕ್ಷ್ಮ ನಿರೀಕ್ಷಣೆ, ನಿಸರ್ಗದ ಬದುಕು ಇವು ಚಿತ್ರಗಳ ಒಳಸೆಳೆತದ ಸೆಲೆಗಳಾಗಿದ್ದವು.

ಸಂಗೀತ : ಈ ಭಾಗದಲ್ಲಿ ಸಂಗೀತ ಕ್ಷೇತ್ರದಲ್ಲಿ ಅನೇಕರು ಸಾಧನೆಗೈದಿರುವರು. ಅವರಲ್ಲಿ ಸುರೇಶ ಪಟ್ಟಣಶೆಟ್ಟಿ, ಶ್ರೀಮತಿ. ಹೇಮಲತಾ ಇಂಡಿ, ಶ್ರೀಮತಿ. ಯೋಗಿತಾ ಗುರವ, ಮೊದಲಾದವರು ಆಕಾಶವಾಣಿಯ ಕಲಾವಿದರಾಗಿ ಸಂಗೀತ ಕ್ಷೇತ್ರದಲ್ಲಿ ಹೆಸರು ಗಳಿಸಿರುವರು.

ಪತ್ರಿಕೊಧ್ಯಮಮ ವಿಭಾಗದಲ್ಲಿ ಆರ್. ಎಲ್. ಹಿರೇಮಠರವರು ಸೇವೆಗೈದಿರುವರು. 'ವೀರಶೈವ ಸಮಾಜ ಪತ್ರಿಕೆ'ಯ ಸಂಪಾದಕರಾಗಿದ್ದರು. ಎಂ. ಪಿ. ಪಾಟೀಲರು ಬೆಳಗಾವದಿಂದ ಕನ್ನಡದಲ್ಲಿ ಹಾಗೂ ಕೊಲ್ಲಾಪುರದಿಂದ ಮರಾಠಿಯಲ್ಲಿ

'ಜ್ಞಾನ ಪ್ರಸಾರಕ ಪತ್ರಿಕೆ'ಯ ಸಂಪಾದಕರಾಗಿದ್ದರು. ರಾ. ಕ. ನಾಯಕರವರು 'ಗಡಿನಾಡು ಪತ್ರಿಕೆ'ಯ ಸಂಪಾದಕರಾಗಿದ್ದರು.

ಸಂಸ್ಕೃತಿ: ಹೀಗೆ ಸಂಕೇಶ್ವರವು ಪ್ರಾಚೀನಕಾಲದಿಂದಲೂ ವಿಭಿನ್ನ ಸಂಸ್ಕೃತಿಗಳ ಸಂಗಮತಾನವಾಗಿದೆ. ಹಿಂದೂ, ಮುಸ್ಲಿಂ, ಸಂಸ್ಕೃತಿಯು ಪಸರಿಸಿರುವುದು ಕಂಡು ಬರುತ್ತದೆ. ದೇವಾಲಯಗಳು, ಮಠಗಳು, ಬಸದಿಗಳು, ಮಸಿದಿಗಳು, ಕೋಟೆಗಳು, ವಿವಿಧ ಸಂಸ್ಕೃತಿಯ ಪ್ರತಿಕವಾಗಿವೆ. ಉತ್ಸವ ಆಚರಣೆಗಳು, ಜಾತ್ರೆಗಳು, ವೈವಿಧ್ಯಮಯವಾದ, ಸಂಸ್ಕೃತಿಯನ್ನು ಬಿಂಬಿಸುತ್ತವೆ. ಮರಾಠಿ ಸಂಸ್ಕೃತಿಯ ಪ್ರಭಾವವು ಸ್ವಲ್ಪಮಟ್ಟಿಗೆ ಕಂಡುಬರುತ್ತದೆ.

ಹೀಗೆ ಸಂಕೇಶ್ವರದ ಸಾಂಸ್ಕೃತಿಕ ಪರಿಸರದಲ್ಲಿ ಎಲ್ಲ ರಂಗಗಳಲ್ಲಿ ಗಮನಿಯ ಸಾಧನೆಯು ಕಂಡು ಬರುತ್ತದೆ. ಇಲ್ಲಿನ ವಾತಾವರಣವು ಸಾಧಕರಿಗೆ ಸ್ಪಂದಿಸಿ ಕಾರ್ಯಚಟುವಟಿಕೆಗಳಲ್ಲಿ ತೊಡಗುವಂತೆ ಸಹಾಯಕವಾಗಿದೆ.

ಅಡಿ ಟಿಪ್ಪಣಿಗಳು

೧. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೬೬೮, ೬೬೯
೨. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ ; ನಾರಾಯಣ ಪಿ.ವ್ಹಿ ; ೧೯೮೩ ; ಪು. ೬೦
೩. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೬೫
೪. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೬೫
೫. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೬೫
೬. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೩೪೨
೭. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೯೦
೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಚಿದಾನಂದಮೂರ್ತಿ ಎಂ. ; ೧೯೯೬ ; ಪು. ೧೨೫, ೧೨೭
೯. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಚಿದಾನಂದಮೂರ್ತಿ ಎಂ. ; ೧೯೯೬ ; ಪು. ೧೩೦, ೧೩೧
೧೦. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ. ; ಡಾ. ಶಿ. ಬಾ. ಪಾಟೀಲ ; ೧೯೯೫ ; ಪು.೬೫
೧೧. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟಿಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೦೪, ೧೦೫

ಅಧ್ಯಾಯ ೬

ಸಂಕೇಶ್ವರದ ಕಲೆ ಮತ್ತು ವಾಸ್ತುಶಿಲ್ಪ

ಕರ್ನಾಟಕದ ಇತಿಹಾಸದಲ್ಲಿ ಬೆಳಗಾವಿ ಜಿಲ್ಲೆಯ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಬೆಳಗಾವಿ ಜಿಲ್ಲೆಯು ಶಾತವಾಹನರು, ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ರಟ್ಟರು, ಕಲ್ಯಾಣದ ಚಾಳುಕ್ಯರು, ವಿಜಯನಗರದ ಅರಸರು, ಬಹಮನಿಯರು ಮತ್ತು ಬಿಜಾಪುರದ ಆದಿಲ್‌ಷಾಹಿಗಳು, ಮರಾಠರು, ಬ್ರಿಟಿಷರು ಆಡಳಿತಕ್ಕೆ ಒಳಪಟ್ಟು ವಿವಿಧ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ತನ್ನ ಹಿರಿಮೆಯನ್ನು ಮೆರೆದಿದೆ. ಆಯಾ ರಾಜಮನೆತನಗಳ ಕಾಲದಲ್ಲಿ ಈ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದೇವಾಲಯ, ಮೂರ್ತಿಶಿಲ್ಪ, ಕಲೆ ಮತ್ತು ವಾಸ್ತುಶಿಲ್ಪಗಳ ರೂಪದಲ್ಲಿ ನಿರ್ಮಾಣಗೊಂಡವು ಆಯಾ ಕಾಲದ ಸಂಸ್ಕೃತಿ ಉಳಿದು ಬಂದಿದೆ. ಇಂಥಹವುಗಳನ್ನು ಈ ಜಿಲ್ಲೆಯ ಅನೇಕ ತಾಲೂಕು, ಹಾಗೂ ನಗರ, ಪಟ್ಟಣ, ಹಳ್ಳಿಗಳಲ್ಲಿ ಕಾಣುವುದಾಗಿದೆ.

ಬೆಳಗಾವಿಯಿಂದ ೫೦ ಕಿ.ಮೀ. ದೂರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ೪ ರ ಬದಿ (ಪಶ್ಚಿಮಕ್ಕೆ) ಸಂಕೇಶ್ವರವು ಸಹ ರಾಜಮನೆತಗಳ ಆಡಳಿತಕ್ಕೆ ಒಳಪಟ್ಟು ವಿವಿಧ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು, ಮಠಗಳು, ಬಸದಿಗಳು, ಕೋಟೆಗಳು ರಚನೆಗೊಡಿದೆ. ಈ ಪ್ರದೇಶದಲ್ಲಿ ಕಂಡುಬರುವ ದೇವಾಲಯಗಳನ್ನು ಗಮನಿಸಿದಾಗ ಅವುಗಳಲ್ಲಿ ಶೈವ ದೇವಾಲಯ, ವೈಷ್ಣವ ದೇವಾಲಯಗಳು ಕಂಡುಬರುತ್ತವೆ. ನಂತರದಲ್ಲಿ ಜೈನ ಬಸದಿಗಳು, ಮಠಗಳು ಕಂಡುಬರುತ್ತವೆ. ಆದಿಲ್‌ಷಾಹಿಗಳ ಗುಮ್ಮಟಗಳು ಮತ್ತು ಮರಾಠರ ಆಡಳಿತಕ್ಕೆ ಸಂಬಂಧಿಸಿದ ಕೋಟೆಗಳು ನಿರ್ಮಾಣಗೊಂಡಿರುವವು.

ಆದರೆ ಇಲ್ಲಿ ನಿರ್ಮಿತವಾದ ದೇವಾಲಯ, ಮಠಗಳು, ಬಸದಿಗಳು, ಕೋಟೆಗಳ ಕಾಲವನ್ನು ನಿಖರವಾಗಿ ಗುರುತಿಸುವ ಶಾಸನಾಧಾರಗಳು ಅತ್ಯಂತ ವಿರಳವಾಗಿವೆ. ಈ ಕೊರತೆಯ ಹಿನ್ನೆಲೆಯಲ್ಲಿ ಈ ಪ್ರದೇಶದ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನದ ಪ್ರಯತ್ನವನ್ನು ಮಾಡಲಾಗಿದೆ.

ದೇವಾಲಯಗಳು :

ಶ್ರೀ ಶಂಕರಲಿಂಗ ದೇವಾಲಯ :

ಸಂಕೇಶ್ವರದ ನೈರುತ್ಯ ದೆಸೆಯಲ್ಲಿ, ಹಿರಣ್ಯಕೇಶಿ ನದಿಯ ದಡದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ

ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಕಪ್ಪುಶಿಲೆಯಲ್ಲಿ ರಚನೆಯಾಗಿರುವುದು ಇದರ ಕಾಲಗಣನೆಯನ್ನು ೧೦-೧೧ನೇ ಶತಮಾನ ಎಂಬುದಾಗಿ ಗುರುತಿಸಲಾಗಿದೆ.

ದೇವಾಲಯದ ವಿವರಣೆ :

೧. **ಗರ್ಭಗೃಹ** : ಶಂಕರಲಿಂಗ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ೯'-೮" ಅಡಿ ಉದ್ದಗಲದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಒಳಗೊಡೆಗಳು ನಿರಾಲಂಕಾರವಾಗಿರುತ್ತವೆ. ಗರ್ಭಗೃಹ ಛತ್ರ ಅಷ್ಟಕೋನಾಕಾರವಾಗಿದ್ದು, ಮಧ್ಯದಲ್ಲಿ ಪದ್ಮವನ್ನು ಕೆತ್ತಲಾಗಿದೆ. ಗರ್ಭಗೃಹದ ದ್ವಾರವು ೭'-೪" ಅಡಿ ಉದ್ದ ೩'-೮" ಅಡಿ ಅಗಲವಾಗಿದೆ. ಗರ್ಭಗೃಹದ ದ್ವಾರವು ಪಂಚಶಾಖೆಯನ್ನು ಹೊಂದಿದ್ದು ಮಂಗಲ ಫಲಕದಲ್ಲಿ ಗಣಪತಿಯ ವಿಗ್ರಹವಿರುತ್ತದೆ. ದ್ವಾರದ ಮೇಲೆ ಎರಡೂ ಕಡೆಗೆ ಮಕರ ತೋರಣಗಳನ್ನು ಕೆತ್ತಲಾಗಿರುತ್ತದೆ.

೨. **ಅಂತರಾಳ** : ಗರ್ಭಗೃಹಕ್ಕೆ ಹೊಂದಿಕೊಂಡಂತೆ ಮುಂದೆ ಚೌಕಾಕಾರದ ಅಂತರಾಳವಿದೆ. ಅಂತರಾಳವು ೯'-೮" ಅಡಿ ಉದ್ದಗಲದ ಅಳತೆಯನ್ನು ಹೊಂದಿದ್ದು ಗೋಡೆಗಳು ನಿರಾಲಂಕಾರವಾಗಿದೆ. ಛತ್ರ ಅಷ್ಟಕೋನಾಕಾರವಾಗಿದ್ದು ಮಧ್ಯದಲ್ಲಿ ಪದ್ಮದ ಅಲಂಕರಣೆಯಿರುತ್ತದೆ. ಅಂತರಾಳದ ದ್ವಾರವು ೭ ಅಡಿ ಉದ್ದ ಮತ್ತು ೩'-೮" ಅಡಿ ಅಗಲವಾಗಿದ್ದು ಲಲಾಟಬಿಂಬದಲ್ಲಿ ಗಣಪತಿಯ ವಿಗ್ರಹವಿದೆ. ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ಪ್ರಸ್ತುತ ಅವುಗಳಿಗೆ ತಾಮ್ರಪಟ್ಟ ಲೇಪಿಸಲಾಗಿದೆ.

೩. **ನವರಂಗ** : ಅಂತರಾಳಕ್ಕೆ ಹೊಂದಿಕೊಂಡಂತೆ ವಿಶಾಲವಾದ ಚೌಕಾಕಾರದ ನವರಂಗವಿದ್ದು ೨೩ ಅಡಿ ಉದ್ದಗಲದ ಅಳತೆಯನ್ನು ಹೊಂದಿರುತ್ತದೆ. ನವರಂಗದ ಮಧ್ಯದಲ್ಲಿ ೪ ಕಂಬಗಳಿವೆ. ಮಧ್ಯದಲ್ಲಿ ಸ್ವಲ್ಪ ಎತ್ತರವಾದ ವೃತ್ತಾಕಾರದ ರಚನೆಯಿದೆ. ನವರಂಗದ ಒಳಗೋಡೆಗಳಲ್ಲಿ 'ನೀಸ್'ಗಳಿದ್ದು ಅವುಗಳಲ್ಲಿ ವಿಷ್ಣು, ಕಾಳಭೈರವಿ, ಗಣೇಶ, ಮುಂತಾದ ವಿಗ್ರಹಗಳನ್ನು ಇಡಲಾಗಿದೆ. ನವರಂಗದ ಛತ್ತು ಆಳವಾಗಿದ್ದು ಅಲಂಕರಣೆಯಿಂದ ಕೂಡಿದೆ. ಛತ್ತಿನಲ್ಲಿ ಹೂವುಗಳ ಕೆತ್ತನೆ ಮತ್ತು ಅಷ್ಟದಿಕ್ಪಾಲಕರ ಕೆತ್ತನೆಯನ್ನು ಕಾಣಬಹುದು. ನವರಂಗದಲ್ಲಿಯ ಕಂಬಗಳು ಅಧಿಷ್ಠಾನ, ಚೌಕ-ಘನಭಾಗ, ವೃತ್ತಾಕಾರದ ಪಟ್ಟಿ, ಮತ್ತೆ ಚೌಕಾಕಾರದ ಘನಭಾಗ, ಮೇಲೆ

ಮುಚ್ಚಳಿಕೆಯಂಥಹ ಚಪ್ಪಟೆಯಾದ ಚೌಕಪಟ್ಟಿಗಳನ್ನು ಹೊಂದಿದ್ದು ೭'-೮" ಅಡಿ ಎತ್ತರ ಮತ್ತು ೧'-೬" ಅಡಿ ಅಗಲವಾಗಿದೆ. ನವರಂಗದ ಮುಖ್ಯ ಪ್ರವೇಶದ ಹತ್ತಿರದ 'ನೀಸ್'ದಲ್ಲಿ ಪದ್ಮಾಸನದಲ್ಲಿರುವ ಸುಂದರವಾದ ಅನ್ನಪೂರ್ಣದೇವಿಯ ಮೂರ್ತಿ ಶಿಲ್ಪವಿರುತ್ತದೆ.

ಈ ನವರಂಗದ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಚಿಕ್ಕ ಪ್ರವೇಶ ಮಂಟಪಗಳಿದ್ದು ಕಕ್ಷಾಸನವನ್ನು ಹೊಂದಿರುತ್ತವೆ. ದಕ್ಷಿಣದ ಪ್ರವೇಶಮಂಟಪದ ಛತ್ತು ೯ ಅಂಕಣಗಳಲ್ಲಿ ವಿಂಗಡಿತವಾಗಿದ್ದು ಅವುಗಳಲ್ಲಿ ವಿವಿಧ ಪ್ರಕಾರಗಳ ಹೂವುಗಳ ಕೆತ್ತನೆ ಇರುತ್ತದೆ. ನವರಂಗದ ಉತ್ತರ ಮತ್ತು ದಕ್ಷಿಣದ ಪ್ರವೇಶದ್ವಾರ ೫ ಶಾಖೆಗಳನ್ನು ಒಳಗೊಂಡಿರುತ್ತದೆ. ನವರಂಗದ ಮುಖ್ಯ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪವಿರುತ್ತದೆ. ದ್ವಾರದ ಮೇಲ್ಭಾಗದಲ್ಲಿ ವಿವಿಧ ಮಾದರಿಯ ಶಿಖರಗಳ ಪ್ರತಿ-ಕೃತಿಯನ್ನು ಕೆತ್ತಲಾಗಿರುತ್ತದೆ. ನವರಂಗದಲ್ಲಿ ನಂದಿ ವಿಗ್ರಹವಿರುತ್ತದೆ.

೪. **ಮುಖಮಂಟಪ** : ನವರಂಗಕ್ಕೆ ಹೊಂದಿಕೊಂಡಂತೆ ವಿಶಾಲವಾದ ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿದ ತೆರೆದ ಮುಖಮಂಟಪವಿರುತ್ತದೆ. ಈ ಮುಖಮಂಟಪವು ಮೂರು ಪ್ರವೇಶಗಳನ್ನು ಹೊಂದಿದೆ. ಮುಖಮಂಟಪವು ಸುತ್ತಲೂ ಕಕ್ಷಾಸನ ಹೊಂದಿದೆ. ಕಕ್ಷಾಸನದ ಮೇಲೆ ಬ್ರಹದ್ಗಾತ್ರದ ಕಂಭಗಳನ್ನು ನಿಲ್ಲಿಸಲಾಗಿದೆ. ಮುಖ ಮಂಟಪದಲ್ಲಿ ಒಟ್ಟು ೨೬ ಕಂಬಗಳಿದ್ದು ಕಕ್ಷಾಸನದ ಮೇಲೆ ಇರುವ ಕಂಬಗಳು, ಅಷ್ಟಕೋನಾಕೃತಿಯ ಪಟ್ಟಿ, ವೃತ್ತಾಕಾರದ ಪಟ್ಟಿ, ಅಷ್ಟಕೋನಾಕಾರದ ಪಟ್ಟಿ, ಅದರ ಮೇಲೆ ಚೌಕಾಕಾರದ ಘನಭಾಗ, ಮೇಲೆ ವೃತ್ತಾಕರದ ಭಾಗ, ಅದರ ಮೇಲೆ ಮುಚ್ಚಳಿಕೆಯಂಥ ರಚನೆಯನ್ನು ಹೊಂದಿರುತ್ತದೆ. ಅಷ್ಟಕೋಣದ ಪಟ್ಟಿಗೆ ಮತ್ತು ಚೌಕ ಘನಭಾಗಗಳಲ್ಲಿ ಸುರಳಿಗಳ ಕೆತ್ತನೆ ಮತ್ತು ಹೂಬಳ್ಳಿಗಳ ಕೆತ್ತನೆಯನ್ನು ಕಾಣಬಹುದು. ಇತರ ಕಂಬಗಳು ಸಹ ಅಷ್ಟಕೋನ, ಚೌಕಘನಭಾಗ, ಇತ್ಯಾದಿಗಳಲ್ಲಿ ಹೊಂದಿದ್ದರೂ ಅವುಗಳಲ್ಲಿ ಯಾವುದೇ ತೆರನಾದ ಕೆತ್ತನೆಯು ಕಂಡು ಬರುವದಿಲ್ಲ. ಮುಖಮಂಟಪದ ಕಂಭಗಳು ೭'-೧೦" ಅಡಿ ಉದ್ದ ಮತ್ತು ೧'-೮' ಅಡಿ ಅಗಲವಾಗಿವೆ. ಮುಖಮಂಟಪದ ಭುವನೇಶ್ವರಿಯಲ್ಲಿ ಶಿವ, ವಿಷ್ಣು, ಮುಂತಾದವರ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿರುತ್ತದೆ. ಮುಖಮಂಟಪದ ಸುತ್ತಲೂ ಇಳಿಜಾರಾದ ಛಜ್ಜ ಭಾಗವಿದ್ದು ನಿರಾಲಂಕಾರವಾಗಿದೆ.

೫. **ಅಧಿಷ್ಠಾನ** : ಶಂರಲಿಂಗ ದೇವಾಲಯದ ಅಧಿಷ್ಠಾನವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ಚಿಕ್ಕದಾಗಿದೆ.

೬. **ಗೋಡೆಗಳು** : ಶಂಕರಲಿಂಗ ದೇವಾಲಯದ ಗರ್ಭಗೃಹದ ಹೊರಗೋಡೆಗಳು ಅಲಂಕಾರಿಕವಾಗಿವೆ. ಹಿಂಬದಿಯಲ್ಲಿ ಎಡ ಹಾಗೂ ಬಲಬದಿಯ ಕೋಷ್ಠಗಳನ್ನು ಕೆತ್ತಲಾಗಿದೆ. ಇದಲ್ಲದೇ ಗೋಡೆಗಳ ಮೇಲೆ ಸ್ಥಂಬ ಪಂಜರಗಳ ಕೆತ್ತನೆಯನ್ನು ಕಾಣುತ್ತೇವೆ. ನವರಂಗದ ಗೋಡೆ ನಿರಾಲಂಕಾರವಾಗಿದೆ.

೭. **ಕಂಭಗಳು** : ಈ ದೇವಾಲಯದಲ್ಲಿರುವ ನವರಂಗದಲ್ಲಿರುವ ಕಂಭಗಳು ಚೌಕ ಘನಭಾಗ, ಅಷ್ಟಕೋನದ ಪಟ್ಟಿ, ವೃತ್ತಾಕಾರದ ಪಟ್ಟಿ, ಮತ್ತೇ ಚೌಕಾಕಾರದ ಘನಭಾಗ, ಅದರ ಮೇಲೆ ವೃತ್ತಾಕಾರ, ಮೇಲೆ ಮುಚ್ಚಳಿಕೆಯಾಕಾರದ ಚೌಕ ಚಪ್ಪಟೆ ಭಾಗವಿದೆ. ನವರಂಗದ ದಕ್ಷಿಣದ ಪ್ರವೇಶ ಮಂಟಪದಲ್ಲಿನ ಕಂಭಗಳು ಸಹ ಇದೇ ಭಾಗಗಳನ್ನು ಹೊಂದಿದ್ದು ಪಟ್ಟಿಕೆಗಳಲ್ಲಿ ಲತಾಸುರಳಿ ಇತ್ಯಾದಿ ಕೆತ್ತನೆಯನ್ನು ಹೊಂದಿವೆ. ಸಭಾ ಮಂಟಪದ ಮುಂದಿನ ಮುಖ ಮಂಟಪದಲ್ಲಿನ ಕಂಭಗಳು ಬೃಹತ್ ಗಾತ್ರದ್ದಾಗಿದ್ದು ಅವು ಸಹ ಮೇಲಿನ ಕಂಭಗಳಲ್ಲಿನ ಲಕ್ಷಣವನ್ನೇ ಹೊಂದಿದ್ದು ಸಾದಾ ಬೋಧುಗೆಗಳನ್ನು ಹೊಂದಿರುತ್ತವೆ.

೮. **ಭುವನೇಶ್ವರಿ** : ಈ ದೇವಾಲಯದ ಗರ್ಭಗೃಹ, ಅಂತರಾಳದ ಛತ್ತು ಅಷ್ಟ ಕೋನಾಕೃತಿಯಾಗಿದ್ದು ಮಧ್ಯದಲ್ಲಿ ಕಮಲದ ಕೆತ್ತನೆಯನ್ನು ಹೊಂದಿರುತ್ತದೆ. ನವರಂಗದ ಛತ್ತು ಆಳವಾಗಿದ್ದು, ಅಷ್ಟದಿಕ್ಪಾಲಕರು ಮತ್ತು ಹೂವುಗಳ ಅಲಂಕರಣೆಯನ್ನು ಹೊಂದಿದೆ. ನವರಂಗದ ದಕ್ಷಿಣದ ಪ್ರವೇಶ ಮಂಟಪದ ಛತ್ತು ೯ ಅಂಕಗಳಲ್ಲಿ ವಿಂಗಡಿತವಾಗಿದ್ದು ಹೂವುಗಳ ಅಲಂಕರಣೆಯಿಂದ ಕೂಡಿದೆ. ಮುಖಮಂಟಪದ ಛತ್ತು ಅಷ್ಟಕೋನಾಕೃತಿಯದಾಗಿದ್ದು ಮಧ್ಯದಲ್ಲಿ ಕ್ಷಿಪ್ತವಿತಾನದ (ನಕ್ಷತ್ರಾಕಾರದ ಮೊಗ್ಗಿನ) ಕೆತ್ತನೆ ಇರುತ್ತದೆ.

೯. **ಛಜ್ಜ** : (ಮುನ್ಚಾಚು) ಈ ದೇವಾಲಯದ ಮುಖಮಂಟಪವು ಇಳಿಜಾರಾದ ಛಜ್ಜ ಭಾಗವನ್ನು ಹೊಂದಿದ್ದು ಅಲ್ಲಿ ಯಾವುದೇ ರೀತಿಯ ಅಲಂಕರಣೆಯಿಲ್ಲ.

೧೦. **ಶಿಖರ :** ಶಂಕರಲಿಂಗ ದೇವಾಲಯದ ಗರ್ಭಗೃಹದ ಮೇಲಿರುವ ಶಿಖರವು ಜೀರ್ಣೋದ್ಧರಗೊಂಡಿದ್ದು ಕದಂಬ ನಾಗರ ಶೈಲಿಯಲ್ಲಿದೆ.

ಈ ದೇವಾಲಯವು ಸುತ್ತಲೂ ಪ್ರಾಕಾರ ಗೋಡೆಯನ್ನು ಒಳಗೊಂಡಿದ್ದು ಮುಖ್ಯ ಪ್ರವೇಶದ್ವಾರವು ಉತ್ತರಕ್ಕಿದೆ. ದಕ್ಷಿಣ ಭಾಗದಲ್ಲಿ ಪ್ರವೇಶ ದ್ವಾರವಿದ್ದು ಹಿರಣ್ಯಕೇಶಿ ನದಿಗೆ ಹೋಗಲು ಮೆಟ್ಟಲುಗಳ ಸೋಪಾನಗಳಿವೆ.

ಈ ದೇವಾಲಯದ ಪ್ರಕಾರ ಗೋಡೆಯ ಒಳಗೆ ಹಣುಮಂತ, ದತ್ತಾತ್ರೆಯ, ದೇವರುಗಳ ಚಿಕ್ಕ ಗುಡಿಗಳಿರುತ್ತವೆ.

ಲಕ್ಷ್ಮೀನಾರಾಯಣ ದೇವಾಲಯ:

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ವೈಷ್ಣವ ಸಂಪ್ರದಾಯಕ್ಕೆ ಸೇರಲ್ಪಟ್ಟಿದೆ. ಕ್ರಿ.ಶ. ೧೦-೧೧ ನೇ ಶತಮಾನದ ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ ಕಪ್ಪುಶಿಲೆಯಿಂದ ರಚನೆಗೊಂಡಿರುತ್ತದೆ.

೧. **ಗರ್ಭಗೃಹ :** ಲಕ್ಷ್ಮೀನಾರಾಯಣ ದೇವಾಲಯದ ಗರ್ಭಗೃಹವು ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿದ್ದು ೭'-೬" ಅಡಿ ಉದ್ದಗಲದ ಅಳತೆಯನ್ನು ಹೊಂದಿರುತ್ತದೆ. ಗರ್ಭಗೃಹದ ಒಳಭಾಗದ ಗೋಡೆಯು ಸ್ವಲ್ಪಮಟ್ಟಿಗೆ ಜೀರ್ಣೋದ್ಧಾರಗೊಂಡಿರುತ್ತದೆ. ಛತ್ತು ಅಷ್ಟ ಕೋನಾಕೃತಿಯಾಗಿದ್ದು ನಡುವೆ ಪದ್ಮದ ಕೆತ್ತನೆಯಿರುತ್ತದೆ. ಗರ್ಭಗೃಹದ ದ್ವಾರವು ಪಂಚಶಾಖೆಗಳನ್ನು ಶಾಖೆಗಳನ್ನು ಒಳಗೊಂಡಿದ್ದು ಶಾಖೆಗಳಲ್ಲಿ ಲತಾಸುರುಳಿಗಳು, ಸ್ತಂಭಶಾಖೆಗಳು ಪ್ರಮುಖವಗಿರುತ್ತವೆ. ದ್ವಾರದ ಲಲಾಟಬಿಂಬದಲ್ಲಿ ವಿಷ್ಣುವಿನ ವಿಗ್ರಹ ವಿರುತ್ತದೆ. ದ್ವಾರದ ಮೇಲ್ಭಾಗದಲ್ಲಿ ದ್ರಾವಿಡ ಮಾದರಿಯ ಶಿಖರಗಳ ಪ್ರತಿಕೃತಿಗಳನ್ನು ಕೆತ್ತಲಾಗಿದ್ದು ಅವುಗಳ ಎರಡೂ ಬದಿಯಲ್ಲಿ ಮಕರತೋರಣಗಳಿವೆ.

೨. **ಅಂತರಾಳ:** ಗರ್ಭಗೃಹಕ್ಕೆ ಹೊಂದಿಕೊಂಡಂತೆ ೭'-೬" ಅಡಿ ಉದ್ದಗಲದ ಅಳತೆಯನ್ನು ಹೊಂದಿದ ಚೌಕಾಕಾರದ ಅರ್ಧಮಂಟಪವಿರುತ್ತದೆ. ಒಳಭಾಗದಲ್ಲಿಯ ಗೋಡೆಗಳು. ಸಮಪಾತಳಿಯಲ್ಲಿದ್ದು ನಿರಾಲಂಕಾರ-ವಾಗಿರುತ್ತವೆ. ಅಂತರಾಳದ ಮತ್ತು ಸಹ ಅಷ್ಟ ಕೋನಾಕೃತಿಯದ್ದಾಗಿದ್ದು ಮಧ್ಯದಲ್ಲಿ ಪದ್ಮದ ಅಲಂಕರಣೆಯನ್ನು ಹೊಂದಿರುತ್ತದೆ. ಅಂತರಾಳದ ದ್ವಾರದ ಮೇಲ್ಭಾಗದಲ್ಲಿ ೫ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿಗಳ ಕೆತ್ತನೆಯನ್ನು ಸಹ ಕಾಣಬಹುದು. ಅಂತರಾಳದ ದ್ವಾರದ ಎರಡೂ ಬದಿಯಲ್ಲಿ ಜಾಲಂಧ್ರಗಳ ಕೆತ್ತನೆ ಇರುತ್ತದೆ.

೩. **ಸಭಾಮಂಟಪ** : ಅಂತರಾಳಕ್ಕೆ ಹೊಂದಿಕೊಂಡಂತೆ ನಕ್ಷತ್ರಾಕಾರದ ತಲವಿನ್ಯಾಸದಲ್ಲಿರುವ ಸಭಾಮಂಟಪವಿರುತ್ತದೆ. ಇಲ್ಲಿನ ಸಭಾಮಂಪವೇ ಮುಖಮಂಟಪವಾಗಿ ಕೆಲಸಮಾಡುವದನ್ನು ನೋಡಬಹುದು. ಇದು ಪೂರ್ವ, ಉತ್ತರ ಮತ್ತು ದಕ್ಷಿಣದ ಕಡೆಗೆ ಪ್ರವೇಶಗಳನ್ನು ಹೊಂದಿರುತ್ತದೆ. ಅಂತರಾಳಕ್ಕೆ ಹೊಂದಿಕೊಂಡಂತಿರುವ (ಕೋಷ್ಠಕ ಗೂಡುಗಳಲ್ಲಿ) ಗೋಡೆಗಳಲ್ಲಿ ಕೋಷ್ಠಕ ಗೂಡುಗಳು ಇದ್ದು ಅವುಗಳಲ್ಲಿ ನಾಗಶಿಲ್ಪ ವಿಷ್ಣುವಿನ ಶಿಲ್ಪಗಳಿರುತ್ತವೆ. ಕೋಷ್ಟಕಗಳ ಮೇಲೆ ಮಾದರಿಯ ಶಿಖರಗಳ ಪ್ರತಿಕೃತಿಗಳ ಕೆತ್ತನೆಯಿದೆ. ಸಭಾಮಂಟಪವು ೨೧" ಅಡಿ ಉದ್ದಗಲದ ಅಳತೆಯನ್ನು ಹೊಂದಿರುತ್ತದೆ. ಸಭಾಮಂಟಪದಲ್ಲಿ ಸುತ್ತಲೂ ಕಕ್ಷಾಸನವಿರುತ್ತದೆ. ಸಭಾಮಂಟಪದ ಛತ್ತು ಅಷ್ಟಕೋನಾಕಾರವಾಗಿದ್ದು ಅದರ ಮಧ್ಯದಲ್ಲಿ ಕ್ಷಿಪ್ತ ವಿತಾನದ (ನಕ್ಷತ್ರಾಕಾರದ ಕೆತ್ತನೆ) ಕೆತ್ತನೆಯನ್ನು ಹೊಂದಿದೆ. ಈ ಭುವನೇಶ್ವರಿ ೪ ಕೋನಗಳಲ್ಲಿ ವೃಷಭಾರೂಢನಾದ ಶಿವಪಾರ್ವತಿಯರು, ಅಷ್ಟ ದಿಕ್ಪಾಲಕರು ಮತ್ತು ವಾದ್ಯವೃಂದದವರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಸಭಾಮಂಟಪದಲ್ಲಿ ಒಟ್ಟು ೧೦ ಕಂಬಗಳಿದ್ದು ಮಧ್ಯದಲ್ಲಿ ನಾಲ್ಕು ಕಂಭಗಳಿರುತ್ತವೆ. ಕಂಭಗಳು ಕೆಳಭಾಗದಲ್ಲಿ ಚೌಕ ಘನಭಾಗ, ಅಷ್ಟಕೋನದ ಪಟ್ಟಿ, ವೃತ್ತಾಕಾರದ ಪಟ್ಟಿ, ಆಯತ್ತಾಕಾರದ ಘನಭಾಗ, ಮೇಲೆ ಅಷ್ಟಕೋಣದ ಪಟ್ಟಿ, ವೃತ್ತಾಕಾರದ ಭಾಗ, ಮುಚ್ಚಳಕಿಯಂತಹ ಚಪ್ಪಟೆಯಾದ ವೃತ್ತಾಕಾರದ ರಚಣೆ ಮತ್ತು ಮೇಲೆ ವೃತ್ತಾಕಾರದ ಭೋದಿಗೆಯನ್ನು ಹೊಂದಿರುತ್ತವೆ. ಸಭಾ ಮಂಟಪದ ಕಕ್ಷಾಸನದ ಓಂಭಾಗದಲ್ಲಿ ನಕ್ಷತ್ರಾಕಾರದ ಅಲಂಕರಣೆಯ ಕೆತ್ತನೆಯನ್ನು ಕಾಣಬಹುದು. ಸಭಾಮಂಪಟದ ಮುಂದೆ ಮೆಟ್ಟಿಲುಗಳ ಸೋಪಾನಗಳಿವೆ.

೪. **ಅಧಿಷ್ಠಾನ** : ಈ ದೇವಾಲಯದ ಸಭಾ ಮಂಟಪವು ಸ್ವಲ್ಪ ಎತ್ತರವಾದ ವೇದಿಕೆಯ ಮೇಲೆ ನಿರ್ಮಾಣವಾಗಿದ್ದು, ಅದರ ಅಧಿಷ್ಠಾನ ಭಾಗವು ಅಷ್ಟೇನೂ ಎತ್ತರವಾಗಿರದೇ ಉಪಾನ, ಕಂಠ, ಮತ್ತು ಕಪೋತ ಭಾಗಗಳನ್ನು ಹೊಂದಿದ್ದು ಅಧಿಷ್ಠಾನವು ನಿರಾಲಂಕಾರವಾಗಿರುತ್ತದೆ. ಗರ್ಭಗೃಹದ ಅಧಿಷ್ಠಾನವು ಸುಮಾರು ೩ ಅಡಿಗಳಷ್ಟು ಎತ್ತರವಾಗಿದ್ದು, ಉಪಾನ ಜಗತಿ, ಕಂಠ, ಬಹುಮುಖ ಕುಮುದ, ಕಂಠ ಮತ್ತು ಕಪೋತ ಭಾಗಗಳನ್ನು ಹೊಂದಿರುತ್ತದೆ.

೫. **ಗೋಡೆಗಳು** : ಈ ದೇವಾಲಯವು ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿರುತ್ತದೆ. ಗರ್ಭಗೃಹದ ಒಳಗೊಡೆ ಮತ್ತು ಅಂತರಾಳದ ಒಳಗೋಡೆಗಳು ಸಮಪಾತಳಿಯಲ್ಲಿದ್ದು ನಿರಾಲಂಕಾರವಾಗಿರುತ್ತವೆ. ಗರ್ಭಗೃಹದ ಹೊರಗೋಡೆಯು ಮೂರ್ತಿ ಶಿಲ್ಪಗಳು, ಸ್ತಂಭಪಂಜರುಗಳಿಂದ ಅಲಂಕೃತವಾಗಿರುತ್ತದೆ. ಗೋಡೆಯು ಹಿಂಬಣೆ ಮತ್ತು ಮುಂಬಣೆಗಳಿಂದ ಕೂಡಿದ್ದು ಮುಂಬಣೆಗಳಲ್ಲಿ ಅಲಂಕಾರಿಕ ಸ್ತಂಭಗಳನ್ನು ಕೆತ್ತಲಾಗಿದ್ದು, ಮೂರ್ತಿಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಅವುಗಳಲ್ಲಿ ಅತ್ಯಂತ ಸುಂದರವಾದ ಮೂರ್ತಿ ಶಿಲ್ಪಗಳೆಂದರೆ ದರ್ಪಣಸುಂದರಿ, ಶಾಸನಸುಂದರಿ, ಕೋಳಲೂದುತ್ತಿರುವಕೃಷ್ಣ, ವಿಷ್ಣು, ಮುಂತಾದವುಗಳು. ತ್ರಿಭಂಗಿಯಲ್ಲಿರುವ ಶಾಸನ ಸುಂದರಿಯ ಶಿಲ್ಪದಲ್ಲಿರುವ ಮೂರು ಸಾಲುಗಳನ್ನು ಡಾ॥ ಶ್ರೀನಿವಾಸ ರಿತ್ತಿಯವರು "ಕುಲಹೀನಸ್ಯ ಕರ್ಮಹೀನಸ್ಯನ ಪೂಜಯಂತೆ" ಎಂಬುದಾಗಿ ಅರ್ಥೈಸಿದ್ದಾರೆ. ಈ ಮೂರ್ತಿಯು ಒಳ್ಳೆಯ ಪ್ರಮಾಣಬದ್ಧವಾಗಿದ್ದು ಕರ್ನಾಟಕದಲ್ಲಿ ಜಲಸಾಂಗ್ವಿಯಾದು ಎರಡನೆಯ ಅಪರೂಪದ ಶಿಲ್ಪಕಲಾಕೃತಿ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಗರ್ಭಗೃಹದ ಹೊರಗೋಡೆಗಳಲ್ಲಿ ಮೂರು ಕಡೆ ಕೋಷ್ಠಕ ಗೂಡುಗಳಿರುತ್ತವೆ. ಈ ದೇವಾಲಯದಲ್ಲಿರುವ ಗೋಡೆಯ ಮೇಲಿನ ಶೃಂಗಾರ ಸ್ತ್ರೀಯರ ನಯನ ಮನೋಹರ ನಾಜೂಕು ಮೂರ್ತಿಶಿಲ್ಪಗಳು ನಮ್ಮನ್ನು ಬೇಲೂರು-ಹಳೆಬೀಡು ಶಿಲ್ಪಗಳನ್ನು ನೆನೆಯುವಂತೆ ಮಾಡುತ್ತವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಭಾಮಂಟಪದ ಒಳಗೋಡೆಗಳಲ್ಲಿ ಕೋಷ್ಟಕಗಳಿದ್ದು ಅವುಗಳಲ್ಲಿ ನಾಗ ಮತ್ತು ವಿಷ್ಣುವಿನ ಶಿಲ್ಪಗಳಿರುತ್ತವೆ.

೬. **ಭುವನೇಶ್ವರಿ** : ಗರ್ಭಗೃಹದ ಮತ್ತು ಅಂತರಾಳಗಳ ಭುವನೇಶ್ವರಿಗಳು ಅಷ್ಟಕೋನಾಕೃತಿಯ ಕೆತ್ತನೆಯನ್ನು ಹೊಂದಿದ್ದು ಮಧ್ಯದಲ್ಲಿ ಪದ್ಮದ ಕೆತ್ತನೆ ಇರುತ್ತದೆ. ಸಭಾ ಮಂಟಪದ ಛತ್ತು ಅಷ್ಟಕೋಣಾಕೃತಿಯದಾಗಿದ್ದು ಮಧ್ಯದಲ್ಲಿ ಕ್ಷಿಪ್ತಪಿತಾನದ ಕೆತ್ತನೆ ಇರುತ್ತದೆ. ೪ ಕೋನಗಳಲ್ಲಿ ವೃಷಭಾರೂಢರಾದ ಶಿವಪಾರ್ವತಿ, ಅಷ್ಟದಿಕ್ಪಾಲಕರು ಮತ್ತು ವಾದ್ಯವೃಂದದವರ ಉಬ್ಬು ಶಿಲ್ಪಗಳನ್ನು ಕಾಣಬಹುವುದು. ಸಭಾಮಂಟಪದ ಛತ್ತಿನಲ್ಲಿಯ ತೊಲೆಗಳು ಮತ್ತು ಛತ್ತಿನ ನಡುವೆ ನಕ್ಷತ್ರಾಕಾರದ ಅಲಂಕರಣೆಯಿರುತ್ತದೆ.

೭. **ಸ್ತಂಭಗಳು** : ಸಭಾಮಂಟಪದಲ್ಲಿಯ ಕಂಭಗಳು ನುಣುಪಾದ ಕೆತ್ತನೆಯನ್ನು ಹೊಂದಿದ್ದು ಕೆಳಭಾಗದಲ್ಲಿ ಚೌಕಾದ ಘನಭಾಗ, ಅಷ್ಟಕೋನದ ಪಟ್ಟಿ, ವೃತ್ತಾಕಾರದ ಪಟ್ಟಿ, ಅಷ್ಟಕೋನದ ಪಟ್ಟಿ, ವೃತ್ತಾಕಾರದ ಪಟ್ಟಿ, ಅಷ್ಟಕೋನದ ಪಟ್ಟಿ, ಆಯಾತಾಕಾರದ ಘನಭಾಗ, ಅಷ್ಟಕೋನದ ಪಟ್ಟಿ, ವೃತ್ತಾಕಾರದ ಭಾಗ, ಮುಚ್ಚಳಿಕೆಯಂತಹ ಚಪ್ಪಟೆ ಭಾಗವಿದ್ದು ಮೇಲೆ ವೃತ್ತಾಕಾರದ ಭೋದುಗೆಯಿರುತ್ತದೆ. ಕಂಭಗಳ ಪಟ್ಟ ಅಥವಾ ಘನಭಾಗಗಳಲ್ಲಿ ಯಾವುದೇ ಅಲಂಕರಣೆಯನ್ನು ಹೊಂದಿರುವದಿಲ್ಲ.

೮. **ಛಜ್ಜ** : ಸಭಾಮಂಟಪವು ಇಳಿಜಾರದ ಛಜ್ಜ ಭಾಗವನ್ನು ಹೊಂದಿದ್ದು ಅಲಂಕರಣೆ ಹಿತವಾಗಿದೆ.

೯. **ಶಿಖರ** : ಗರ್ಭಗೃಹದ ಮೇಲೆ ಜೀರ್ಣೋದ್ಧಾರವಾಗಿರುವ ಇತ್ತೀಚಿನ ಕದಂಬನಾಗರ ಮಾದರಿಯ ಶಿಖರವಿರುತ್ತದೆ.

೧೦. **ನಾಟ್ಯಗ್ರಹ** : ಈ ದೇವಾಲಯ ಪಕ್ಕದಲ್ಲಿ ಪ್ರಾಚಿನ ಗ್ರೀಕ್ ಮಾದರಿಯ, ಸುಮಾರು ೩೦೦ ಜನ ಪ್ರೇಕ್ಷಕರು ಕೂಡ್ರಬಹುದಾದ ನಾಟ್ಯಗ್ರಹ ಇತ್ತು. ಈಗ ಅದು ಶಿಥಿಲಗೊಂಡಿದೆ.

ಜೈನ ಬಸದಿ: ಸಂಕೇಶ್ವರದಲ್ಲಿ ಶೈವ, ವೈಷ್ಣವ ದೇವಾಲಯಗಳಂತೆ ಜೈನಧರ್ಮಿಯ ಬಸದಿಯು ಸಹ ಒಂದಾಗಿದೆ. ಪಟ್ಟಣದ ಸಮೀಪದಲ್ಲಿರುವ ಅಮ್ಮಣಗಿ, ಹುಕ್ಕೇರಿ, ಎಲಿಮುನ್ನೋಳಿ, ಮತ್ತು ಯಮಕನಮರಡಿ, ನೆಲೆಗಳಲ್ಲಿ ಜೈನ ಬಸದಿಗಳು ಕಂಡು ಬರುತ್ತವೆ.

ಸಂಕೇಶ್ವರದಲ್ಲಿಯ ಜೈನ ಧರ್ಮದ ಪಾರ್ಶ್ವನಾಥ ಬಸದಿಯು ಪ್ರಾಚೀನವಾದುದು. ಈ ಬಸದಿಯು ಉತ್ತರಾಭಿಮುಖವಾಗಿದ್ದು, ಮತ್ತು ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ ಕಪ್ಪುಶಿಲೆಯೊಳಗೆ ರಚನೆಗೊಂಡಿರುವದು. ೧೦-೧೧ ನೇ ಶತಮಾನವು ಇದರ ಕಾಲವೆಂದು ಗುರುತಿಸಲಾಗಿದೆ.

೧. **ಗರ್ಭಗೃಹ** : ಈ ಬಸದಿಯ ಗರ್ಭಗೃಹವು ಚೌಕಾಕಾರವಾಗಿದ್ದು ೮' ೪" ಅಡಿ ಉದ್ದಗಲದ ಅಳತೆಯನ್ನು ಹೊಂದಿರುತ್ತದೆ. ಮಧ್ಯದಲ್ಲಿ ೨ ಅಡಿ ಎತ್ತರವಾದ ಪೀಠದ ಮೇಲೆ ೩' ಅಡಿ ಎತ್ತರ ಹಾಗೂ ೧' ೬" ಅಡಿ ಅಗಲವಾಗಿರುವ ಖಡ್ಗಾಸನ ಭಂಗಿಯಲ್ಲಿರುವ ಪಾರ್ಶ್ವನಾಥ ವಿಗ್ರಹವಿರುತ್ತದೆ. ಪಾರ್ಶ್ವನಾಥನ ಹಿಂಬಾಗದಲ್ಲಿ ಅಡಿಯಿಂದ ಮುಡಿಯವರೆಗಿನ ೭ ಹೆಡೆಯ

ಸರ್ಪವಿದ್ದು ಸರ್ಪದ ತಲೆಯ ಮೇಲೆ ಕೊಡೆಯಾಕಾರದ ಕೆತ್ತನೆಯನ್ನು ಕಾಣಬಹುದು. ಕಾಲಬಳಿಯಲ್ಲಿ ಯಕ್ಷ-ಯಕ್ಷಿಯರ ವಿಗ್ರಹಗಳಿರುತ್ತವೆ. ಪಾರ್ಶ್ವನಾಥನ ತಲೆಯ ಹತ್ತಿರ ಚೌರಿಗಳನ್ನು ಸಹ ಕಾಣಬಹುದು. ಗರ್ಭಗೃಹದ ಒಳಗೋಡೆಗಳು ಸಮಪಾತಳಿಯಲ್ಲಿದ್ದು ಅಲಂಕರಣೆಯಿಚಿದ ಕೂಡಿವೆ. ಮೂಲೆಗಳಲ್ಲಿ ಮೂಲೆಗಂಭಗಳಿರುತ್ತವೆ. ಛತ್ತು ಅಷ್ಟಕೋನಾಕೃತಿಯಾಗಿದ್ದು. ಮಧ್ಯದಲ್ಲಿ ಪದ್ಮದ ಕೆತ್ತನೆಯಿರುತ್ತದೆ. ಗರ್ಭಗೃಹದಲ್ಲಿರುವ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ಹಾಳಾದ ಸ್ಥಿತಿಯಲ್ಲಿರುವ ಶಾಸನದ ಗುರುತುಗಳನ್ನು ಕಾಣಬಹುದು. ಗರ್ಭಗೃಹದ ದ್ವಾರಬಾಗಿಲು ೭' ೨" ಅಡಿ ಎತ್ತರವಾಗಿದ್ದು, ೩' ೪" ಅಡಿ ಅಗಲವಾಗಿರುತ್ತದೆ. ದ್ವಾರವು ೫ ಶಾಖೆಗಳನ್ನು ಹೊಂದಿದ್ದು ದ್ವಾರ ಮೇಲ್ಭಾಗದಲ್ಲಿ ೫ ದ್ರಾವಿಡ ಶಿಖರದ ಮಾದರಿಗಳ ಪ್ರತಿಕೃತಿಗಳನ್ನು ಕೆತ್ತಲಾಗಿರುತ್ತದೆ. ಲಲಾಟಬಿಂಬದಲ್ಲಿ ಖಡ್ಗಾಸನ ಭಂಗಿಯಲ್ಲಿರುವ ಜಿನನ ವಿಗ್ರಹ ಕೆತ್ತನೆಯಿದೆ.

೨. **ಅಂತರಾಳ** : ಅಂತರಾಳವು ಚೌಕಾಕಾರವಾಗಿದ್ದು ೬' ೧೦" ಅಡಿ ಉದ್ದಗಲದ ಅಳತೆಯನ್ನು ಹೊಂದಿರುತ್ತದೆ. ಗೋಡೆಗಳು ನಿರಾಲಂಕಾರವಾಗಿದ್ದು ಛತ್ತು ಅಷ್ಟ ಕೋನಾಕೃತಿಯದಾಗಿದ್ದು ಮಧ್ಯದಲ್ಲಿ ಪದ್ಮದ ಕೆತ್ತನೆಯನ್ನು ಹೊಂದಿರುತ್ತದೆ. ಅಂತರಾಳದ ದ್ವಾರವು ೬' ೧೦" ಅಡಿ ಎತ್ತರ ೩' ೪" ಅಡಿ ಅಗಲಳತೆಯನ್ನು ಹೊಂದಿದ್ದು ಲಲಾಟಬಿಂಬದಲ್ಲಿ ಖಡ್ಗಾಸನದಲ್ಲಿರುವ ಜಿನವಿಗ್ರಹವಿದೆ. ದ್ವಾರದ ಮೇಲ್ಭಾಗದಲ್ಲಿ ದ್ರಾವಿಡ ಮಾದರಿಯ ಶಿಖರದ ಪ್ರತಿಕೃತಿಗಳ ಕೆತ್ತನೆಯನ್ನು ಕಾಣಬಹುದು. ದ್ವಾರವು ೨ ಶಾಖೆಗಳಲ್ಲಿ ಹೊಂದಿದ್ದು ದ್ವಾರದ ಆಚೇಗೆ ಜಾಲಂದ್ರಗಳಿವೆ.

೩. **ಸಭಾಮಂಟಪ** : ಅಂತರಾಳಕ್ಕೆ ಹೊಂದಿಕೊಂಡಂತೆ ಮುಂದೆ ೨೨' ೪" ಅಡಿ ಉದ್ದಗಲದ ಅಳತೆಯನ್ನು ಹೊಂದಿರುವ ವಿಶಾಲವಾದ ಚೌಕಾಕಾರದ ಸಭಾಮಂಟಪವಿರುತ್ತದೆ. ಸಭಾಮಂಟಪದ ಮಧ್ಯದಲ್ಲಿ ಎತ್ತರ ಭಾಗವಿದ್ದು ಸುತ್ತಲೂ ೪ ಕಂಭಗಳಿದ್ದು ೬' ೧೦" ಅಡಿ ಎತ್ತರ ಮತ್ತು ೧' ೬" ಅಡಿ ಅಗಲವಾಗಿರುತ್ತವೆ. ಕಂಭಗಳು ಕೆಳಭಾಗದಿಂದ ಮೇಲಕ್ಕೆ ಕ್ರಮವಾಗಿ ಚೌಕಾಕಾರದ ತೆಳ್ಳನೆಯ ಪೀಠ, ಚೌಕಾಕಾರದ ಘನಭಾಗ, ಅಷ್ಟಕೋನಾಕೃತಿಯ ಪಟ್ಟಿಕೆ, ವೃತ್ತಾಕಾರದ ಪಟ್ಟಿಕೆ, ಅಷ್ಟಕೋನಾಕಾರದ ಪಟ್ಟಿಕೆ, ವೃತ್ತಾಕಾರದ ಘನಭಾಗ, ವೃತ್ತಾಕಾರದ ಅಗಲವಾದ ಪಟ್ಟಿಕೆ

ಆಯತಾಕಾರದ ಘನಭಾಗ, ಅಷ್ಟಕೋನಾಕೃತಿಯ ಪಟ್ಟಿಕೆ, ವೃತ್ತಾಕಾರದ ಘನಭಾಗ, ವೃತ್ತಾಕಾರದ ಅಗಲವಾದ ಚಪ್ಪಟೆಯ ಭಾಗ ಮತ್ತು ಮೇಲ್ಭಾಗದಲ್ಲಿ ಅಗಲವಾದ ವೃತ್ತಾಕಾರದ ಮುಚ್ಚಳಿಕೆಯ ಭಾಗಗಳನ್ನು ಹೊಂದಿರುತ್ತವೆ. ಕಂಭಗಳ ಅಷ್ಟಕೋನಾಕೃತಿಯ ಪಟ್ಟಿಕೆಗಳು, ಆಯತಾಕಾರದ ಘನಭಾಗ ಮತ್ತು ವೃತ್ತಾಕಾರದ ಘನಭಾಗಗಳಲ್ಲಿ ಲತಾ ಸುರುಳಿಗಳು ಮುತ್ತಿನ ಸರ ಮುಂತಾದ ಅಲಂಕಾರಿನ ಕೆತ್ತನೆ ಹೊಂದಿರುತ್ತವೆ.

ಸಭಾಮಂಟಪದಲ್ಲಿ ಖಡ್ಗಾಸನ ಭಂಗಿಯಲ್ಲಿರುವ ಎರಡು ಜಿನ ವಿಗ್ರಹಗಳಿರುತ್ತವೆ. ಬಲಬದಿಯ ವಿಗ್ರಹವು ಪಾರ್ಶ್ವನಾಥನ ವಿಗ್ರಹವಾಗಿದ್ದು ಖಡ್ಗಾಸನ ಭಂಗಿಯಲ್ಲಿದ್ದು ೪' ೪" ಅಡಿ ಎತ್ತರ ೧' ೮" ಅಡಿ ಅಗಲವಾಗಿವೆ. ಪಾರ್ಶ್ವನಾಥನ ಹಿಂದೆ ಏಳು ಹೆಡೆಯ ಸರ್ಪವಿದ್ದು ಅದರ ಮೇಲೆ ಛತ್ರದ ಕೆತ್ತನೆಯನ್ನು ಕಾಣಬಹುದು. ಪಾರ್ಶ್ವನಾಥನ ಶಿರದ ಹಿಂಭಾಗದಲ್ಲಿ ಪ್ರಭಾವಳಿಯಿದ್ದು ಕಾಲಬಳಿಯಲ್ಲಿ ಸುಖಾಸನ ಭಂಗಿಯಲ್ಲಿರುವ ಯಕ್ಷಯಕ್ಷಿಯರ ಚಿಕ್ಕ ಮೂರ್ತಿಗಳಿವೆ.

ಎಡಗಡೆಯ ಜಿನವಿಗ್ರಹವು ೨' ೧೦" ಅಡಿ ಎತ್ತರ, ೧ ಅಡಿ ಅಗಲವಾಗಿದ್ದು ಖಡ್ಗಾಸನ ಭಂಗಿಯಲ್ಲಿರುತ್ತದೆ. ಕಾಲ ಬಳಿಯಲ್ಲಿ ಸುಖಾಸನ ಭಂಗಿಯಿರುವ ಯಕ್ಷ-ಯಕ್ಷಿಯರ ವಿಗ್ರಹಗಳಿರುತ್ತವೆ. ಈ ವಿಗ್ರಹದ ಪೀಠದ ಮೇಲೆ ಹಾಳಾದ ಸ್ಥಿತಿಯಲ್ಲಿರುವ ಶಾಸನವಿರುವದು. ಈ ವಿಗ್ರಹದ ಕಾಲುಗಳ ಅಡಿಯಲ್ಲಿ ಚಿಗರೆಯ ಕೆತ್ತನೆಯಿದೆ.

ಸಭಾ ಮಂಟಪದ ಒಳಗೋಡೆಗಳಲ್ಲಿ ೨ ಕೋಷ್ಟಕಗಳಿದ್ದು ಅವು ಬರಿದಾಗಿರುತ್ತವೆ. ಕೋಷ್ಟಕಗಳ ಮೇಲೆ ದ್ರಾವಿಡ ಮಾದರಿಯ ಶಿಖರಗಳ ಪ್ರತಿಕೃತಿಯ ಕೆತ್ತನೆಯನ್ನು ಕಾಣುತ್ತೇವೆ. ಸಭಾಮಂಟಪದ ಛತ್ತು ಅಷ್ಟಕೋನಾಕೃತಿಯದಾಗಿರುತ್ತದೆ. ಸಭಾಮಂಟಪದ ದ್ವಾರವು ಮಕರ ತೋರಣ ಅಲಂಕರಣೆಯನ್ನು ಹೊಂದಿರುತ್ತದೆ.

೪. **ಮುಖಮಂಟಪ** : ಮುಖಮಂಟಪವು ಸಭಾ ಮಂಟಪಕ್ಕೆ ಹೊಂದಿಕೊಂಡಂತೆ ಇದ್ದು ೧೫' ೮" ಅಡಿ ಉದ್ದ, ೨೧' ೬" ಅಡಿ ಅಗಲವಾಗಿದ್ದು ಆಯಾತಕಾರದಾಗಿರುತ್ತದೆ. ಕಂಭಗಳು ೪ ಇದ್ದು ೬' ಅಡಿ ಎತ್ತರ ೧' ೬" ಅಡಿ ಅಗಲವಾಗಿದ್ದು ಆಯತಾಕಾರದಾಗಿರುತ್ತದೆ. ಸಭಾ ಮಂಟಪದಲ್ಲಿರುವ ಕಂಭಗಳಲ್ಲಿರುವ ಭಾಗಗಳನ್ನೇ ಹೊಂದಿದ್ದು ಅಲಂಕರಣೆಯಲ್ಲಿ ಸಹ ಅದೇ ರೀತಿಯವಾಗಿರುತ್ತವೆ. ಈ ಮುಖಮಂಟಪವು ಇತ್ತಿಚಿಗೆ

ಜೀರ್ಣೋದ್ಧಾರಗೊಂಡಿದ್ದು ಇದರ ಮುಂದೆ ಇತ್ತೀಚಿಗೆ ನಿರ್ಮಿಸಿದ ಮಾನಸ್ತಂಭವಿದೆ.

೫. **ಅಧಿಷ್ಠಾನ** : ಈ ಬಸದಿಯ ಅಧಿಷ್ಠಾನವು ೩' ೬" ಅಡಿ ಎತ್ತರವಾಗಿದ್ದು ಉಪಾನ, ಗಳ, ವೃತ್ತಾಕಾರದ ಪಟ್ಟಿ, ಕಂಠ ಮತ್ತು ಕಪೋತ ಭಾಗಗಳನ್ನು ಹೊಂದಿರುತ್ತದೆ. ಬಲಬದಿಯ ಗೋಡೆಯು ಅದಿಷ್ಠಾನವು ಉಪಾನ, ತ್ರಿಪಟ್ಟ, ಕುಮುದ, ಕಂಠ ಮತ್ತು ಕಪೋತ ಭಾಗ ಹೊಂದಿರುತ್ತದೆ. ಅಧಿಷ್ಠಾನದ ಉಪಾನ ಭಾಗದಲ್ಲಿ ಚಿಕ್ಕ ರೇಖಾನಾಗರ ಮಾದರಿಯ ಶಿಖರಗಳ ಪ್ರತಿಕೃತಿಗಳ ಕೆತ್ತನೆಯನ್ನು ಕಾಣಬಹುದು.

೬. **ಗೋಡೆಗಳು** : ಪಾರ್ಶ್ವನಾಥ ಬಸದಿಯ ಹೊರಗೋಡೆಗಳು ಹಿಂಬಣೆ ಮತ್ತು ಮುಂಬಣೆಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ಅಲಂಕಾರರಹಿತವಾದ ಚಿಕ್ಕ ಮತ್ತು ದೊಡ್ಡ ಸ್ತಂಭಗಳ ಕೆತ್ತನೆಯನ್ನು ಕಾಣುತ್ತೇವೆ. ಗೋಡೆಗಳು ಸ್ವಲ್ಪ ಶಿಥಿಲತೆಯ ಅಂಚಿನಲ್ಲಿರುವದು ಕಂಡು ಬರುತ್ತದೆ.

೭. **ಭುವನೇಶ್ವರಿ** : ಈ ಬಸದಿಯ ಗರ್ಭಗೃಹ, ಅಂತರಾಳ, ಸಭಾಮಂಟಪಗಳ ಛತ್ತಿಸಲ್ಲಿ ಅಷ್ಟಕೋನದ ಕೆತ್ತನೆ ಇದ್ದು, ಮಧ್ಯದಲ್ಲಿ ಪದ್ಮದ ಅಲಂಕರಣೆಯನ್ನು ಕಾಣಬಹುದು.

೮. **ಶಿಖರ** : ಗರ್ಭಗೃಹ ಮೇಲಿನ ಶಿಖರವು ಹಾಳಾಗಿರುತ್ತದೆ.

ಈ ಬಸದಿಯ ಛಜ್ಜ ಭಾಗವು ಇಳಿಜಾರಾಗಿದ್ದು ಅಲಂಕಾರರಹಿತವಾಗಿರುತ್ತದೆ. ಬಸದಿಯ ಸುತ್ತ ಪ್ರಾಕಾರ ಗೋಡೆಯಿರುತ್ತದೆ.

ಮೂರ್ತಿ ಶಿಲ್ಪಗಳು : ಮೂರ್ತಿ ಶಿಲ್ಪಕಲೆಯು ಅತ್ಯಂತ ಪ್ರಾಚೀನವಾದ ಕಲೆ. ಇದು ದೇವಾಲಯ ವಾಸ್ತುಶಿಲ್ಪಕ್ಕೆ ಪೂರಕವಾದ ಒಂದು ಕಲೆಯಾಗಿ ಬೆಳದು ಬಂದಿರುವುದನ್ನು ಕಾಣಬಹುದು. ದೇವರಿಗಾಗಿ ಆಲಯಗಳನ್ನು ನಿರ್ಮಿಸಿದರೆ ದೇವರುಗಳ ಕಲ್ಪನೆಗೆ ಸಾಂಕೇತಿಕವಾದ ಸ್ವರೂಪವನ್ನು ಕೊಡಲು ಮೂರ್ತಿಶಿಲ್ಪವು ಪ್ರಯತ್ನಿಸಿತು. ಮುಖ್ಯವಾಗಿ ಧಾರ್ಮಿಕ ಶ್ರದ್ಧೆಯೇ ಮೂರ್ತಿ ಶಿಲ್ಪಕ್ಕೆ ಮೂಲಭೂತ ಪ್ರೇರಣೆಯಾಗಿ ಪರಿಣಮಿಸಿತು.

ಲಕ್ಷ್ಮೀನಾರಾಯಣಮೂರ್ತಿ: ಸಂಕೇಶ್ವರದಲ್ಲಿನ ಲಕ್ಷ್ಮೀನಾರಾಯಣ ಮೂರ್ತಿಯು ಪೂರ್ವಾಭಿಮುಖವಾಗಿರುವ ಲಕ್ಷ್ಮೀನಾರಾಯಣ ದೇವಾಲಯದ ಗರ್ಭಗೃಹದಲ್ಲಿರುತ್ತದೆ. ಲಕ್ಷ್ಮೀನಾರಾಯಣ ವಿಗ್ರಹವು ೨' ೧೦" ಅಡಿ ಎತ್ತರ ಮತ್ತು

೧' ೬" ಅಡಿ ಅಗಲವಾಗಿರುತ್ತವೆ. ಲಕ್ಷ್ಮೀನಾರಾಯಣನ ನಿಂತ ಭಂಗಿಯಲ್ಲಿದ್ದು ಚತುರ್ಭುಜನಾಗಿದ್ದಾನೆ. ಬಲಬಂದಿಯ ಮೇಲಿನ ಕೈಯಲ್ಲಿ ಮತ್ತು ಕೆಳಗಿನ ಕೈಯಲ್ಲಿ ಸರ್ಪವಿರುತ್ತದೆ. ಎಡಬದಿಯ ಮೇಲಿನ ಕೈಯಲ್ಲಿ ಗದೆಯನ್ನು ಹಿಡಿದುಕೊಂಡಿದ್ದು, ಕೆಳಗಿನ ಕೈಯಲ್ಲಿ ಕಮಲವನ್ನು ಹಿಡಿದುಕೊಂಡಿದ್ದಾನೆ. ತಲೆಯಮೇಲೆ ಕಿರಿಟ, ಕೊರಳಹಾರ, ತುಳಿಸಿಮಾಲೆ, ಕಾಲ್ಡಡಗ, ಕೈಗಡಗ, ತೋಳಬಂದಿ ಹಾಗೂ ನಡುಪಟ್ಟಿಕೆಗಳನ್ನು ಧರಿಸಿರುತ್ತಾನೆ.

ಲಕ್ಷ್ಮೀನಾರಾಯಣ ಮೂರ್ತಿಯ ಕಾಲುಗಳ ಬದಿಯಲ್ಲಿ ಎಡ ಮತ್ತು ಬಲಬದಿಯಲ್ಲಿ ಭೂದೇವಿ ಮತ್ತು ಶ್ರೀದೇವಿಯರ ಚಿಕ್ಕ ವಿಗ್ರಹಗಳಿವೆ.

ಶಾಸನಸುಂದರಿ: ಲಕ್ಷ್ಮೀನಾರಾಯಣ ದೇವಾಲಯದ ಹೊರ ಗೋಡೆಗಳಲ್ಲಿ ಹಿಂಬಣೆ ಮತ್ತು ಮುಂಬಣೆಗಳಿಂದ ಕೂಡಿದ್ದು ಅವುಗಳಲ್ಲಿ ಮೂರ್ತಿಶಿಲ್ಪಗಳ ಅಲಂಕರಣೆ ಇರುತ್ತದೆ. ಇಲ್ಲಿನ ಮೂರ್ತಿ ಶಿಲ್ಪಿಗಳು ನಾಜೂಕು ಮತ್ತು ನಯನಮನೋಹರವಾಗಿದ್ದು ನಮ್ಮನ್ನು ಬೇಲೂರು ಹಳೆಬೀಡಿನ ಶಿಲ್ಪಗಳನ್ನು ನೆನೆಯುವಂತೆ ಮಾಡುತ್ತವೆ.

ಲಕ್ಷ್ಮೀನಾರಾಯಣ ದೇವಾಲಯದ ದಕ್ಷಿಣ ಭಾಗದ ಹೋರಗೋಡೆಯಲ್ಲಿ ಈ ಶಾಸನ ಸುಂದರಿಯ ಮೂರ್ತಿಯನ್ನು ಕಂಡರಿಸಲಾಗುತ್ತದೆ. ಈ ಶಿಲಾಬಾಲಿಕೆಯರು ತ್ರಿಭಂಗಿಯಲ್ಲಿ ನಿಂತು ಕೈಯತ್ತಿ ಕಡತವನ್ನು ಬಿಚ್ಚಿ ಬರೆಯುವ ಭಂಗಿಯಲ್ಲಿದ್ದಾಳೆ. ಅದರಲ್ಲಿನ ಮೂರುವರೆ ಸಾಲುಗಳನ್ನು 'ಕುಲಹೀನಸ್ಯ ಕರ್ಮಹಿನಸ್ಸನ ಪೂಜಯಂತೆ' ಎಂದು ಗುರುತಿಸಲಾಗಿದೆ. ಈ ಶಿಲಾಬಾಲಿಕೆಯ ಕೈಯಲ್ಲಿ ಕೈಗಡಗ ಮತ್ತು ಕಾಲಲ್ಲಿ ಕಾಲ್ಗಡಗಳನ್ನು ಹೊಂದಿರುತ್ತಾನೆ. ಮೊದಲು ಬೀದರದ ಜಲಸಾಂಗ್ವಿಯಾದಲ್ಲಿ ದೊರೆತ ಶಿಲಾಬಾಲಿಕೆಯೊಂದೆ ಎಂದು ನಂಬಲಾಗಿತ್ತು. ಇದು ಕರ್ನಾಟಕದಲ್ಲಿ ದೊರೆತ ೨ನೇ ಅಪರೂಪದ ಬರೆಯುವ ಶಿಲಾಬಾಲಿಕೆಯೆಂದು ಪ್ರಸಿದ್ಧಿಪಡೆದಿದೆ.

ಕೊಳಲೂದುತ್ತಿರುವಕೃಷ್ಣ: ಈ ಮೂರ್ತಿಯು ಸುಮಾರು ೨ ಅಡಿ ಎತ್ತರವಾಗಿದ್ದು ತ್ರಿಭಂಗಿಯಲ್ಲಿರುತ್ತದೆ. ಈ ಶಿಲ್ಪವನ್ನು ಲಕ್ಷ್ಮೀನಾರಾಯಣ ದೇವಾಲಯದ ಉತ್ತರಬದಿಯ ಗೋಡೆಯಲ್ಲಿ ಕೆತ್ತಲಾಗಿದೆ. ಎರಡು ಕೈಗಳು ಹೊಂದಿರುವ ಕೃಷ್ಣನು ಎರಡೂ ಕೈಗಳಿಮದ ಕೊಳಲನ್ನು ಹಿಡಿದು ಊದುತ್ತಿದ್ದಾನೆ. ತಲೆಗೆ ಹಣೆಕಟ್ಟು ಕಟ್ಟಿದ್ದು ಮೇಲೆ ತುರಾಯಿಯನ್ನು ಕಾಣಬಹುದು. ಕಿವಿಗಳಲ್ಲಿ ಕಿವಿಯೋಲೆ, ಕೊರಳಲ್ಲಿ ಕಂಠಹಾರ, ಮಣಿಸರವನ್ನು ಧರಿಸಿದ್ದಾನೆ. ನಡುವಿಗೆ ಸೊಂಟಪಟ್ಟಿಯನ್ನು ಕಟ್ಟಲಾಗಿರುತ್ತದೆ. ಎಡಗಾಲನ್ನು ಸಂಪೂರ್ಣವಾಗಿ ನೆಲಕ್ಕೆ ಊರಿದ್ದು ಬಲಗಾಲನ್ನು

ಅರ್ಧಲಾಗಿಟ್ಟು ಸ್ವಲ್ಪ ಮಡಿಚಿದ್ದು ಕಾಲ್ಬೆರಳುಗಳನ್ನು ಮಾತ್ರ ನೆಲಕ್ಕೆ ಹಚ್ಚಿದ್ದಾನೆ. ಕಾಲ್ಗಳಲ್ಲಿ ಕಾಲ್ಗಡಗ ಮತ್ತು ಕೈಗಳಲ್ಲಿ ಕೈಗಡಗ ಹಾಗೂ ಇವನ ತೊಳುಗಳಲ್ಲಿ ತೋಳ್ಬಂದಿಯನ್ನು ಕಾಣಬಹುದು. ಇವನು ಪ್ರಣಯ ಭಂಗಿಯಲ್ಲಿ ಮುರುಳಿ ನುಡಿಸುತ್ತಿದ್ದಂತೆ ತೋರುತ್ತದೆ.

ವಿಷ್ಣುನಾರಾಯಣ: ಇದು ಸಂಕೇಶ್ವರದ ಶಂಕರಲಿಂಗ ದೇವಾಯಲದ ನವರಂಗದ ಒಂದು ಗೂಡು ಅಥವಾ ಮಾಡಿನಲ್ಲಿರುತ್ತದೆ. ಈ ವಿಗ್ರಹವು ನಿಂತ ಭಂಗಿಯಲ್ಲಿದ್ದು ವಿಷ್ಣುನಾರಾಯಣನು ಚತುರ್ಭುಜನಾಗಿದ್ದಾನೆ. ಬಲಬದಿಯ ಮೇಲಿನ ಕೈಯಲ್ಲಿ ಪದ್ಮವನ್ನು ಹಿಡಿದಿದ್ದಾನೆ. ಕೆಳಗಿನ ಕೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಮೂರ್ತಿಯ ತಲೆಯ ಮೇಲೆ ಕಿರಿಟವಿದ್ದು ಕೊರಳ ಹಾರ, ಕೈಗಡಗ, ಮತ್ತು ಕಾಲ್ಗಡಗಳಿಂದ ಅಲಂಕೃತನಾಗಿದ್ದಾನೆ.

ಪಾರ್ಶ್ವನಾಥ : ಈ ಮೂರ್ತಿಶಿಲ್ಪವು ಸಂಕೇಶ್ವರದ ಪಾರ್ಶ್ವನಾಥ ಬಸದಿಯ ಸಭಾ ಮಂಟಪದ ಬಲಬದಿಯಲ್ಲಿ ಇರುತ್ತದೆ. ಈ ವಿಗ್ರಹವು ಖಡ್ಗಾಸನ ಭಂಗಿಯಲ್ಲಿದ್ದು ೪' ೪'' ಎತ್ತರ ಹಾಗೂ ೧' ೮'' ಅಗಲವಾಗಿರುತ್ತದೆ. ಸುತ್ತಲೂ ಪ್ರಭಾವಳಿಯನ್ನು ಹೊಂದಿದ್ದು ಮಧ್ಯದಲ್ಲಿ ಕೀರ್ತಿ ಮುಖದ ಅಲಂಕರಣೆಯನ್ನು ಕಾಣಬಹುದು. ಪಾರ್ಶ್ವನಾಥನ ಹಿಂಭಾಗದಲ್ಲಿ ಅಡಿಯಿಂದ ಮುಡಿಯವರೆಗಿನ ೭ ಹೆಡೆಯ ಸರ್ಪವನ್ನು ಕೆತ್ತಲಾಗಿರುತ್ತದೆ. ಪಾರ್ಶ್ವನಾಥನ ಎರಡೂ ಬದಿಗಳಲ್ಲಿ ಸುಖಾಸನ ಭಂಗಿಯಲ್ಲಿರುವ ಯಕ್ಷ-ಯಕ್ಷಿಯರನ್ನು ಕೆತ್ತಲಾಗಿರುತ್ತದೆ. ಪೀಠದ ಮೇಲೆ ಅಸ್ಪಷ್ಟವಾದ ಶಾಸನ ವಿರುತ್ತದೆ.

ಮಠಗಳು : ಪ್ರಾಚೀನ ಕಾಲದಲ್ಲಿ ಮಠಗಳು ತಮ್ಮದೇ ಆದ ಪವಿತ್ರ ಧಾರ್ಮಿಕ ಸಹಿಷ್ಣುತೆಯನ್ನು ಒಳಗೊಂಡಿದ್ದವು. ಸಂಕೇಶ್ವರದ ಸುತ್ತಲಿನ ಪ್ರದೇಶದಲ್ಲಿ ಐತಿಹಾಸಿಕ ಪ್ರಸಿದ್ಧ ಮಠಗಳು ನಿರ್ಮಾಣವಾಗಿರುವದು ಕಂಡು ಬರುತ್ತದೆ.

ಸಂಕೇಶ್ವರದಲ್ಲಿನ ಶಂಕರಲಿಂಗ ಮಠವು ಪವಿತ್ರ ಮತ್ತು ಪ್ರಸಿದ್ಧವಾಗಿದೆ. ಈ ಮಠವು ಕ್ರಿ.ಶ. ೧೫೭೮ ರಲ್ಲಿ ರಚನೆಗೊಂಡಿರುವುದಾಗಿ ತಿಳಿಯುತ್ತದೆ[೧]. ಇದು ಹಿರಣ್ಯಕೇಶಿ ನದಿಯ ದಡದಲ್ಲಿದ್ದು ಪ್ರತಿ ವರ್ಷ ರಥಸಪ್ತಮಿಯ ದಿನದಂದು ರಥೋತ್ಸವ ಜರುಗುತ್ತದೆ. ಈ ಭಾಗದ ಬೃಹತ್ ಗಾತ್ರದ ರಥವಾಗಿದ್ದು ಉತ್ಸವವು ಸುತ್ತಲಿನ ಜನರ ಗಮನ ಸೆಳೆಯುತ್ತದೆ. ೫ ದಿನಗಳವರೆಗೆ ನಿರಂತರ ಜಾತ್ರೆ ನೆರವೇರುತ್ತದೆ.

ಸಂಕೇಶ್ವರದಲ್ಲಿನ ಶ್ರೀ ದುರದುಂಡೇಶ್ವರ ಮಠವು ೧೮ನೇ ಶತಮಾನದಲ್ಲಿ ಸ್ಥಾಪನೆಗೊಂಡಿರುವುದು. ಇದು ವೀರಶೈವ ಸಂಪ್ರದಾಯಕ್ಕೊಳಪಟ್ಟಿದ್ದು. ಪ್ರತಿ ವರ್ಷದ ಶ್ರಾವಣಮಾಸದಲ್ಲಿ ಪಾಲಕಿ ಉತ್ಸವ, ಅನ್ನದಾಸೋಹ ಜರುಗುತ್ತವೆ.

ಸಂಕೇಶ್ವರ ಸಮೀಪದ ನಿಡಸೋಸಿಯಲ್ಲಿ ಶ್ರೀ ದುರದುಂಡೀಶ್ವರ ಸಿದ್ಧ ಸಂಸ್ಥಾನ ಮಠವು ೪೦೦ ವರ್ಷಗಳ ಇತಿಹಾಸವನ್ನು ಹೊಂದಿರುತ್ತದೆ[೨]. ಶ್ರೀ ಮಠಕ್ಕೆ ಅನೇಕ ಸಂಸ್ಥಾನಿಕರು, ಸರದಾರರು ದಾನ ನೀಡಿರುವರು. ಪ್ರಸ್ತುತವಾಗಿ ಜ್ಞಾನ ದಾಸೋಹ ಮತ್ತು ಅನ್ನದಾಸೋಹಗಳಿಂದಾಗಿ ಶ್ರೀಮಠವು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದಲ್ಲಿ ಪ್ರಸಿದ್ಧವಾಗಿದೆ.

ಸಂಕೇಶ್ವರ ಸಮೀಪದ ಕುರಣಿಯಲ್ಲಿ ಗಂಗಾಬಾಯಿ ಮಠವಿರುತ್ತದೆ. ಗಂಗಾಬಾಯಿಯು ಪತಿವೃತೆ ಶಿರೋಮಣಿಯಾಗಿದ್ದಳು. ಆಕೆಯ ಪಾತಿ-ವೃತ್ಯದ ಪ್ರಭಾವವೇ ದೇವತ್ವಕೊಯ್ದು ಮುಟ್ಟಿಸಿ ಕುರಣಿಯನ್ನು ಪುಣ್ಯಮಯ ಭೂಮಿಯನ್ನಾಗಿ ಮಾಡಿದೆ.

ಕೋಟೆಗಳು: ಸಂಕೇಶ್ವರ ಸಮೀಪದ ನೆರ್ಲಿಯಲ್ಲಿ ಬಿಜಾಪೂರದ ಸೇನಾಪತಿಯಾದ ಐನ್-ಉಲ್-ಗಿಲಾನಿಯು ಕ್ರಿ.ಶ. ೧೫೦೩-೪೬ ರಲ್ಲಿ ಬೃಹತ ಕೋಟೆಯನ್ನು ನಿರ್ಮಿಸಿರುವನು. ಅದರಂತೆ ಮರಾಠರ ಶಿವಾಜಿಯ ಆಳ್ವಿಕೆಗೆ ಸಂಬಂಧಿಸಿದಂತೆ ಹರಗಾಪೂರದಲ್ಲಿ ಕೋಟೆ ನಿರ್ಮಾಣಗೊಂಡಿರುವುದು.

ವೀರಗಲ್ಲುಗಳು: 'ವೀರ' ಎಂಬ ಶಿರ್ಷಕೀಯ ಅಡಿಯಲ್ಲಿ ಅನೇಕ ಪ್ರಭೇದಗಳನ್ನು ಕಾಣುತ್ತೇವೆ. ಯುದ್ಧದಲ್ಲಿ ಹೋರಾಡಿ ವೀರರ ಸಾವನ್ನು ಹೇಳುವ ಸ್ಮಾರಕ ಸ್ಥಂಬಗಳೇ ವೀರಗಲ್ಲುಗಳಾಗಿವೆ. ಉದಾತ್ತವಾದ ಉದ್ದೇಶದಿಂದ ಯುದ್ಧದಲ್ಲಿ ಹೋರಾಡಿ ಮಡಿದಿರುವ ವೀರರ ಸ್ಮಾರಕವಾಗಿ ಧಾರ್ಮಿಕ ಮತ್ತು ತಾರ್ಕಿಕ ಆತ್ಮಬಲಿದಾನದಿಂದ ಮುಕ್ತಿದೊರೆಯುವದೆಂಬ ನಂಬಿಕೆ ಇರುತ್ತದೆ. ಇಂತಹ ವೀರಮರಣದಿಂದ ಮುಕ್ತಿದೊರೆಯುವುದೆಂಬ ಮೌಲ್ಯವು ಸಮಾಜದಲ್ಲಿ ಪ್ರಚಾರವಾಗುವದರೊಂದಿಗೆ ವೀರಗಲ್ಲುಗಳು ಹೆಚ್ಚು ರಚನೆಗೊಂಡಿರುತ್ತವೆ. ರಣರಂಗದಲ್ಲಿ ಮಡಿದ ವೀರನ ಶೌರ್ಯದ ಚರಿತ್ರೆಯನ್ನು ಅಚ್ಚಳಿಯದೆ ಜನರ ಮನದಲ್ಲಿ ಉಳಿಯುವಂತೆ ಮಾಡಿದವುಗಳೇ ವೀರಗಲ್ಲುಗಳಾಗಿವೆ. ರಾಜಕೀಯ ಇತಿಹಾಸ ರಚನೆಗೆ ಈ ಸ್ಮಾರಕಗಳು ಸಹಾಯಕವಾಗಿವೆ.

ಸಂಕೇಶ್ವರದಲ್ಲಿನ ಶಂಕರಲಿಂಗ ದೇವಾಲಯದ ಆವರಣದಲ್ಲಿ ಎರಡು ನಶಿಸಿಹೋಗಿರುವ ವೀರಗಲ್ಲುಗಳು ಕಂಡುಬರುತ್ತವೆ. ಇವು ಸಾಮಾನ್ಯವಾದ ಚಿತ್ರಗಳನ್ನು ಒಳಗೊಂಡಿದ್ದು ಯಾವುದೇ ಲಿಪಿಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಇವುಗಳು ಯಾರ ಆಳ್ವಿಕೆಗೆ ಸಂಬಂಧಿಸಿದ್ದು ಎಂಬುದನ್ನು ತಿಳಿಯಲು ಅಸ್ಪಷ್ಟವಾಗಿವೆ.

ಅಡಿ ಟಿಪ್ಪಣಿಗಳು

೧. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೯೦

೨. ಬೆಳಗಂ ಡಿಸ್ಟ್ರಿಕ್ಟ್ ಗೆಝೆಟೀಯರ್ ; ಡಾ. ಸೂರ್ಯನಾಥ ಕಾಮತ ; ೧೯೮೭ ; ಪು.೧೯೩

ಅಧ್ಯಾಯ ೭

ಸಮಾರೋಪ

ಕರ್ನಾಟಕ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಬೆಳಗಾವಿಯು ಐತಿಹಾಸಿಕವಾಗಿದೆ. ರಾಷ್ಟ್ರೀಯ ಹೋರಾಟದಲ್ಲಿ ಬೆಳಗಾವಿಯ ಪಾತ್ರವು ವಿಶಿಷ್ಟವಾಗಿರುವುದು ಕಂಡುಬರುತ್ತದೆ. ಈ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರವು ವಾಣಿಜ್ಯ ನಗರ, ಸಿಹಿ ನಗರ, ಮತ್ತು ಪಟ್ಟಣ ಎಂಬುದಾಗಿದೆ. ಇಲ್ಲಿ ರಾಜಕೀಯವಾಗಿ ಪ್ರಾಚೀನಕಾಲದಿಂದಲೂ ಆಡಳಿತ ನಡೆದಿರುವದು ಕಂಡುಬರುತ್ತದೆ. ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಈ ಭಾಗವು ಬೆಳವಣಿಗೆಗೊಂಡಿರುವುದನ್ನು ತಿಳಿಸಲಾಗಿದೆ.

ಬೆಳಗಾವಿ ಜಿಲ್ಲೆಯು ಕುಹುಂಡಿ ಮೂರು ಸಾವಿರದ ಪ್ರದೇಶವಾಗಿತ್ತು. ಎಂಬುದಾಗಿ ತಿಳಿಯುತ್ತದೆ. ಸಂಕೇಶ್ವರವು ಈ ಮೂರುಸಾವಿರದ ನೆಲೆಯಲ್ಲಿ ಒಂದಾಗಿರುವದು ಕಂಡುಬರುತ್ತದೆ. ಕಲ್ಯಾಣಚಾಳುಕ್ಯರ, ಸವದತ್ತಿಯ ರಟ್ಟರ, ಆಡಳಿತವು ಹೆಚ್ಚಾಗಿ, ಆಗಿರುವುದನ್ನು ಇಲ್ಲಿನ ಶಾಸನಗಳಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇಲ್ಲಿನ ದೇವಾಲಯಗಳ ವಾಸ್ತುಶಿಲ್ಪವು ಮತ್ತು ಕಟ್ಟಡಗಳ ಸ್ವರೂಪವು ಅಧ್ಯಯನದ ನಿದರ್ಶನಗಳಾಗಿವೆ.

ಸ್ವಾತಂತ್ರ್ಯಪೂರ್ವದಲ್ಲಿ ಸಂಕೇಶ್ವರವು ರಾಷ್ಟ್ರಮಟ್ಟದಲ್ಲಿ ಬೆಳೆದಿರುವುದನ್ನು ಈ ಭಾಗದ ಹೋರಾಟಗಾರರಾದ ಅಪ್ಪಣ್ಣಗೌಡ ಪಾಟೀಲ ಮತ್ತು ಎಂ. ಪಿ. ಪಾಟೀಲರ ಚರಿತ್ರೆಯಿಂದ ತಿಳಿಯುತ್ತದೆ. ಇವರು ರಾಷ್ಟ್ರೀಯ ಚಳುವಳಿ ಮತ್ತು ಹೋರಾಟಗಳಲ್ಲಿ ಭಾಗವಹಿಸಿರುವದು ಕಂಡುಬರುತ್ತದೆ. ಈ ಭಾಗದ ಜನತೆಗೆ ಸ್ವಾತಂತ್ರ್ಯದ ಕಿಚ್ಚನ್ನು ಇವರು ಮನವರಿಕೆಯಾಗಿ ತಿಳಿಸಿ ಹೋರಾಟಕ್ಕೆ ಸಿದ್ಧಗೊಳಿಸಿದರು. ಈ ಸಂಘಟಣೆಯಿಂದ ಬೆಳಗಾವಿಯ ಐತಿಹಾಸಿಕವಾದ ಗಾಂಧೀಜಿ ಮುಖಂಡತ್ವದ ೧೯೨೪ ರ ಕಾಂಗ್ರೇಸ ಅಧಿವೇಶನದಲ್ಲಿ ಈ ಭಾಗದಲ್ಲಿನ ಅಸಂಖ್ಯ ಜನರನ್ನು ಕರೆದುಕೊಂಡು ಹೋಗಿ ಭಾಗವಹಿಸಿರುವದು ಕಂಡುಬರುತ್ತದೆ. ಸ್ವಾತಂತ್ರ್ಯ ಹೋರಾಟದ ಜೊತೆಗೆ ಈ ಭಾಗದ ಜನರಿಗೆ ಸಹಕಾರಿ ಯೋಜನೆಗಳನ್ನು ಅನುಸರಿಸಿರುವದು ತಿಳಿಯುತ್ತದೆ.

ಅಪ್ಪಣ್ಣಗೌಡರು ಮತ್ತು ಎಂ. ಪಿ. ಪಾಟೀಲರು ಈ ಭಾಗದ ಮಂತ್ರಿ ಹಾಗೂ ಶಾಸಕರಾಗಿ ಸಾಧನೆಗೈದಿರುವ ಪ್ರತಿತಿಯನ್ನು ವಿವರಿಸಲಾಗಿದೆ. ಅಷ್ಟೇ ಅಲ್ಲದೇ ಸಹಕಾರ ಕ್ಷೇತ್ರದಲ್ಲಿ ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಸಮಿತಿ, ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರಖಾನೆ ಮತ್ತು ಸಹಕಾರಿ ಗ್ರಾಮೀಣ ವಿದ್ಯುತ್ ಸಂಸ್ಥೆಗಳನ್ನು ಸ್ಥಾಪಿಸಿ ಸುತ್ತಲಿನ ಜನರಿಗೆ ಅನುಕೂಲವಾಗುವಂತೆ ಒದಗಿಸಿಕೊಟ್ಟರು. ಕೃಷಿಕರ

ಹಿತೈಷಿಯಾಗಿ ನೀರಾವರಿಯ ಸೌಲಭ್ಯವನ್ನು ಒದಗಿಸಿ ಉತ್ತಮ ಬೆಳೆಗಳನ್ನು ಬೆಳೆಯಲಿಕ್ಕೆ ಪ್ರೋತ್ಸಾಹಿಸಿದರು. ರೈತರಿಗೆ ಆರ್ಥಿಕ ಸಹಾಯ ನೀಡುವುದಕ್ಕಾಗಿ ಸಹಕಾರಿ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಿದರು. ಈ ಸಂಸ್ಥೆಗಳು ರೈತರ, ಕಾರ್ಮಿಕರ, ಬೆನ್ನೆಲುಬುಗಳಾಗಿರುವುದನ್ನು ಇವತ್ತಿಗೂ ಕಾಣುವುದಾಗಿದೆ. ಹೀಗೆ ಈ ಭಾಗದಲ್ಲಿ ಅನೇಕ ರೀತಿಯ ಸುಧಾರಣೆಗಳನ್ನು ಕೈಗೊಂಡು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಿರುವರು.

ಸಂಕೇಶ್ವರದ ಸಾಂಸ್ಕೃತಿಕತೆಯು ವಿಭಿನ್ನವಾಗಿದ್ದು ಅದನ್ನು ವರ್ಣನಾತ್ಮಕವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಾಚೀನ ಚತುರ್ವರ್ಣ ಪದ್ಧತಿಯನ್ನು ಸಮಾಜವು ರಚನೆಗೊಂಡಿರುತ್ತದೆ. ಅನೇಕ ಉತ್ಸವ ಮತ್ತು ಹಬ್ಬಗಳನ್ನು ವಿಜೃಂಭನೆಯಿಂದ ಆಚರಿಸುತ್ತಿರುವುದು ಕಂಡುಬರುತ್ತದೆ. ಎಲ್ಲ ಧರ್ಮಿಯರು ಸೇರಿಕೊಂಡು ಇಂತಹ ಉತ್ಸವಗಳಲ್ಲಿ ಭಾಗವಹಿಸಿರುವುದು ತಿಳಿಯುತ್ತದೆ.

ಸಂಕೇಶ್ವರದಲ್ಲಿ ರಚನೆಗೊಂಡಿರುವ ದೇವಾಲಯಗಳು, ಮಠಗಳು, ಬಸದಿಗಳು, ಕೋಟೆಗಳು, ಪ್ರಾಚೀನ ವೈಭವದ ಸಂಕೇತಗಳಾಗಿವೆ. ಶೈವ, ವೈಷ್ಣವ, ಪಂಥದ ದೇವಾಲಯಗಳು ನಿರ್ಮಾಣಗೊಂಡಿರುವವು. ಶಂಕರಲಿಂಗ ದೇವಾಲಯವು ಶೈವ ಪಂಥಕ್ಕೆ ಸೇರಿದ್ದು, ಲಕ್ಷ್ಮೀನಾರಾಯಣ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿರುವುದನ್ನು ಸಮರ್ಥಿಸಿಕೊಂಡು ವಿಶ್ಲೇಶನೆಯನ್ನು ನೀಡಲಾಗಿದೆ. ಅಂದಿನ ಸೂಕ್ಷ್ಮ ಕೆತ್ತನೆಯ ಕೆಲಸವನ್ನು ಮೂರ್ತಿಶಿಲ್ಪಗಳಲ್ಲಿ ಕಾಣುತ್ತೇವೆ. ಇವು ನೈಜ ವಾಸ್ತವಿಕ ಅಂಶಗಳನ್ನೊಳಗೊಂಡು ನಿರ್ಮಾಣಗೊಂಡಿರುತ್ತವೆ.

ಹೀಗೆ ಸಂಕೇಶ್ವರ ; ಚಾರಿತ್ರಿಕ ಅಧ್ಯಯನದಿಂದ ದೊರೆತ ಆಧಾರದ ಮಾಹಿತಿಗಳ ಮೂಲಕ ಹೆಚ್ಚಾಗಿ ಕಂಡುಬಂದಿರುತ್ತವೆ. ಇವುಗಳ ಆಧಾರವಾಗಿ ಇಲ್ಲಿನ ಸ್ಪಷ್ಟ ಐತಿಹಾಸಿಕತೆಯ ಚಿತ್ರಣವನ್ನು ವಿವರಣಾತ್ಮಕವಾಗಿ ನೀಡಲಾಗಿರುತ್ತದೆ.

ಹೀಗೆ ಮೂಲತಃ ಕ್ಷೇತ್ರಕಾರ್ಯವನ್ನೊಳಗೊಂಡು ರಚಿತ ಪ್ರಬಂಧವಾಗಿದೆ. ಈ ಪಟ್ಟಣದ ಭೌಗೋಳಿಕ ಪರಿಸರವನ್ನು ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಸಲಾಗಿದೆ. ಇಲ್ಲಿ ಆಳ್ವಿಕೆ ನಡೆಸಿದ ಚಾಳುಕ್ಯರು, ರಟ್ಟರು, ಯಾದವರು, ಸುಲ್ತಾನರು, ಆದಿಲಶಾಹಿಗಳು, ಮರಾಠರ ಪ್ರಭಾವವನ್ನು ದೊರೆತಿರುವ ಶಾಸನಗಳ ಹಾಗೂ ಮಾಹಿತಿಯ ಸಂಗ್ರಹಣೆಯಿಂದ ಅಧ್ಯಯನಿಸಲಾಗಿದೆ.

ಸ್ವಾತಂತ್ರ್ಯಪೂರ್ವದಿಂದಲೂ ಸಂಕೇಶ್ವರವು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳಲ್ಲಿ ಗುರ್ತಿಸಿಕೊಂಡಿರುವದು. ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರಾದ ಅಪ್ಪಣ್ಣಗೌಡ ಪಾಟೀಲ, ಎಂ. ಪಿ. ಪಾಟೀಲ, ಮಹದೇವಪ್ಪಾ

ಮೆಂಡಗುದ್ಲಿ ಇವತ್ತು ನಮ್ಮೊಂದಿಗೆ ಇರುವ ಶತಾಯೂಷಿ ಶಿವಪ್ಪಣ್ಣ ಗುಂಡಾಳಿ ಇವರೆಲ್ಲರ ಕೆಚ್ಚೆದೆಯ ಹೋರಾಟದ ಪ್ರಸಂಗಗಳನ್ನು ಸಮರ್ಥಿಸಿ ವಿವರಿಸಲಾಗಿದೆ. ಈ ರಾಷ್ಟ್ರೀಯ ಹೋರಾಟದಲ್ಲಿ ಗಾಂಧಿಜಿಯವರ ಕರೆಗೆ ಈ ಭಾಗದ ಸುತ್ತಲಿನ ಜನರನ್ನು ಸಂಘಟಿಸಿ ಚಳುವಳಿ ಮತ್ತು ಸತ್ಯಾಗ್ರಹ ಕೈಗೊಂಡಿರುವ ವಿವರಣೆಯನ್ನು ವರ್ಣಿಸಲಾಗಿದೆ.

ಸಾಂಸ್ಕೃತಿಕವಾಗಿ ಸಂಕೇಶ್ವರವು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಮಹತ್ತರವಾದ ಸಾಧನೆ ಹಾಗೂ ಸುಧಾರಣೆಗಳನ್ನು ಅನುಸರಿಸಿರುವುದು ತಿಳಿಯುತ್ತದೆ.

ಈ ರೀತಿಯಾಗಿ ಇಷ್ಟೊಂದು ಮಾಹಿತಿಯನ್ನು ಪ್ರಥಮ ಬಾರಿಗೆ ೭ ಅಧ್ಯಾಯಗಳಲ್ಲಿ ಒಂದೆಡೆಗೆ ತರಲಾಗಿದೆ. ಇಲ್ಲಿ ದೊರೆತಿರುವ ಶಾಸನಗಳ ಆಧಾರದಿಂದ ಇತಿಹಾಸವನ್ನು ರಚಿಸಬಹುದಾಗಿದೆ. ವಿಷಯದ ಸಮರ್ಥನೆಗಾಗಿ ಇಲ್ಲಿ ಸಾಧ್ಯವಾದಷ್ಟು ಪ್ರಯತ್ನಿಸಲಾಗಿದೆ.

ಗ್ರಂಥ ಋಣ

	ಲೇಖಕರ ಹೆಸರು	ಗ್ರಂಥದ ಹೆಸರು	ಪ್ರಕಟಗೊಂಡ ವರ್ಷ
೧)	ಆರ್. ಆರ್. ಮುತಾಲಿಕ	ಹುಕ್ಕೇರಿ ತಾಲೂಕ ದರ್ಶನ	೧೯೮೭
೨)	ಆರ್. ಎಸ್. ಪಂಚಮುಖಿ	ಕರ್ನಾಟಕದ ಶಿಲಾಶಾನಸಗಳು	
೩)	ಕೆಂಪಣ್ಣನವರ ಪಿ.ಜಿ.	ಜೈನ ಕ್ಷೇತ್ರಗಳ ಐತಿಹ್ಯ	೧೯೯೦
೪)	ಚಿದಾನಂದಮೂರ್ತಿ ಎಂ.	ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು	
೫)	ಚಿದಾನಂದಮೂರ್ತಿ ಎಂ.	ಕನ್ನಡ ಶಾಸನಗಳ ಸಂಸ್ಕೃತಿಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು	
೬)	ಡಾ. ಡಿ. ವ್ಹಿ. ಪುರಾಣಿಕ	ನಂದನವನ (ಸಂ) ವಿಜಯ ಪ್ರಿಂಟರ್ಸ್, ಹುಕ್ಕೇರಿ	೧೯೮೩
೭)	ಡಾ. ಶಿ. ಬಾ. ಪಾಟೀಲ	ರಟ್ಟರ ಕಾಲದ ಸಂಸ್ಕೃತಿಕ ಅಧ್ಯಯನ, ಪ್ರಕಟಿತ ಪಿ.ಎಚ್.ಡಿ. ಪ್ರಬಂಧ, ಕವಿವಿ, ಧಾರವಾಡ	೧೯೯೫
೮)	ಡಾ. ಎಸ್. ಎಂ. ಹರದಗಟ್ಟಿ	ಬೆಳಗಾವಿ ಸಿರಿ (ಸಂ) ಸ್ಮರಣ ಸಂಚಿಕೆ	೨೦೦೩
೯)	ಡಾ. ಎಸ್. ಆರ್. ಗುಂಜಾಳ	ಬೆಳಗಾವಿ ಬೆಳಕು (ಸಂ) ಸಂಸ್ಮರಣ ಸಂಪುಟ	೨೦೦೩
೧೦)	ಡಾ. ಗುರುಪಾದ ಮರಿಗುದ್ದಿ	ಪ್ರತಿಭಾವಂತ ಸಂಸದೀಯ ಪಟು, ಪುಸ್ತಕ ಮಾಲಿಕೆ, ಗ್ರಂಥಾಲಯ ಸಮಿತಿ, ವಿಧಾನ ಮಂಡಲ, ವಿಧಾನಸೌದ, ಬೆಂಗಳೂರು	೨೦೦೮
೧೧)	ಡಾ. ಗುರುಪಾದ ಮರಿಗುದ್ದಿ	ಪ್ರತಿಭಾವಂತ ಸಂಸದೀಯ ಪಟು, ಪುಸ್ತಕ ಮಾಲಿಕೆ, ಗ್ರಂಥಾಲಯ ಸಮಿತಿ, ವಿಧಾನ ಮಂಡಲ, ವಿಧಾನಸೌದ, ಬೆಂಗಳೂರು	೨೦೦೮
೧೨)	ಡಾ. ಆರ್. ಸಿ. ಹಿರೇಮಠ ಮತ್ತು ಎಂ. ಎಂ. ಕಲಬುರ್ತಿ	ಕನ್ನಡ ಶಾಸನ ಸಂಪದ	
೧೩)	ಡಾ. ಎಂ. ಚಿದಾನಂದಮೂರ್ತಿ	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ	
೧೪)	ಡಾ. ಎಂ. ಎಂ. ಕಲಬುರ್ಗಿ	ಬಸವಣ್ಣನವರ ಕುರಿತ ಶಾಸನಗಳು	
೧೫)	ಪಿ. ಬಿ. ದೇಸಾಯಿ	ಕನ್ನಡ ನಾಡಿನ ಶಾಸನಗಳು	

೧೬)	ಪ್ರೊ. ಎಲ್.ವ್ಹಿ. ಪಾಟೀಲ ಡಾ. ಗುರುಪಾದ ಮರಿಗುದ್ದಿ	ಅಮ್ಮಣಗಿ ಒಂದು ಅಧ್ಯಯನ, ತ್ವರಿತ ಮುದ್ರಣ ಅಫ್‌ಸೆಟ್ ಪ್ರಿಂಟರ್ಸ್	೨೦೦೫
೧೭)	ಪ್ರೊ. ಎಚ್. ಎಸ್. ಭೀಮನಗೌಡರ ಪ್ರೊ. ಎಲ್. ವ್ಹಿ. ಪಾಟೀಲ ಡಾ. ಜಿ. ಎಸ್. ಮರಿಗುದ್ದಿ	ಸಾರ್ಥಕ (ಸಂ)	೨೦೦೨
೧೮)	ಪಂಚಮುಖಿ ಆರ್.ಎಸ್.	ಕರ್ನಾಟಕ ಇತಿಹಾಸ ಸಂಪುಟ-೧ ಕೆ.ಎಚ್.ಆರ್.ಎಸ್. ಧಾರವಾಡ	೧೯೬೭
೧೯)	ಮನೋಜ ಪಾಟೀಲ	ಬೆಳಗಾವಿ ಜಿಲ್ಲಾ ಮಾರ್ಗದರ್ಶಿ (ಸಂ) ಪವನ ಪ್ರಕಾಶನ, ಟಿಳಕವಾಡಿ, ಬೆಳಗಾವಿ	೧೯೮೭
೨೦)	ಮಿರ್ಜಿ ಅಣ್ಣಾರಾಯ	ಬೆಳಗಾವಿ ಬಳುವಳಿ (ಸಂ) ವಿಜಯಲಕ್ಷ್ಮೀ ಆರ್ಟ್ ಪ್ರಿಂಟರ್ಸ್, ಬೆಳಗಾವಿ	೧೯೭೧
೨೧)	ಕನ್ನಡ ಅಧ್ಯಯನ ಸಂಸ್ಥೆ	ಕನ್ನಡ ವಿಶ್ವಕೋಶ ಸಂಪುಟ ೧೦	೧೯೮೦
೨೨)	ಕನ್ನಡ ಅಧ್ಯಯನ ಸಂಸ್ಥೆ	ಕನ್ನಡ ವಿಶ್ವಕೋಶ ಸಂಪುಟ ೧೨	೧೯೮೬

ಇತಿಹಾಸ

೧) ಎ. ವ್ಹಿ. ನರಸಿಂಹಮೂರ್ತಿ	ಕರ್ನಾಟಕದ ಯಾದವರ ಇತಿಹಾಸ	೧೯೭೧
೨) ಆಲೂರ ವೆಂಕಟರಾವ	ಕರ್ನಾಟಕದ ಗತವೈಭವ	೧೯೨೭
೩) ಕೇಶವ ಭಟ್ಟ ಎಂ.ವ್ಹಿ. ಕೃಷ್ಣರಾವ	ಕರ್ನಾಟಕ ಇತಿಹಾಸ ದರ್ಶನ	೧೯೭೦
೪) ಡಾ. ಸೂರ್ಯನಾಥ ಕಾಮತ	ಕರ್ನಾಟಕದ ಸಂಕ್ಷಿಪ್ತ ಇತಿಹಾಸ	೧೭೭೩

ENGLISH BOOKS

1) Desai P. B.	Jainism in South India and Some Jaina Epigraphs	1957
2) Desai P. B.	Basaveshwar and his times Karnataka Research institute Karnatak University, Dharwad	1968
3) Dr. Suryanath Kamath	Belgaum District Gazetteer	1987
4) Sharma L. P.	Ancient Indian History Konarch Publication, Konarch	1996

ಪತ್ರಿಕೆಗಳು

೧) ಕರ್ನಾಟಕ ಭಾರತಿ, ಸಂಪುಟ : ೯, ಸಂಚಿಕೆ-೪,	೧೯೭೬
೨) ಕರ್ನಾಟಕ ಭಾರತಿ, ಸಂಪುಟ : ೩, ಸಂಚಿಕೆ-ರಾಜ್ಯೋದಯ ಸಂಚಿಕೆ	೧೯೬೯
೩) ಇತಿಹಾಸ ದರ್ಶನ, ಸಂಪುಟ : ೧೧ (ಕರ್ನಾಟಕ ಇತಿಹಾಸ ಅಕ್ಯಾಡಮಿ, ಬೆಂಗಳೂರು)	೧೯೯೬
೪) ಇತಿಹಾಸ ದರ್ಶನ, ಸಂಪುಟ : ೧೪ (ಕರ್ನಾಟಕ ಇತಿಹಾಸ ಅಕ್ಯಾಡಮಿ, ಬೆಂಗಳೂರು)	೧೯೯೬

ಶಾಸನ ಸಂಪುಟಗಳು

೧) ಗೋಪಾಲ ಬಿ.ಆರ್. ಕರ್ನಾಟಕ ಇನ್ಸ್‌ಸ್ಕ್ರಿಪಷ್ಯನ್ಸ, ಸಂಪುಟ-೨೧

೨) Annual Reports on South India Epigraphy Appendix-E 1942-43

೩) Epigraphia Indica Vol-21

ಅನುಬಂಧ ೧

೧) ಬೆಳಗಾವಿ ಜಿಲ್ಲೆಯ ನಕ್ಷೆ

೨) ಹುಕ್ಕೇರಿ ತಾಲೂಕಿನ ನಕ್ಷೆ

೩) ಸಂಕೇಶ್ವರ ಪಟ್ಟಣದ ನಕ್ಷೆ

ಅನುಬಂಧ ೨

೧) ಶಂಕರಲಿಂಗ ದೇವಾಲಯದ ತಲವಿನ್ಯಾಸ

೨) ಪಾರ್ಶ್ವನಾಥ ಬಸದಿಯ ತಲವಿನ್ಯಾಸ

ಅನುಬಂಧ ೩

೧) ಶಂಕರಲಿಂಗ ದೇವಾಲಯದ ಸಭಾಮಂಟಪದ ದಕ್ಷಿಣದ ಚಿಕ್ಕ ಪ್ರವೇಶ ಮಂಟಪದ ಭುವನೇಶ್ವರಿ, ಸಂಕೇಶ್ವರ

೨) ಶಂಕರಲಿಂಗ ದೇವಾಲಯದ ತೆರೆದ ಮುಖಮಂಟಪದ ಛತ್ತು, ಸಂಕೇಶ್ವರ

೩) ಲಕ್ಷ್ಮೀನಾರಾಯಣ ದೇವಾಲಯದ ಸಭಾಮಂಟಪದ ಕಂಭ, ಸಂಕೇಶ್ವರ

೪) ಲಕ್ಷ್ಮೀನಾರಾಯಣ ದೇವಾಲಯದ ಸಭಾಮಂಟಪದ ಭುವನೇಶ್ವರಿ, ಸಂಕೇಶ್ವರ

೫) ಪಾರ್ಶ್ವನಾಥ ಬಸದಿಯ ಭಿತ್ತಿ, ಸಂಕೇಶ್ವರ

ಅನುಬಂಧ ೪

	ಶಿಲ್ಪ	ದೇವಾಲಯ	ಸ್ಥಳ
೧)	ಲಕ್ಷ್ಮೀನಾರಾಯಣ	ಲಕ್ಷ್ಮೀನಾರಾಯಣ ದೇವಾಲಯ	ಸಂಕೇಶ್ವರ
೨)	ಶಾಸನಸುಂದರಿ	ಲಕ್ಷ್ಮೀನಾರಾಯಣ ದೇವಾಲಯ	ಸಂಕೇಶ್ವರ
೩)	ಕೊಳಲೂದುವ ಕೃಷ್ಣ	ಲಕ್ಷ್ಮೀನಾರಾಯಣ ದೇವಾಲಯ	ಸಂಕೇಶ್ವರ
೪)	ಪಾರ್ಶ್ವನಾಥ ವಿಗ್ರಹ	ಪಾರ್ಶ್ವನಾಥ ಬಸದಿ	ಸಂಕೇಶ್ವರ
೫)	ದರ್ಪಣ ಸುಂದರಿ	ಪಾರ್ಶ್ವನಾಥ ಬಸದಿ	ಸಂಕೇಶ್ವರ

ಅನುಬಂಧ ೧


ಬೆಳಗಾವಿ ಜಿಲ್ಲೆಯ ನಕ್ಷೆ



ಹುಕ್ಕೇರಿ ತಾಲೂಕಿನ ನಕ್ಷೆ



ಸಂಕೇಶ್ವರ ಪಟ್ಟಣದ ನಕ್ಷೆ




ಅನುಬಂಧ ೨

ಶಂಕಲಿಂಗ ದೇವಾಲಯದ ತಲವಿನ್ಯಾಸ, ಸಂಕೇಶ್ವರ





ಪಾರ್ಶ್ವನಾಥ ಬಸದಿಯ ತಲವಿನ್ಯಾಸ, ಸಂಕೇಶ್ವರ



ಅನುಬಂಧ ೩

೧)



ಶಂಕರಲಿಂಗ ದೇವಾಲಯದ ಸಭಾ ಮಂಟಪದ ದಕ್ಷಿಣದ ಚಿಕ್ಕ ಪ್ರವೇಶ ಮಂಟಪದ ಭುವನೇಶ್ವರಿ

೨)



ಶಂಕರಲಿಂಗ ದೇವಾಲಯದ ತೆರೆದ ಮುಖ ಮಂಟಪದ ಛತ್ತು





೩)



ಲಕ್ಷ್ಮೀನಾರಾಯಣ ದೇವಾಲಯದ ಸಭಾ ಮಂಟಪದ ಕಂಭ

೪)



ಲಕ್ಷ್ಮೀನಾರಾಯಣ ದೇವಾಲಯದ ಸಭಾ ಮಂಟಪದ ಭುವನೇಶ್ವರಿ





೫)



ಪಾರ್ಶ್ವನಾಥ ಬಸದಿಯ ಭಿತ್ತಿ

ಅನುಬಂಧ ೪

೧)




ಲಕ್ಷ್ಮೀನಾರಾಯಣ ದೇವರ ಮೂರ್ತಿ

೨)



ಲಕ್ಷ್ಮೀನಾರಾಯಣ ದೇವಾಲಯದ ಶಾಸನ ಸುಂದರಿಯ ಶಿಲ್ಪ

೩)



ಲಕ್ಷ್ಮೀನಾರಾಯಣ ದೇವಾಲಯದ ಕೊಳಲೂದುತ್ತಿರುವ ಕೃಷ್ಣನ ಶಿಲ್ಪ





೪)



ಪಾರ್ಶ್ವನಾಥನ ವಿಗ್ರಹ

೫)



ಲಕ್ಷ್ಮೀನಾರಾಯಣ ದೇವಾಲಯದ ದರ್ಪಣ ಸುಂದರಿಯ ಶಿಲ್ಪ